**ಕರ್ನಾಟಕ ಸರ್ಕಾರ**

**ಆಯುಕ್ತರ ಕಚೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ,**

**ನೃಪತುಂಗ ರಸ್ತೆ, ಬೆಂಗಳೂರು – 560 001**

***ಮತ್ತು***

**ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ,**

**ನೃಪತುಂಗ ರಸ್ತೆ, ಬೆಂಗಳೂರು.**

***ಸಹಯೋಗ***

**ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ,**

**ಮಲ್ಲೇಶ್ವರಂ, ಬೆಂಗಳೂರು.**

# ಪ್ರೇರಣೆ

**ಹತ್ತನೆಯ ತರಗತಿ ಫಲಿತಾಂಶ ಉತ್ತಮೀಕರಣಕ್ಕಾಗಿ**

**ಪ್ರಶ್ನೋತ್ತರ ಮಾಲಿಕೆ**

## ತೃತೀಯ ಭಾಷೆ ಕನ್ನಡ

**ಆಯೋಜಕರು**

**ಶ್ರೀ ಮೊಹಮ್ಮದ್ ಮೊಹಸಿನ್,**

**ಆಯುಕ್ತರು,**

**ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು – 560 001.**

**ಪರಿಕಲ್ಪನೆ**

**ಶ್ರೀಮತಿ ಜ್ಹೋಹರಾ ಜಬೀನ್ ಎಂ.**

**ನಿರ್ದೇಶಕರು,**

**ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ,**

**ಆಯುಕ್ತರ ಕಚೇರಿ, ನೃಪತುಂಗ ರಸ್ತೆ, ಬೆಂಗಳೂರು – 560 001.**

## ಸಂಯೋಜಕರು

**ಶ್ರೀಮತಿ ಮಂಜುಳ ಆರ್.**
ಹಿರಿಯ ಸಹಾಯಕ ನಿರ್ದೇಶಕರು,
ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ,

**ಶ್ರೀ ಮರಿಗೌಡ ಬಿ.ಎನ್.**
ಹಿರಿಯ ಸಹಾಯಕ ನಿರ್ದೇಶಕರು,
ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ

## ಸಲಹೆ ಮತ್ತು ಮಾರ್ಗದರ್ಶನ

**ಶ್ರೀಮತಿ ನಾಗರತ್ನ ಎಚ್.**
ಉಪನ್ಯಾಸಕರು
ಸರ್ಕಾರಿ ಶಿಕ್ಷಕ ಶಿಕ್ಷಣ ವಿದ್ಯಾಲಯ,
ಮಂಗಳೂರು.

## ಸಂಪನ್ಮೂಲ ಶಿಕ್ಷಕರು

ಶ್ರೀಮತಿ ಉಮ್ಮಿ ಸಲ್ಮ.
ಕನ್ನಡ ಭಾಷಾ ಶಿಕ್ಷಕರು
ಫಾರೂಖಿಯಾ ಬಾಲಕಿಯರ ಪ್ರೌಢಶಾಲೆ.
ಅಶೋಕ ರಸ್ತೆ, ಲಷ್ಕರ್ ಮೊಹಲ್ಲಾ,
ಮೈಸೂರು.

ಶ್ರೀಮತಿ ಜಯಂತಿ ಕೆ.ಟಿ.
ಕನ್ನಡ ಭಾಷಾ ಶಿಕ್ಷಕರು
ಸರ್ಕಾರಿ ಪದವಿ ಪೂರ್ವ ಕಾಲೇಜು.
ಪೀಪಲ್ಸ್ ಪಾರ್ಕ್, ಮೈಸೂರು.

# ಆಶಯ

**ಆತ್ಮೀಯ ಶಿಕ್ಷಕ ಮಿತ್ರರೇ,**

ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ, ಬೆಂಗಳೂರು, ಇವರು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಬೆಂಗಳೂರು ಇವರ ಸಹಯೋಗದೊಂದಿಗೆ 2014-15 ನೇ ಸಾಲಿನಲ್ಲಿ ಜಾರಿಗೊಂಡ ಹತ್ತನೆಯ ತರಗತಿಯ ನೂತನ ಪಠ್ಯಪುಸ್ತಕವನ್ನು ಆಧರಿಸಿ 2015ರ ಏಪ್ರಿಲ್ ಮಾಹೆಯಲ್ಲಿ ನಡೆಯುವ ನೂತನ ಪರೀಕ್ಷಾ ಪದ್ಧತಿಗೆ ಅನುಗುಣವಾಗಿ ಕಲಿಕಾ ಗುಣಮಟ್ಟ ಮತ್ತು ಸಾರ್ವತ್ರಿಕ ಪರೀಕ್ಷಾ ಫಲಿತಾಂಶ ಉತ್ತಮಪಡಿಸುವ ದೃಷ್ಟಿಯಿಂದ ವಿದ್ಯಾರ್ಥಿಗಳ ಕಲಿಕಾವೇಗವನ್ನು ಗಮನದಲ್ಲಿಟ್ಟುಕೊಂಡು ಎಲ್ಲಾ ಭಾಷೆಗಳು ಮತ್ತು ಕೋರ್ ವಿಷಯಗಳಲ್ಲಿ ಕಲಿಕೆಗೆ ಸಹಾಯಕವಾಗುವಂತೆ ಪ್ರಶ್ನೋತ್ತರ ಮಾಲಿಕೆಗಳನ್ನು ರಚಿಸಿದ್ದಾರೆ. ಇದನ್ನು ರಾಜ್ಯದ ವಿವಿಧ ಜಿಲ್ಲೆಗಳ ಪ್ರೌಢಶಾಲೆಗಳ ಕರ್ತವ್ಯನಿರತ ವಿಷಯವಾರು ಆಯ್ದ ಸಂಪನ್ಮೂಲ ಶಿಕ್ಷಕರು ಸಿದ್ಧಪಡಿಸಿದ್ದಾರೆ.ರಾಜ್ಯದ ಎಲ್ಲಾ ಶಾಲೆಗಳ ಮುಖ್ಯಶಿಕ್ಷಕರು ಮತ್ತು ವಿಷಯವಾರು ಶಿಕ್ಷಕರು ಇದರ ಸಂಪೂರ್ಣ ಪ್ರಯೋಜನವನ್ನು ಪಡೆದುಕೊಳ್ಳುವ ಮೂಲಕ ವಿದ್ಯಾರ್ಥಿಗಳ ಪುರೋಭಿವೃದ್ಧಿಗೆ ಶ್ರಮಿಸುವುದು. ಈ ಕಿರು ಹೊತ್ತಗೆಗಳನ್ನು ಹೊರತರಲು ಶ್ರಮಿಸಿದ ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯದ ನಿರ್ದೇಶಕರು ಮತ್ತು ಅವರ ಕಾರ್ಯಾಲಯದ ಸಿಬ್ಬಂದಿ ವರ್ಗದವರಿಗೆ ಈ ಕಾರ್ಯದ ಸಫಲತೆಗಾಗಿ ಶ್ಲಾಘನೆಗಳು ಸಲ್ಲುತ್ತವೆ.

**ಶ್ರೀ ಮೊಹಮ್ಮದ್ ಮೊಹಸಿನ್**
**ಆಯುಕ್ತರು,**
**ಸಾರ್ವಜನಿಕ ಶಿಕ್ಷಣ ಇಲಾಖೆ**

ಆಯುಕ್ತರ ಕಚೇರಿ, ನೃಪತುಂಗ ರಸ್ತೆ, ಬೆಂಗಳೂರು – 560 001.

.

# ಮುನ್ನುಡಿ

**ಆತ್ಮೀಯ ಶಿಕ್ಷಕ ಮಿತ್ರರೇ,**

ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯವು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಬೆಂಗಳೂರು ಇವರ ಸಹಯೋಗದೊಂದಿಗೆ ಹತ್ತನೆಯ ತರಗತಿಯ ಕಲಿಕೆಯನ್ನು ಗುಣಾತ್ಮಕವಾಗಿ ಉತ್ತಮಪಡಿಸುವ ಸಲುವಾಗಿ ಹಾಗೂ ಎಸ್.ಎಸ್.ಎಲ್.ಸಿ.ಪರೀಕ್ಷೆಯ ಫಲಿತಾಂಶವನ್ನು ಉನ್ನತೀಕರಿಸುವ ದೃಷ್ಟಿಯಿಂದ ಎಲ್ಲಾ ಭಾಷೆಗಳು ಮತ್ತು ಕೋರ್ ವಿಷಯಗಳಲ್ಲಿ ವಿದ್ಯಾರ್ಥಿಗಳ ಕಲಿಕಾ ವೇಗವನ್ನು ಅನುಸರಿಸಿ, ಕಲಿಕೆಗೆ ಸಹಾಯಕವಾಗುವಂತೆ ಪ್ರಶ್ನೋತ್ತರ ಮಾಲಿಕೆಗಳನ್ನು ರಚಿಸಿದೆ.ಇದನ್ನು ರಾಜ್ಯದ ವಿವಿಧ ಜಿಲ್ಲೆಗಳ ಪ್ರೌಢಶಾಲೆಗಳ ಕರ್ತವ್ಯನಿರತ ವಿಷಯವಾರು ಆಯ್ದ ಸಂಪನ್ಮೂಲ ಶಿಕ್ಷಕರಿಂದ ಸಿದ್ಧಪಡಿಸಲಾಗಿದೆ.ಈ ಕಲಿಕಾ ಸಹಾಯಕಗಳನ್ನು ಶಿಕ್ಷಕರು ಪಠ್ಯಪುಸ್ತಕಗಳಿಗೆ ಪೂರಕವಾಗಿ ಬಳಸಿಕೊಂಡು ವಿದ್ಯಾರ್ಥಿಗಳ ಯಶಸ್ಸಿಗೆ ಕಾರ್ಯಪ್ರವೃತ್ತರಾಗಬೇಕೆಂಬುದು ನಮ್ಮ ಆಶಯವಾಗಿದೆ.ರಾಜ್ಯದ ಎಲ್ಲಾ ಶಾಲೆಗಳ ಮುಖ್ಯಶಿಕ್ಷಕರು ಮತ್ತು ವಿಷಯವಾರು ಶಿಕ್ಷಕರು ಇದರ ಸಂಪೂರ್ಣ ಪ್ರಯೋಜನವನ್ನು ಪಡೆದುಕೊಳ್ಳುವ ಮೂಲಕ ವಿದ್ಯಾರ್ಥಿಗಳ ಉತ್ತಮ ಫಲಿತಾಂಶಕ್ಕಾಗಿ ಶ್ರಮಿಸುವುದು. ಈ ಕಾರ್ಯದಲ್ಲಿ ಪಾಲ್ಗೊಂಡು ಕಿರು ಹೊತ್ತಗೆಗಳನ್ನು ಹೊರತರಲು ಶ್ರಮಿಸಿದ ಎಲ್ಲಾ ಅಧಿಕಾರಿವರ್ಗದವರಿಗೂ, ಸರ್ಕಾರಿ ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯಗಳ ಪ್ರವಾಚಕರಿಗೂ, ಉಪನ್ಯಾಸಕ ವರ್ಗದವರಿಗೂ, ಸಂಪನ್ಮೂಲ ಶಿಕ್ಷಕರು ಮತ್ತು ಸಿಬ್ಬಂದಿ ವರ್ಗದವರಿಗೂ ಹೃತ್ಪೂರ್ವಕ ಧನ್ಯವಾದಗಳು.

**ಶ್ರೀಮತಿ ಜ಼ೋಹರಾ ಜಬೀನ್ ಎಂ.**

**ನಿರ್ದೇಶಕರು,**

**ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ,**

**ಆಯುಕ್ತರ ಕಚೇರಿ, ನೃಪತುಂಗ ರಸ್ತೆ, ಬೆಂಗಳೂರು – 560 001.**

.

# ಸೂಚನೆಗಳು

- ಕಾರ್ಯಕ್ರಮವನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ತಮ್ಮೆಲ್ಲರ ಸಹಕಾರ ಅತ್ಯಗತ್ಯ. ಅದಕ್ಕಾಗಿ ನೀಡಿರುವ **'ಪ್ರೇರಣೆ', 'ಪ್ರಗತಿ', ಹಾಗೂ 'ಪ್ರತಿಭೆ'** ಎಂಬ ಹೊತ್ತಗೆಗಳನ್ನು ಶಿಕ್ಷಕರು ಓದಿ ಮನನ ಮಾಡಿಕೊಳ್ಳುವುದು.

- ವಿದ್ಯಾರ್ಥಿಗಳನ್ನು ಅವರ ಕಲಿಕಾ ವೇಗದ ಸಾಮರ್ಥ್ಯಕ್ಕೆ ಅನುಗುಣವಾಗಿ
  (1) ನಿಧಾನ ಗತಿಯಲ್ಲಿ ಕಲಿಯುವವರು,
  (2) ಸಾಧಾರಣ ವೇಗದಲ್ಲಿ ಕಲಿಯುವವರು ಮತ್ತು
  (3) ಶೀಘ್ರಗತಿಯಲ್ಲಿ ಸವಾಲಿನೊಂದಿಗೆ ಕಲಿಯುವವರು
  ಎಂದು ಮೂರು ಗುಂಪುಗಳಾಗಿ ವಿಂಗಡಿಸಿಕೊಳ್ಳುವುದು.

- ನಿಧಾನ ಗತಿಯಲ್ಲಿ ಕಲಿಯುವವರಿಗೆ ನಿಗದಿತ ಸಮಯದಲ್ಲಿ ಪರೀಕ್ಷೆಯನ್ನು ಎದುರಿಸಲು ಪಠ್ಯಾಂಶದಲ್ಲಿ ಅತಿಮುಖ್ಯವೆನಿಸಿದ ಕೆಲವೇ ಅಂಶಗಳನ್ನು **'ಪ್ರೇರಣೆ'** ಕಲಿಕಾ ಸಹಾಯಕದಲ್ಲಿ ಸಂಗ್ರಹಿಸಿದ್ದು, ಅವುಗಳನ್ನು ಮೊದಲು ಕಲಿಯುಂತೆ ಮಾಡುವುದು.

- ಸಾಧಾರಣ ವೇಗದಲ್ಲಿ ಕಲಿಯುವವರಿಗೆ ಮೊದಲು **'ಪ್ರೇರಣೆ'** ಕಲಿಕಾ ಸಹಾಯಕದ ಪಠ್ಯಾಂಶಗಳನ್ನು ಕಲಿಸಿ, ನಂತರದಲ್ಲಿ **'ಪ್ರಗತಿ'** ಹಾಗೂ ಕೊನೆಯಲ್ಲಿ **'ಪ್ರತಿಭೆ'** ಕಲಿಕಾ ಸಹಾಯಕದ ಪಠ್ಯಾಂಶಗಳ ಹೆಚ್ಚಿನ ಕಲಿಕೆಗೆ ಅವಕಾಶ ಮಾಡಿಕೊಡುವುದು.

- ಶೀಘ್ರಗತಿಯಲ್ಲಿ ಸವಾಲಿನೊಂದಿಗೆ ಕಲಿಯುವವರಿಗೆ ಮೊದಲು **'ಪ್ರೇರಣೆ'** ಹಾಗೂ **'ಪ್ರಗತಿ'** ಕಲಿಕಾ ಸಹಾಯಕದ ಪಠ್ಯಾಂಶಗಳನ್ನು ಕಲಿಸಿ, ನಂತರದಲ್ಲಿ **'ಪ್ರತಿಭೆ'** ಕಲಿಕಾ ಸಹಾಯಕದ ಪಠ್ಯಾಂಶಗಳ ಹೆಚ್ಚು ಹೆಚ್ಚಿನ ಕಲಿಕೆಗೆ ಅವಕಾಶ ಮಾಡಿಕೊಡುವುದು.

- ಈ ಕಲಿಕಾ ಸಹಾಯಕಗಳ ಪಠ್ಯಾಂಶಗಳನ್ನು ಶಾಲಾವಧಿಯ ಪೂರ್ವದ ವಿಶೇಷ ತರಗತಿ ಮತ್ತು ಶಾಲಾವಧಿಯ ನಂತರದ ವಿಶೇಷ ತರಗತಿಗಳಲ್ಲಿ ಸತತ ಅಭ್ಯಾಸ ಮಾಡಿಸುವುದು.

- ನಿಗದಿತ ವೇಳಾಪಟ್ಟಿಯಂತೆ ತರಗತಿಯ ಅವಧಿಗಳಲ್ಲಿ ವಾರ್ಷಿಕ ಪಾಠಯೋಜನೆಯಂತೆ ಕಲಿಕಾ ಮತ್ತು ಬೋಧನಾ ಚಟುವಟಿಕೆಗಳನ್ನು ನಡೆಸುವುದು.

- ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕ ಓದುವ ಅಭ್ಯಾಸವನ್ನು ಕಡ್ಡಾಯವಾಗಿ ರೂಢಿಸುವುದು.

- ನಿರಂತರ ಅಭ್ಯಾಸ ಮತ್ತು ಪುನರವಲೋಕನಕ್ಕೆ ಹೆಚ್ಚು ಒತ್ತು ನೀಡುವುದು.

- **'ಪ್ರೇರಣೆ', 'ಪ್ರಗತಿ', ಹಾಗೂ 'ಪ್ರತಿಭೆ'** ಇವುಗಳು ಕೇವಲ ಕಲಿಕಾ ಸಹಾಯಕಗಳೇ ಹೊರತು ಪರೀಕ್ಷಾ ತಯಾರಿಕೆಗೆ ಅಂತಿಮವಲ್ಲ ಎಂಬುದು ಗಮನಿಸಬೇಕಾದ ಅಂಶ.

## ಒಂದೊಂದು ವಾಕ್ಯದಲ್ಲಿ ಉತ್ತರಿಸಿ.

**ಗದ್ಯಪಾಠ – 1.**

**ಲಾಕಪ್ಪಿನಲ್ಲಿ ಒಂದು ರಾತ್ರಿ** **ಲೇ.ಗೊ.ರಾ. ಅಯ್ಯಂಗಾರ್**

1. **ಲೇಖಕರು ಮಿತ್ರನನ್ನು ನೋಡಲು ಎಲ್ಲಿಗೆ ಹೋಗಿದ್ದರು?**
   ಅಮೆರಿಕದ ಮಿನಿ ಪೊಲೀಸ್ ನಗರಕ್ಕೆ ಹೋಗಿದ್ದರು.
2. **ಲೇಖಕರ ಜೇಬಿನಲ್ಲಿ ಏನು ಇತ್ತು?**
   ಲೇಖಕರ ಜೇಬಿನಲ್ಲಿ ಒಂದು ರಿಟರ್ನ್ ಟಿಕೆಟ್ ಮತ್ತು ಎರಡು ಡಾಲರ್ ಮಾತ್ರವಿತ್ತು.
3. **ಲೇಖಕರು ತಮ್ಮ ಸಮಸ್ಯೆಯನ್ನು ಯಾರ ಬಳಿ ಹೇಳಿಕೊಂಡರು?**
   ಲೇಖಕರು ತಮ್ಮ ಸಮಸ್ಯೆಯನ್ನು ಟ್ರಾಫಿಕ್ ಪೊಲೀಸಿನವನ ಬಳಿ ಹೇಳಿಕೊಂಡರು.
4. **ಪೊಲೀಸಿನವನ ಮನೆಯಲ್ಲಿ ರಾತ್ರಿ ಲೇಖಕರಿಗೆ ದೊರೆತ ಊಟವೇನು?**
   ಬ್ರೆಡ್, ಹಾಲು, ಹಣ್ಣು, ಬಿಸ್ಕತ್‌ಗಳು ಲೇಖಕರಿಗೆ ರಾತ್ರಿ ಊಟವಾಗಿ ದೊರೆಯಿತು.

**ಪದ್ಯಪಾಠ – 2.**

**ಕೋಗಿಲೆ** **ಚೆನ್ನವೀರಕಣವಿ**

1. **ಕೋಗಿಲೆಯ ಕಂಠ ಹೇಗಿದೆ?**
   ಕೋಗಿಲೆಯ ಕಂಠ ಮಧುರವಾಗಿದೆ.
2. **ಜಗತ್ತಿನ ಸಂತೋಷವು ಕೋಗಿಲೆಯಲ್ಲಿ ಒಮ್ಮೆಲೆ ಏನಾಗಿದೆ?**
   ಜಗತ್ತಿನ ಸಂತೋಷವು ಕೋಗಿಲೆಯಲ್ಲಿ ಒಮ್ಮೆಲೆ ಮುದದ ಗಾನವಾಗಿದೆ.
3. **ಕೋಗಿಲೆಯು ಸುಮಧುರವಾಗಿ ಎಲ್ಲಿ ಕುಳಿತು ಹಾಡುತ್ತಿದೆ?**
   ಕೋಗಿಲೆಯು ಸುಮಧುರವಾಗಿ ಮಾಮರದ ಮೇಲೆ ಕುಳಿತು ಹಾಡುತ್ತಿದೆ.
4. **ಕೋಗಿಲೆಯ ಗಾನವನ್ನು ಕೇಳಿ ಮೂಕವಾದದ್ದು ಏನು?**
   ಕೋಗಿಲೆಯ ಗಾನವನ್ನು ಕೇಳಿ ಮೂಕವಾದದ್ದು ಮನಸ್ಸು.
5. **ಕೋಗಿಲೆಯ ಗಾನವು ಮನಜಲೋಕವನ್ನು ಏನಾಗಿ ಪರಿವರ್ತಿಸಿದೆ?**
   ಕೋಗಿಲೆಯ ಗಾನವು ಮನುಜಲೋಕವನ್ನು ದೇವಲೋಕವಾಗಿ ಪರಿವರ್ತಿಸಿದೆ.

**ಗದ್ಯ ಪಾಠ – 3.**

**ಕರ್ನಾಟಕತ್ವ** **ಜೆ.ಪಿ.ರಾಜರತ್ನಂ**

1. **ತನ್ನ ಕಾಲದ ಕನ್ನಡ ರಾಜ್ಯವನ್ನು ವರ್ಣಿಸಿದ ದೊರೆ ಯಾರು?**
   ತನ್ನ ಕಾಲದ ಕನ್ನಡ ರಾಜ್ಯವನ್ನು ವರ್ಣಿಸಿದ ದೊರೆ ನೃಪತುಂಗ.
2. **'ಅಷ್ಟಾದಶಾಕ್ಷರೀ' ಮಂತ್ರವು ಯಾವುದು?**
   "ವಸುಧಾವಳಯ ವಿಲೀನ ವಿಶದ ವಿಷಯವಿಶೇಷಂ" ಎಂಬುದು ಅಷ್ಟಾದಶಾಕ್ಷರೀ ಮಂತ್ರ
3. **ಕನ್ನಡಮೆನಿಪ್ಪನಾಡು ಎಂದರೇನು?**
   ಕನ್ನಡಮೆನಿಪ್ಪನಾಡು ಎಂದರೆ – ಕನ್ನಡ ಎಂಬ ನಾಡು.
4. **ನಮ್ಮ ಭೂಮಿಯ ಒಂದು ಅವಿಭಾಜ್ಯ ಅಂಗ ಯಾವುದು?**
   ನಮ್ಮ ಭೂಮಿಯ ಒಂದು ಅವಿಭಾಜ್ಯ ಅಂಗ 'ವಸು' ಎಂದರೆ 'ಚಿನ್ನ' ಎಂದು ಅರ್ಥ.
5. **ಹಿಂದಿನ ಕರ್ನಾಟಕದ ಜನ ತಮ್ಮ ದೇಶವನ್ನು ದೊಡ್ಡದೆನಿಸಿದ್ದು ಹೇಗೆ?**
   ತಮ್ಮ ಅನನ್ಯವಾದ ಗುಣದಿಂದ ತಮ್ಮ ದೇಶವನ್ನು ದೊಡ್ಡದೆನಿಸಿದ್ದರು.
6. **ಕರ್ನಾಟಕದ ವಿಶಿಷ್ಟ ಗುಣ ಯಾವುದು?**
   ಕರ್ನಾಟಕದ ವಿಶಿಷ್ಟ ಗುಣ ಅಲ್ಲಿನ 'ಜನರ ಭಾಷಾ ಸಾಮರಸ್ಯ'

**ಪದ್ಯ – 4**

**ಒಂದೇ ಭೂಮಿತಾಯ ಕುಡಿಗಳು** **ಕೆ.ಎಸ್. ನಿಸಾರ್ ಅಹ್ಮದ್**

1. **ಯಾರು ಯಾರು ಒಂದೇ?**
   ನಾವು ನೀವು ಅವರು ಇವರು ಒಂದೇ.
2. **ಯಾರು ಯಾರಲ್ಲಿ ಹರಿವ ನೆತ್ತರೊಂದೆ?**
   ಆಂಗ್ಲ ಆಫ್ರಿಕನ್ನರಲ್ಲಿ ಹರಿವ ನೆತ್ತರೊಂದೆ ಆಗಿದೆ.
3. **ಯಾವ ಯಾವ ಬೆಳಕಿನ ಸತ್ವ ಒಂದೆ ಎಂದು ಕವಿ ಹೇಳಿದ್ದಾರೆ?**
   ಬಾಣ, ಬಿರುಸು, ಕುಂಡ, ಹಣತೆ ಬೆಳಕಿನ ಸತ್ವ ಒಂದೆ ಎಂದು ಕವಿ ಹೇಳಿದ್ದಾರೆ.

**ಗದ್ಯಪಾಠ – 5.**

**ಸ್ಪಿನ್ ಮಾಂತ್ರಿಕ ಅನಿಲ್ ಕುಂಬ್ಳೆ** **ಸಂಪಾದಿತ**

1. **ಅನಿಲ್ ಕುಂಬ್ಳೆ ಅವರು ಕ್ರಿಕೆಟ್ ಕಲಿತ ಸಂಸ್ಥೆ ಯಾವುದು?**
   ಅನಿಲ್ ಕುಂಬ್ಳೆ ಅವರು ಕ್ರಿಕೆಟ್ ಕಲಿತ ಸಂಸ್ಥೆ "ಬೆಂಗಳೂರಿನ ಯಂಗ್ ಕ್ರಿಕೆಟರ್ಸ್" ಎಂಬುದು.
2. **ಅನಿಲ್ ಕುಂಬ್ಳೆಯವರು ಪ್ರೌಢಶಾಲಾ ವಿದ್ಯಾಭ್ಯಾಸ ಎಲ್ಲಿ ನಡೆಯಿತು?**
   ಬೆಂಗಳೂರಿನ ನ್ಯಾಷನಲ್ ಹೈಸ್ಕೂಲಿನಲ್ಲಿ ಪ್ರೌಢಶಾಲಾ ವಿದ್ಯಾಭ್ಯಾಸ ನಡೆಯಿತು.
3. **ಅನಿಲ್ ಕುಂಬ್ಳೆ ಅವರು ತೇರ್ಗಡೆಯಾದ ಉನ್ನತ ಪದವಿ ಯಾವುದು?**
   ಅನಿಲ್ ಕುಂಬ್ಳೆ ಅವರು ತೇರ್ಗಡೆಯಾದ ಉನ್ನತ ಪದವಿ ಮೆಕ್ಯಾನಿಕಲ್ ಇಂಜಿನಿಯರಿಂಗ್ ಪದವಿ.
4. **ಕುಂಬ್ಳೆಯವರು ಭಾರತೀಯ ಕ್ರಿಕೆಟ್ ತಂಡಕ್ಕೆ ಆಯ್ಕೆ ಆದದ್ದು ಯಾವಾಗ?**
   ಕುಂಬ್ಳೆಯವರು ಭಾರತೀಯ ಕ್ರಿಕೆಟ್ ತಂಡಕ್ಕೆ ಆಯ್ಕೆ ಆದದ್ದು 1990 ರಲ್ಲಿ.
5. **ಕುಂಬ್ಳೆಯವರು ಟೆಸ್ಟಿನಲ್ಲಿ ಶತಕ ಗಳಿಸಿ ಔಟಾಗದೆ ಉಳಿದದ್ದು ಯಾವ ತಂಡದ ವಿರುದ್ಧ?**
   ಕುಂಬ್ಳೆಯವರು ಟೆಸ್ಟಿನಲ್ಲಿ ಶತಕ ಗಳಿಸಿ ಔಟಾಗದೆ ಉಳಿದದ್ದು ಇಂಗ್ಲೆಂಡ್ ತಂಡದ ವಿರುದ್ಧದ ಟೆಸ್ಟ್ ಪಂದ್ಯದಲ್ಲಿ.
6. **ಕುಂಬ್ಳೆ ಅವರು ಟೆಸ್ಟ್ ಕ್ರಿಕೆಟ್‌ನ ಒಂದೆ ಇನ್ನಿಂಗ್ಸ್‌ನಲ್ಲಿ ಎಲ್ಲ ಹತ್ತು ವಿಕೆಟ್‌ಗಳನ್ನು ಪಡೆದದ್ದು ಯಾವ ತಂಡದ ಎದುರಿಗೆ?**
   ಕುಂಬ್ಳೆ ಅವರು ಟೆಸ್ಟ್ ಕ್ರಿಕೆಟ್‌ನ ಒಂದೆ ಇನ್ನಿಂಗ್ಸ್‌ನಲ್ಲಿ ಎಲ್ಲ ಹತ್ತು ವಿಕೆಟ್‌ಗಳನ್ನು ಪಡೆದದ್ದು ಪಾಕಿಸ್ತಾನ ತಂಡದ ಎದುರಿಗೆ ದೆಹಲಿಯ ಫಿರೋಜ್ ಷಾ ಕೋಟ್ಲ ಮೈದಾನದಲ್ಲಿ.
7. **ಕುಂಬ್ಳೆಯವರು ಅಂತರರಾಷ್ಟ್ರೀಯ ಕ್ರಿಕೆಟ್‌ನಿಂದ ನಿವೃತ್ತರಾದದ್ದು ಯಾವಾಗ?**
   2008 ರಲ್ಲಿ ಕುಂಬ್ಳೆಯವರು ಅಂತರರಾಷ್ಟ್ರೀಯ ಕ್ರಿಕೆಟ್‌ನಿಂದ ನಿವೃತ್ತರಾದದ್ದು.
8. **ನಿವೃತ್ತಿಯ ನಂತರವೂ ಕುಂಬ್ಳೆ ಅವರು ಕ್ರಿಕೆಟ್ ಸಂಪರ್ಕವನ್ನು ಹೇಗೆ ಉಳಿಸಿಕೊಂಡಿದ್ದಾರೆ?**
   ನಿವೃತ್ತಿಯ ನಂತರವೂ ಕುಂಬ್ಳೆ ಅವರು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ಚುನಾಯಿತ ಅಧ್ಯಕ್ಷರಾಗಿ ಕ್ರಿಕೆಟ್‌ನ ವಿಶಾಲ ಕ್ಷೇತ್ರದ ಸೇವೆಯಲ್ಲಿ ತೊಡಗಿರುವುದರ ಮೂಲಕ ಸಂಪರ್ಕವನ್ನು ಉಳಿಸಿಕೊಂಡಿದ್ದಾರೆ.

**ಪದ್ಯ – 6**

**ಮಾಯಾದೀಪ** **ಬಿ.ಆರ್. ಲಕ್ಷ್ಮಣರಾವ್**

1. **ಅಕ್ಷರವನ್ನು ವಶಪಡಿಸಿಕೊಂಡರೆ ಆಗುವ ಲಾಭವೇನು?**
   ಅಕ್ಷರವನ್ನು ವಶಪಡಿಸಿಕೊಂಡರೆ ಹೊಸ ಜೀವನ, ಹೊಸರೂಪ ಸಿಗುವುದು.
2. **ಸರ್ವಶಕ್ತಿದೂತ ಯಾವಾಗ ಅವತರಿಸುವನು?**
   ದೀಪವನ್ನು ಉಜ್ಜಿದರೆ ಸರ್ವಶಕ್ತಿದೂತ ಅವತರಿಸುವನು.
3. **ನಮ್ಮ ಕಷ್ಟಕಾರ್ಪಣ್ಯ ಯಾರ (ಯಾವುದರ) ನೆರವಿನಿಂದ ದೂರವಾಗುತ್ತದೆ?**
   ಸರ್ವಶಕ್ತಿದೂತನ ನೆರವಿನಿಂದ ನಮ್ಮ ಕಷ್ಟ ಕಾರ್ಪಣ್ಯ ದೂರವಾಗುತ್ತದೆ.
4. **ದಾಸ್ಯ ಸಂಕೋಲೆ ಕಳಚಿ ಬಿದ್ದರೆ ನಾವು ಏನಾಗುತ್ತೇವೆ?**
   ದಾಸ್ಯ ಸಂಕೋಲೆ ಕಳಚಿ ಬಿದ್ದರೆ ನಾವು ಹೊಸ ಮನುಷ್ಯರಾಗುತ್ತೇವೆ.
5. **ದೇಶದ ಪ್ರಗತಿ ನಮ್ಮಿಂದ ಯಾವಾಗ ಸಾಧ್ಯವಾಗುತ್ತದೆ?**

ನಮ್ಮ ಶಕ್ತಿ ನಮ್ಮ ಬೆನ್ನೆಲುಬು ಆದಾಗ ಈ ದೇಶದ ಪ್ರಗತಿ ಸಾಧ್ಯವಾಗುತ್ತದೆ.

## ಗದ್ಯಪಾಠ – 7

**ಧ್ವಜ ರಕ್ಷಣೆ (ನಾಟಕ)** **ಲೇ. ಎಸ್. ಆರ್.ರೋಹಿಡೇಕರ್**

1. **ಚಲೇ ಜಾವ್ ಚಳವಳಿ ಯಾವಾಗ ನಡೆಯಿತು?**
   ಚಲೇ ಜಾವ್ ಚಳವಳಿ 1942ರಲ್ಲಿ ನಡೆಯಿತು.
2. **ಯಾವ ಊರಿನಲ್ಲಿ ಈ ಘಟನೆ ನಡೆಯಿತು?**
   ಮೋಹನ ಪುರ ಎಂಬ ಊರಿನಲ್ಲಿ ಈ ಘಟನೆ ನಡೆಯಿತು.
3. **ರಾಮ್‌ಸಿಂಗ್ ಯಾರು?**
   ರಾಮ್‌ಸಿಂಗ್ ಒಬ್ಬ ಸ್ವಾತಂತ್ರ್ಯ ಹೋರಾಟಗಾರ.
4. **ರಾಮ್‌ಸಿಂಗ್‌ನ ತಾಯಿಯ ಹೆಸರೇನು?**
   ರಾಮ್‌ಸಿಂಗ್‌ನ ತಾಯಿಯ ಹೆಸರು ತುಳಜಾಬಾಯಿ.
5. **ಇಬ್ಬರು ಪೊಲೀಸಿನವರ ಜತೆ ಸೇರಿದ ಅಧಿಕಾರಿ ಯಾರು?**
   ಇಬ್ಬರು ಪೊಲೀಸಿನವರ ಜತೆ ಸೇರಿದ ಅಧಿಕಾರಿ ಮಿ॥ ಕುಲಕರ್ಣಿ.
6. **ಸತ್ಯಾಗ್ರಹಿಗಳನ್ನು ಚದುರಿಸಲು ಕುಲಕರ್ಣಿಯವರು ಏನು ಮಾಡಿದರು?**
   ಸತ್ಯಾಗ್ರಹಿಗಳನ್ನು ಚದುರಿಸಲು ಕುಲಕರ್ಣಿಯವರು ಗಾಳಿಯಲ್ಲಿ ಗುಂಡು ಹಾರಿಸಿದರು.

## ಪದ್ಯ – 8

**ವಚನ** **– ಅಂಬಿಗರ ಚೌಡಯ್ಯ**

1. **ಬಡತನಕ್ಕೆ ಯಾವ ಚಿಂತೆ?**
   ಬಡತನಕ್ಕೆ ಉಣ್ಣುವ ಚಿಂತೆ.
2. **ಇಡಲಾದರೆ ಚಿಂತೆ ಯಾರದು?**
   ಇಡಲಾದರೆ ಹೆಂಡಿರ ಚಿಂತೆ.
3. **ಮಕ್ಕಳಾದರೆ ಯಾವ ಚಿಂತೆ?**
   ಮಕ್ಕಳಾದರೆ ಬದುಕಿನ ಚಿಂತೆ.
4. **ಕೇಡಾದರೆ ಏನಾಗುತ್ತದೆ?**
   ಕೇಡಾದರೆ ಮರಣದ ಚಿಂತೆ.

## ಗದ್ಯ – 9

**ಕರ್ನಾಟಕದ ವೀರ ವನಿತೆಯರು** **ಲೆ. ಡಾ॥ ವಿಜಯಲಕ್ಷ್ಮಿ ಬಾಳೇಕುಂದ್ರಿ**

1. **ಪೋರ್ಚುಗೀಸರು ಭಾರತಕ್ಕೆ ಬಂದದ್ದೇಕೆ?**
   ಪೋರ್ಚುಗೀಸರು ಭಾರತಕ್ಕೆ ವ್ಯಾಪಾರಕ್ಕಾಗಿ ಬಂದರು.
2. **ರಾಣಿ ಅಬ್ಬಕ್ಕದೇವಿ ಯುದ್ಧದಲ್ಲಿ ಹೋರಾಡಿ ಯಾರನ್ನು ಸೋಲಿಸಿದಳು?**
   ರಾಣಿ ಅಬ್ಬಕ್ಕದೇವಿ ಯುದ್ಧದಲ್ಲಿ ಹೋರಾಡಿ ಪೋರ್ಚುಗೀಸರನ್ನು ಸೋಲಿಸಿದಳು.
3. **ಬೆಳವಡಿ ಮಲ್ಲಮ್ಮ ಯಾರೊಡನೆ ಹೋರಾಡಿ ಗೆಲುವು ಗಳಿಸಿ ವೈರಿ ಕ್ಷಮೆ ಯಾಚಿಸುವಂತೆ ಮಾಡಿದಳು?**
   ಬೆಳವಡಿ ಮಲ್ಲಮ್ಮ ಶಿವಾಜಿಯೊಡನೆ ಹೋರಾಡಿ ಗೆಲುವು ಗಳಿಸಿದಳು.ಶಿವಾಜಿ ಬಂದು ಕ್ಷಮೆ ಯಾಚಿಸುವಂತೆ ಮಾಡಿದಳು.
4. **ಸನ್ಯಾಸಿ ವೇಷ ಧರಿಸಿದ ಸರದಾರನ ಹೆಸರೇನು?**
   ಸನ್ಯಾಸಿ ವೇಷ ಧರಿಸಿದ ಸರದಾರನ ಹೆಸರು 'ಶಾಂತಯ್ಯ'.
5. **ಯಾವ ವಿಚಾರಕ್ಕಾಗಿ ಈಶಪ್ರಭುವು ಹೆಂಡತಿಯಿಂದ ಪ್ರಮಾಣ ಮಾಡಿಸಿಕೊಂಡನು?**
   ಶಿವಾಜಿಯನ್ನು ಸೋಲಿಸಲೇಬೇಕೆಂಬ ವಿಚಾರಕ್ಕಾಗಿ ಈಶಪ್ರಭುವು ಹೆಂಡತಿಯಿಂದ ಪ್ರಮಾಣ ಮಾಡಿಸಿಕೊಂಡನು.
6. **ಕೆಳದಿ ಚೆನ್ನಮ್ಮ ತನ್ನ ರಾಜಧಾನಿಯನ್ನು ಭುವನಗಿರಿಗೆ ಏಕೆ ಸ್ಥಳಾಂತರಿಸಿದಳು?**
   ಶಿವಾಜಿಯ ಮಗ ರಾಜಾರಾಮನಿಗೆ ಆಶ್ರಯವನ್ನು ನೀಡುವುದಲ್ಲದೆ ಔರಂಗಜೇಬನನ್ನು ಸೋಲಿಸಲು ಚೆನ್ನಮ್ಮ ತನ್ನ ರಾಜಧಾನಿಯನ್ನು ಭುವನಗಿರಿಗೆ ಸ್ಥಳಾಂತರಿಸಿದಳು.

7. **ಔರಂಗಜೇಬನು ಯುದ್ಧವನ್ನೇ ಮಾಡದೆ ಯಾರಿಗೆ ಸೋತನು?**
   ಔರಂಗಜೇಬನು ಯುದ್ಧವನ್ನೇ ಮಾಡದೆ ರಾಣಿ ಚೆನ್ನಮ್ಮನಿಗೆ ಸೋತನು.
8. **ಕಿತ್ತೂರ ಚೆನ್ನಮ್ಮ ಯಾರ ವಿರುದ್ಧ ಹೋರಾಡಿದಳು?**
   ಕಿತ್ತೂರ ಚೆನ್ನಮ್ಮ ಬ್ರಿಟಿಷರ ವಿರುದ್ಧ ಹೋರಾಡಿದಳು.
9. **ಕೆಳದಿಯ ರಾಣಿ ಯುದ್ಧದಲ್ಲಿ ಸೋಲಿಸಿದ ಮೊಗಲ್ ಚಕ್ರವರ್ತಿಯ ಹೆಸರೇನು?**
   ಕೆಳದಿಯ ರಾಣಿ ಯುದ್ಧದಲ್ಲಿ ಸೋಲಿಸಿದ ಮೊಗಲ್ ಚಕ್ರವರ್ತಿಯ ಹೆಸರು ಔರಂಗಜೇಬ.

## ಪದ್ಯ – 10

**ದಾಸರ ಪದಗಳು ಮನಃಶುದ್ಧಿ – ಪುರಂದರದಾಸರು**

1. **ನಾವು ದಿನದಿನವೂ ಮಾಡಬೇಕಾದ ಕೆಲಸವೇನು?**
   ನಾವು ದಿನದಿನವೂ ಮನವನ್ನು ಶೋಧಿಸಬೇಕು.
2. **ಯಾವುದರ ಲೆಕ್ಕ ಹಾಕಬೇಕು?**
   ನಾವು ದಿನವೂ ಮಾಡುವ ಪಾಪ ಪುಣ್ಯದ ಲೆಕ್ಕ ಹಾಕಬೇಕು.
3. **ಅಧರ್ಮದ ಬೇರನ್ನು ಕೀಳಲು ಏನು ಮಾಡಬೇಕು?**
   ಧರ್ಮ ಅಧರ್ಮಗಳನ್ನು ವಿಂಗಡಿಸಿ ಅಧರ್ಮದ ನರಗಳ ಬೇರನ್ನು ಕೀಳಬೇಕು.
4. **ಪರಮಾತ್ಮನನ್ನು ಕಾಣಲು ಏನನ್ನು ದಂಡಿಸಬೇಕು?**
   ಪರಮಾತ್ಮನನ್ನು ಕಾಣಲು ಮನವನ್ನು ದಂಡಿಸಬೇಕು, ತನುವನ್ನು ಖಂಡಿಸಬೇಕು.
5. **ಮುಕ್ತಿಯು ಸಮೀಪವಾಗಬೇಕಾದರೆ ವ್ಯಕ್ತಿಯು ತನ್ನ ಗಮನವನ್ನು ಎಲ್ಲಿ ಹರಿಸಬೇಕು?**
   ಪರಮಾತ್ಮನನ್ನು ತನ್ನಲ್ಲೇ ಕಂಡುಕೊಂಡು ತನ್ನ ಗಮನವನ್ನು ಪುರಂದರನ ಕಡೆ ಹರಿಸಬೇಕು.

## ಗದ್ಯ ಪಾಠ – 11

**ಹಾಸ್ಯಜೀವಿ ನಾ. ಕಸ್ತೂರಿ – ಅ.ರಾ. ಮಿತ್ರ**

1. **ಕನ್ನಡ ಸಾಹಿತ್ಯದಲ್ಲಿ ಪದಗಳಿಗೆ ರೂಢಿಯ ಅರ್ಥವನ್ನು ತಿರುಚಿ ನಾನಾರ್ಥ ಹೊರಡಿಸಲು ಪ್ರಯತ್ನಿಸಿದ ಇಬ್ಬರು ಸಾಹಿತಿಗಳ ಹೆಸರನ್ನು ಬರೆಯಿರಿ.**
   ಕನ್ನಡ ಸಾಹಿತ್ಯದಲ್ಲಿ ಪದಗಳಿಗೆ ರೂಢಿಯ ಅರ್ಥವನ್ನು ತಿರುಚಿ ನಾನಾರ್ಥ ಹೊರಡಿಸಲು ಪ್ರಯತ್ನಿಸಿದ ಇಬ್ಬರು ಸಾಹಿತಿಗಳು ನಾ. ಕಸ್ತೂರಿ ಮತ್ತು ಕೈಲಾಸಂ.
2. **ಕಸ್ತೂರಿಯವರು ತಮ್ಮ ವೃತ್ತಿ ಜೀವನವನ್ನು ಪ್ರಾರಂಭಿಸಿದ್ದು ಹೇಗೆ?**
   ತಿಂಗಳಿಗೆ ಹದಿನೈದು (15) ರೂಪಾಯಿಗಳನ್ನು ಸಂಭಾವನೆ ಪಡೆದುಕಸ್ತೂರಿಯವರು ತಮ್ಮ ವೃತ್ತಿಜೀವನವನ್ನು ಪ್ರಾರಂಭಿಸಿದ್ದರು.
3. **ಮೈಸೂರಿನಲ್ಲಿ ಕಸ್ತೂರಿ ಅವರ ಚಟುವಟಿಕೆಯ ಕ್ಷಿತಿಜ ಹೇಗೆ ಬೆಳೆಯಿತು?**
   ಮೈಸೂರಿನಲ್ಲಿ ಕಸ್ತೂರಿ ಅವರ ಚಟುವಟಿಕೆಯ ಕ್ಷಿತಿಜ ರೂಪಿತವಾಗಿ ಬಹುಮುಖಿಯಾಗಿ ಬೆಳೆಯಿತು.
4. **ಕಸ್ತೂರಿ ಅವರು ಯಾವ ರೀತಿಯಲ್ಲಿ ಕನ್ನಡದ ಭಕ್ತರಾದರು?**
   ಕಸ್ತೂರಿ ಅವರು ಅಪ್ಪಟ ಕನ್ನಡಿಗರನ್ನು ನಾಚಿಸುವ ರೀತಿಯಲ್ಲಿ ಕನ್ನಡದ ಭಕ್ತರಾದರು.
5. **ಕಸ್ತೂರಿ ಅವರ ಜೀವನದಲ್ಲಿ ಅತ್ಯಂತ ಬೆರಗಿನ ಸಂಗತಿ ಯಾವುದು?**
   ಕಸ್ತೂರಿಯವರು ಒಬ್ಬ ಮಲೆಯಾಳಿ ಎಂಬುದು ಬೆರಗಿನ ಸಂಗತಿ.
6. **ಕಸ್ತೂರಿಯವರಿಗೆ ಕನ್ನಡದ ಕೆಲಸಕ್ಕೆ ಹೆಚ್ಚಿನ ಅವಕಾಶ ನೀಡಿದ ಮಹಾರಾಜ ಕಾಲೇಜಿನ ಆ ರೂಮು ಯಾವುದು?**
   ಕಸ್ತೂರಿಯವರಿಗೆ ಕನ್ನಡದ ಕೆಲಸಕ್ಕೆ ಹೆಚ್ಚಿನ ಅವಕಾಶ ನೀಡಿದ್ದುಮಹಾರಾಜ ಕಾಲೇಜಿನ **"ಕಾಮನ್ ರೂಮ್'** ಅಂದರೆ ಅಧ್ಯಾಪಕರ ಕೊಠಡಿ.
7. **ಕಸ್ತೂರಿಯವರದು ಯಾವ ಕ್ಷೇತ್ರದಲ್ಲಿ ಮರೆಯಲಾಗದ ಹೆಸರು?**
   ಕಸ್ತೂರಿಯವರದು ಹಾಸ್ಯ ಸಾಹಿತ್ಯ ಕ್ಷೇತ್ರದಲ್ಲಿ ಮರೆಯಲಾಗದ ಹೆಸರು.

**ಪದ್ಯ – 12**

**ಜಾನಪದ** **– ಸಂಗ್ರಹ**

1. **ರೈತ ಮಳೆಯನ್ನು ಏನೆಂದು ಕರೆದಿದ್ದಾನೆ?**
   ರೈತ ಮಳೆಯನ್ನುಅಪ್ಪರು (ರಕ್ಷಿಸುವವರು) ಎಂದು ಕರೆದಿದ್ದಾನೆ.
2. **ರೈತನಿಗೆ ಮೋಡಗಳು ಹೇಗೆ ಕಾಣುತ್ತಿದ್ದವು?**
   ರೈತನಿಗೆ ಮೋಡಗಳು ಗೋಡೆಗೆ ಕಪ್ಪು ಬಳಿದ ಹಾಗೆ ಕಾಣುತ್ತಿದ್ದವು.
3. **ಎಲ್ಲಿ ಜಾಸ್ತಿ ಮಳೆ ಸುರಿಯಬೇಕೆಂದು ರೈತನು ಹೇಳುತ್ತಾನೆ?**
   ಮೂಡಲು (ಪೂರ್ವ) ದಿಕ್ಕಿನಲ್ಲಿ ಜಾಸ್ತಿ ಮಳೆ ಸುರಿಯಬೇಕೆಂದು ರೈತನು ಹೇಳುತ್ತಾನೆ.
4. **ಯಾವ ಮಳೆ ಸುರಿದರೆ ಕೆರೆಗಳು ತುಂಬುತ್ತವೆ?**
   ಸ್ವಾತಿ ಮಳೆ ಸುರಿದರೆ ಕೆರೆಗಳು ತುಂಬುತ್ತವೆ.

**ಪಠ್ಯ ಪೋಷಕ ಅಧ್ಯಯನ – 1.**

**ಹೀಗೊಂದು ಟಾಪ್ ಪ್ರಯಾಣ** **– ಈರಪ್ಪ ಎಂ. ಕಂಬಳಿ**

1. **ಹೀಗೊಂದು ಟಾಪ್ ಪ್ರಯಾಣ ಲಲಿತ ಪ್ರಬಂಧದ ಲೇಖಕರು ಯಾರು?**
   ಹೀಗೊಂದು ಟಾಪ್ ಪ್ರಯಾಣ ಲಲಿತ ಪ್ರಬಂಧದ ಲೇಖಕರು ಈರಪ್ಪ ಎಂ.ಕಂಬಳಿ.
2. **ಬಸ್ಸು ಹೇಗೆ ವಾಲಾಡುತ್ತಾ ಹೊರಟಿತು?**
   ಬಸ್ಸು ಥೇಟ್ ಗಬ್ಬದ ಹಂದಿಯಂತೆ ವಾಲಾಡುತ್ತಾ ಹೊರಟಿತು.
3. **ಲೇಖಕರ ಶರ್ಟು ಕೆಂಪು ಬಣ್ಣಕ್ಕೆ ತಿರುಗಿದ್ದೇಕೆ?**
   ಬಸ್ಸು ನಿಂತಾಗಲೆಲ್ಲ ಹಿಂದೆ ಎದ್ದ ಧೂಳು ದುಮ್ಮ ಮೈಮೇಲೆಲ್ಲ ಇಳಿದು ಹಾಕಿದ್ದ ಶರ್ಟು ಕೆಂಪು ಬಣ್ಣಕ್ಕೆ ತಿರುಗಿತು.
4. **ನೇರವಾದ ದಾರಿಯಲ್ಲಿ ಹೋದರೆ ಮಂಡರಗಿಗೆ ಎಷ್ಟು ಸಮಯದಲ್ಲಿ ತಲುಪಬಹುದಾಗಿತ್ತು?**
   ನೇರವಾದ ದಾರಿಯಲ್ಲಿ ಹೋದರೆ ಮಂಡರಗಿಗೆ ಒಂದೇ ಗಂಟೆಯಲ್ಲಿ ತಲುಪಬಹುದು.

**ಪಠ್ಯ ಪೋಷಕ ಅಧ್ಯಯನ –2.**

**ಸೋಮೇಶ್ವರ ಶತಕ** **– ಪುಲಿಗೆರೆ ಸೋಮನಾಥ**

1. ಪುಲಿಗೆರೆ ಸೋಮನಾಥ ಅವರ ಅಂಕಿತ ಯಾವುದು?
   ಪುಲಿಗೆರೆ ಸೋಮನಾಥ ಅವರ ಅಂಕಿತ "ಹರಹರ ಶ್ರೀ ಚೆನ್ನಸೋಮೇಶ್ವರಾ".
2. ಋಷಿಯ ಹೇಗಿರಬೇಕೆಂದು ಸೋಮನಾಥ ಹೇಳಿದ್ದಾರೆ?
   ಋಷಿಯ ಪರಿಶುದ್ಧನಾಗಿರಬೇಕೆಂದು ಕವಿ ಹೇಳಿದ್ದಾನೆ.
3. ಮಗನಲ್ಲಿ ಯಾವ ಗುಣವಿರಬೇಕೆಂದು ಸೋಮನಾಥ ಕವಿ ಹೇಳಿದ್ದಾನೆ?
   ಮಗನಲ್ಲಿ ವಿನಯ ಗುಣವಿರಬೇಕೆಂದು ಸೋಮನಾಥ ಕವಿ ಹೇಳಿದ್ದಾನೆ.
4. ಯೋಗಿ ಯಾವುದನ್ನು ಗೆಲ್ಲಬೇಕು?
   ಯೋಗಿಯು ಕಾಮ, ಕ್ರೋಧಾದಿಗಳನ್ನು ಗೆಲ್ಲಬೇಕು.

**ಪಠ್ಯ ಪೋಷಕ ಅಧ್ಯಯನ – 3.**

**ಮಹಾಶಿಲ್ಪಿ** **– ಪ್ರೇಮ ಭಟ್**

1. **ಧರ್ಮಪದನಿಗುಂಟಾದ ಬಯಕೆ ಏನು?**
   ತಂದೆಯನ್ನು ಅಪ್ಪಿಕೊಳ್ಳಬೇಕೆಂಬ ಬಯಕೆ ಧರ್ಮಪದನಿಗುಂಟಾಯಿತು.
2. **ಧರ್ಮಪದನು ಯಾವ ದೇವಾಲಯಕ್ಕೆ ಕಲಶ ಕೂಡಿಸಲು ಬಂದನು?**
   ಧರ್ಮಪದನು ಕೋನಾರ್ಕ ದೇವಾಲಯದ ಮಹಾದ್ವಾರಕ್ಕೆ ಕಲಶ ಕೂಡಿಸಲು ಬಂದನು.
3. **ವಿಶುವಿನ ಎದೆಯಲ್ಲಿ ಮಗನನ್ನು ಕುರಿತು ಯಾವ ಪದ ಮೊಳಗಿತು?**
   ವಿಶುವಿನ ಎದೆಯಲ್ಲಿ ಮಗನನ್ನು ಕುರಿತು 'ಮಹಾಶಿಲ್ಪಿ' ಎಂಬ ಪದ ಮೊಳಗುತ್ತಿತ್ತು.
4. **ಬುತ್ತಿಯಲ್ಲಿದ್ದ ರೊಟ್ಟಿಯನ್ನು ಕಚ್ಚಿಕೊಂಡು ಹಾರಿ ಹೋಗಿದ್ದು ಏನು?**
   ಬುತ್ತಿಯಲ್ಲಿದ್ದ ರೊಟ್ಟಿಯನ್ನು ಗಿಡುಗ ಕಚ್ಚಿಕೊಂಡು ಹಾರಿ ಹೋಯಿತು.

## ಪದ್ಯಭಾಗವನ್ನು ಪೂರ್ಣ ಮಾಡಿ

**ಪದ್ಯ – 4**

**ಒಂದೇ ಭೂಮಿತಾಯ ಕುಡಿಗಳು** **ಕೆ.ಎಸ್. ನಿಸಾರ್ ಅಹ್ಮದ್**

ನಾವು ನೀವು ಅವರು ಇವರು
ಒಂದೆ ಒಂದೆ ಒಂದೆ
ಭೂಮಿ ತಾಯ ಕುಡಿಗಳೆಂದು
ಪಣವ ತೊಡಿರಿ ಇಂದೆ

ಕರ್ನಾಟಕ ವಂಗ ಆಂಧ್ರ
ಭಾರತೀಯರೊಂದೆ
ಪೂರ್ವೋತ್ತರ ಪಡು ತೆಂಕಣ
ಗಾಳಿ ಮುಗಿಲು ಒಂದೆ

**ಪದ್ಯ – 6**

**ಮಾಯಾದೀಪ** **ಬಿ.ಆರ್. ಲಕ್ಷ್ಮಣರಾವ್**

ಅಕ್ಷರವೆಂಬುದು ಅಲ್ಲಾದೀನನ
ಅದ್ಭುತ ಮಾಯದೀಪ
ಅದು ವಶವಾದರೆ ನಿನಗೆ ನೀಡುವುದು
ಹೊಸ ಜೀವನ, ಹೊಸ ರೂಪ॥

ದೀಪ ಉಜ್ಜಿದರೆ ಅವತರಿಸುವನು
ಸರ್ವಶಕ್ತದೂತ
ಅವನ ಬೆನ್ನೇರಿ ನೀ ಸಂಚರಿಸುವೆ
ಬ್ರಹ್ಮಾಂಡ ಸಮಸ್ತ

**ಪದ್ಯ – 10**

**ದಾಸರ ಪದಗಳು ಮನಃಶುದ್ಧಿ** **– ಪುರಂದರದಾಸರು**

ತನುವ ಖಂಡಿಸಿ ಒಮ್ಮೆ ಮಾಣೋ ನಿನ್ನ
ಮನವ ದಂಡಿಸಿ ಪರಮಾತ್ಮನ್ನ ಕಾಣೋ
ಕೊನೆಗೆ ನಿನ್ನೊಳು ನೀ ಜಾಣೋ ಮುಕ್ತಿ
ನಿನಗೆ ದೂರವಿಲ್ಲವು ಒಂದೆ ಗೇಣೋ

**ಪದ್ಯ – 12**

**ಜಾನಪದ** **– ಸಂಗ್ರಹ**

ಸಾತೆಯ ಮಳೆ ಹುಯ್ದು ಸಾವಿರಾರು ಕೆರೆತುಂಬಿ
ಜೋತಾಡುತಾವೆ ಕುಣಿಗಲು – ಕುಚ್ಚಲು ಮೀನು
ಮೂಗಯ್ಯ ಕಂಡು ನಗುತಾವೆ ॥

## ಕೊಟ್ಟಿರುವ ಪ್ರಶ್ನೆಗಳಿಗೆ 3–4 ವಾಕ್ಯಗಳಲ್ಲಿ ಉತ್ತರಿಸಿ.

**ಗದ್ಯಪಾಠ – 1.**

**ಲಾಕಪ್ಪಿನಲ್ಲಿ ಒಂದು ರಾತ್ರಿ** **ಲೇ.ಗೊ.ರಾ. ಅಯ್ಯಂಗಾರ್**

1. **ಲೇಖಕರು ಒಂದು ರಾತ್ರಿಯನ್ನು ಲಾಕಪ್ಪಿನಲ್ಲಿ ಕಳೆಯಲು ಕಾರಣವೇನು?**
   ಲೇಖಕರು ಮಿತ್ರರು ಪರಿಚಿತರಿಂದ ಬೇರೆಯಾದರು ಅವರ ಬಳಿ ಯಾರ ವಿಳಾಸವೂ, ಸಾಕಷ್ಟು ಹಣವೂ ಇರಲಿಲ್ಲ. ಅವರು ತಮ್ಮ ಸಮಸ್ಯೆಯನ್ನು ಟ್ರಾಫಿಕ್ ಪೋಲೀಸಿನವನ ಬಳಿ ಹೇಳಿಕೊಂಡರು.ಆತ ಅವರನ್ನು ತನ್ನ ಮನೆಗೆ ಕರೆದುಕೊಂಡು ಹೋದ.ಆದರೆ ಪೋಲೀಸಿನವನ ಮನೆಯ ಹಾಸಿಗೆ ಉಪಯೋಗಿಸದೆ ಇದ್ದ ಕಾರಣ ಧೂಳು ಇತ್ತು.ಆತನ ವಶದಲ್ಲಿಯೇ ಒಂದು ಲಾಕಪ್ ಇತ್ತು.ಆ ಲಾಕಪ್ ಮಲಗಲು ಯೋಗ್ಯವಾಗಿದ್ದು ಅಲ್ಲಿ ಮಲಗಲು ಪೋಲೀಸಿನವ ಸೂಚಿಸಿದ ಕಾರಣ ಲೇಖಕರು ಒಂದು ರ್ರಾತ್ರಿ ಲಾಕಪ್‌ನಲ್ಲಿ ಕಳೆಯಬೇಕಾಯಿತು.
1. **ದೀಪ ಹೊತ್ತಿದ ಮೇಲೆ ನಗರದಲ್ಲಿ ಲೇಖಕರು ಏನೇನನ್ನು ನೋಡಿದರು?**
   ದೀಪ ಹೊತ್ತಿದ ಮೇಲೆ ನಗರದಲ್ಲಿ ಲೇಖಕರು, ಬಣ್ಣದ ಬಲ್ಬುಗಳು, ಕಮಾನುಗಳು, ಕಿಟಕಿಗಳು, ದೀಪರಾಶಿ, ಕಿಟಕಿಗಳ ದೀಪಾಲಂಕಾರಗಳನ್ನು ನೋಡಿದರು.ಹೀಗೆಯೇ ದಾರಿಯಲ್ಲಿ ಸಾಗುತ್ತ ಎದುರಾದ ಅಂಗಡಿಗಳನ್ನು ಜನರನ್ನು ಕಣ್ಣಿಗೆ ಬಿದ್ದ ದೃಶ್ಯಗಳನ್ನು ನೋಡಿದರು.

**ಪದ್ಯಪಾಠ – 2.**

**ಕೋಗಿಲೆ** **ಚೆನ್ನವೀರಕಣವಿ**

1. **ಈ ಕ್ಷಣವು ಕೋಗಿಲೆಯ ಗಾನಕ್ಕೆ ಹೇಗೆ ಸ್ಪಂದಿಸುತ್ತಿದೆ?**
   ಕೋಗಿಲೆಯ ಇಂಪಾದ ಗಾನವನ್ನು ಕೇಳಿದ ಈ ಕ್ಷಣವು ಎದೆಯಲ್ಲಿ ಹೊಸರಾಗ ಮಿಡಿಸುತ್ತಿದೆ.ಆ ರಾಗಕ್ಕೆ ತಾಳ ಹಿಡಿದು ಕುಣಿಯಬೇಕು ಎಂದು ಮನಸ್ಸು ಸ್ಪಂದಿಸುತ್ತಿದೆ.
2. **ಕೋಗಿಲೆಗಳ ಹಾಡಿನ ತರಂಗಗಳ ಪರಿಣಾಮ ಏನಾಗಿದೆ?**
   ಕಡಲಲ್ಲಿ ಹಿಗ್ಗಿ ಬರುವ ನೀರ ಅಲೆಗಳಂತೆ ಹಾಗೂ ವಿವಿಧ ವಾದ್ಯಗಳಲ್ಲಿ ಮೂಡಿ ಬರುವ ನಾದ ಸ್ವರದಂತೆ ಸಂಗೀತದ ವಿವಿಧ ರಸಗಳು, ತಾಳಗಳು, ರಾಗಗಳು ಒಮ್ಮೆಲೆ ಹಾಡುತ್ತಿಯೋ ಏನೋ ಎಂಬಂತೆ ಭಾಸವಾಯಿತು.ಮನುಜಲೋಕ ದೇವಲೋಕದಂತೆ ಬದಲಾಯಿತು.
3. **ಕೋಗಿಲೆಯು ತಮಗೆ ಅಮೃತವನ್ನು ಹೇಗೆ ನೀಡುತ್ತಿದೆ?**
   ಕೋಗಿಲೆಯು ತನ್ನ ಗಾನದಿಂದ ವಿವಿಧ ರಸಗಳನ್ನು ಒಮ್ಮೆಲೆ ಎಲ್ಲೆಲ್ಲೂ ಚಿಮ್ಮಿಸುತ್ತದೆ. ಈ ಗಾನವು ನಮ್ಮ ಮನಸ್ಸಿಗೆ ರಸದ ಚಿಲುಮೆಯನ್ನು ಹರಿಸುತ್ತದೆ.ಹೀಗೆ ಒಲುಮೆಯ ಸುಧೆಯನ್ನು ಸವಿಯಲು ನೀಡುತ್ತದೆ.

**ಗದ್ಯ ಪಾಠ – 3.**

**ಕರ್ನಾಟಕತ್ವ** **ಜಿ.ಪಿ.ರಾಜರತ್ನಂ**

1. **ಕರ್ನಾಟಕ ರಾಜ್ಯದ ಉದಯವಾದದ್ದು ಸಾರ್ಥಕವಾಗಬೇಕಾದರೆ ನಾವು ಏನು ಮಾಡಬೇಕೆಂದು ರಾಜರತ್ನಂ ಹೇಳುತ್ತಾರೆ?**
   ಕರ್ನಾಟಕ ರಾಜ್ಯದ ಉದಯವಾದದ್ದು ಸಾರ್ಥಕವಾಗಬೇಕಾದರೆ ನೃಪತುಂಗ ಚಕ್ರವರ್ತಿಯ ಮಂತ್ರ 'ವಸುಧಾವಳಯ ವಿಲೀನವಶದ ವಿಷಯ ವಿಶೇಷಂ' ಎಂಬ ಮಂತ್ರದ ಅರ್ಥ ಪರಿಭಾವಿಸಿ ಅದಕ್ಕೆ ತಕ್ಕ ಹಾಗೆ ನಮ್ಮ ನಡವಳಿಕೆಯನ್ನು ಬೆಳೆಸಿಕೊಳ್ಳಬೇಕು ಎಂದು ಕವಿ ಹೇಳಿದ್ದಾರೆ.
2. **ನೃಪತುಂಗನು ಕೊಟ್ಟ ಮಂತ್ರದಲ್ಲಿರುವ ಪದಗಳನ್ನು ಹೆಸರಿಸಿ.**
   ನೃಪತುಂಗನು ಕೊಟ್ಟಿರುವ ಮಂತ್ರ "ವಸುಧಾವಳಯ ವಿಲೀನವಿಶದವಿಷಯವಿಶೇಷಂ" ಇದಾಗಿದ್ದು ಇದರಲ್ಲಿ ವಸುಧಾವಳಯ, ವಿಲೀನ, ವಿಶದ, ವಿಷಯ, ವಿಶೇಷ ಎಂಬ ಬಿಡಿ ಪದಗಳಿವೆ.
3. **ಜಿ.ಪಿ. ರಾಜರತ್ನಂ ಅವರು ಹೇಳಿರುವ ಕರ್ನಾಟಕದ ಲಕ್ಷಣಗಳಾವುವು?**
   ಕರ್ನಾಟಕವು ವಸುಧಾ ವಳಯ ಎಂದರೆ ಬಳೆಯಂತೆ ಗುಂಡಗಿರುವ 'ವಸು' ಎಂದರೆ ಚಿನ್ನ ಚಿನ್ನದಂಥ ಅಮೂಲ್ಯ ವಸ್ತುಗಳು ಈ ಭೂಮಿಯಲ್ಲಿ ಇರುವುದರಿಂದ ಇದು 'ವಸುಧಾ' ವಸುಂಧರಾ "ವಳಯ" ಎಂದರೆ ಬಳೆ.ಬಳೆ ಮುತ್ತೈದೆಯ ಲಕ್ಷಣ ಈ ಎರಡೂ ಲಕ್ಷಣಉಳ್ಳದ್ದು ನಮ್ಮ ಭೂಮಿ.

4. **ಕರ್ನಾಟಕದ ಪ್ರಜೆಗಳೆಂಬ ಹೆಸರಿಗೆ ನಾವು ಪಾತ್ರರಾಗುವುದು ಯಾವಾಗ?**
   ಹಿಂದಿನ ಕರ್ನಾಟಕದ ಜನ ತಮ್ಮ ಅನನ್ಯಗುಣದಿಂದ ತಮ್ಮ ದೇಶವನ್ನು ದೊಡ್ಡದೆನಿಸಿದರು.ಅಂಥ ದೇಶವನ್ನು ಪಿತ್ರಾರ್ಜಿತವಾಗಿ ಪಡೆದಿರುವ ನಾವು ಅವರ ದೊಡ್ಡ ಗುಣಗಳನ್ನು ಬೆಳೆಸಿಕೊಂಡಾಗ ಮಾತ್ರ ಕರ್ನಾಟಕದ ಪ್ರಜೆಗಳೆಂಬ ಹೆಸರಿಗೆ ಪಾತ್ರರಾಗುತ್ತೇವೆ.

**ಪದ್ಯ – 4**

**ಒಂದೇ ಭೂಮಿತಾಯ ಕುಡಿಗಳು** **ಕೆ.ಎಸ್. ನಿಸಾರ್ ಅಹ್ಮದ್**

1. **ಯಾವ ಯಾವ ಧರ್ಮದುಸಿರು ಒಂದೇ ಎಂದು ಕವಿ ಹೇಳಿದ್ದಾರೆ?**
   ಕವಿ ನಿಸಾರ್ ಅಹಮದ್ ಅವರು ಹಿಂದೂ, ಕ್ರೈಸ್ತ, ಮುಸಲ್ಮಾನರು ಹಾಗೂ ಜೈನ, ಬೌದ್ಧ ಧರ್ಮದ ಜನಾಂಗದ ಜನರೆಲ್ಲರ ಧರ್ಮದ ಉಸಿರು ಒಂದೇ ಎಂದು ಹೇಳಿದ್ದಾರೆ.

**ಗದ್ಯಪಾಠ – 5.**

**ಸ್ಪಿನ್ ಮಾಂತ್ರಿಕ ಅನಿಲ್ ಕುಂಬ್ಳೆ** **ಸಂಪಾದಿತ**

1. **ಅನಿಲ್ ಕುಂಬ್ಳೆ ಅವರ ಬಾಲ್ಯ ಜೀವನವನ್ನು ತಿಳಿಸಿ.**
   ಅನಿಲ್ ಕುಂಬ್ಳೆ 1970 ಅಕ್ಟೋಬರ್ 17ರಂದು ಬೆಂಗಳೂರಿನಲ್ಲಿ ಜನಿಸಿದರು.ತಂದೆ ಕೆ.ಎನ್. ಕೃಷ್ಣಸ್ವಾಮಿ ತಾಯಿ ಶ್ರೀಮತಿ ಸರೋಜ ಇವರ ವಂಶಜರು ಕುಂಬ್ಳೆಯಿಂದ ಬಂದವರಾದ್ದರಿಂದ ಇವರ ಹೆಸರಿಗೆ ಊರಿನ ಹೆಸರು ಸೇರಿಕೊಂಡಿತು. ಕುಂಬ್ಳೆ ತಮ್ಮ ಕ್ರಿಕೆಟ್ ಆಟವನ್ನು ಪ್ರಾರಂಭಿಸಿದ್ದು ಬೆಂಗಳೂರಿನ ಬೀದಿಯಲ್ಲಿ ಹದಿಮೂರರ ವರ್ಷದವರಿದ್ದಾಗ ಬೆಂಗಳೂರಿನ ಯಂಗ್ ಕ್ರಿಕೆಟರ್ಸ್ ಸಂಸ್ಥೆಯನ್ನು ಸೇರಿದರು.
2. **ಐ.ಪಿ.ಎಲ್. ಕ್ರೀಡಾಸ್ಪರ್ಧೆಯಲ್ಲಿ ಕುಂಬ್ಳೆಯವರ ಪಾತ್ರವೇನು?**
   ಅನಿಲ್ ಕುಂಬ್ಳೆಯವರು ಬೆಂಗಳೂರಿನ ರಾಯಲ್ ಚಾಲೆಂಜರ್ಸ್ ತಂಡದ ಪ್ರಮುಖ ಆಟಗಾರರಾಗಿದ್ದು ಐ.ಪಿ.ಎಲ್ ಕ್ರೀಡಾ ಸ್ಪರ್ಧೆಯ ಎರಡನೇ ವರ್ಷವೇ ಸ್ವತಃ ಅತಿ ಹೆಚ್ಚು ವಿಕೆಟ್ ಪಡೆದ ಎರಡನೇ ಬೌಲರ್ ಆದ ಹಿರಿಮೆಯೂ ಮೂರನೇ ವರ್ಷ ತಂಡವನ್ನು ದ್ವಿತೀಯ ಸ್ಥಾನಕ್ಕೆ ಕೊಂಡೊಯ್ದ ಕೀರ್ತಿಯೂ ಇವರದಾಗಿದೆ.
3. **ಅನಿಲ್ ಕುಂಬ್ಳೆ ಅವರ ಆಟದ ವೈಖರಿಯನ್ನು ವಿವರಿಸಿ.**
   ಕುಂಬ್ಳೆ ಜಗತ್ತಿನ ಸ್ಪಿನ್ ಬೌಲರ್‌ಗಳಲ್ಲಿ ಒಬ್ಬರು ಇವರು ಮಧ್ಯಮ ವೇಗದ ಚೆಂಡುಗಳನ್ನು ಎಸೆದು ದಾಂಡಿಗರ ದಿಕ್ಕು ತಪ್ಪಿಸಬಲ್ಲರು.ಇವರ ಶೈಲಿ ಅಸಂಪ್ರದಾಯಿಕ ಎಂದು ಕೆಲವರ ಭಾವನೆ ಆದರೆ ಆ ಚೆಂಡುಗಳು ಎದುರಾಳಿ ದಾಂಡಿಗರಿಗೆ ಸಿಂಹಸ್ವಪ್ನವಾಗಿರುತ್ತಿದ್ದವು.ಇವರು ಚೆಂಡನ್ನು ತಿರುಗಿಸುವುದಕ್ಕಿಂತ ಹೆಚ್ಚಾಗಿ ಖಚಿತತೆ, ಗತಿಯ ಬದಲಾವಣೆ ಮತ್ತು ಪುಟಿತದ ಮೇಲೆ ಅವಲಂಬಿತರಾಗಿರುತ್ತಿದ್ದರು.
4. **ಕುಂಬ್ಳೆ ಅವರು ನಿವೃತ್ತರಾದ ಮೇಲೆ ತಮ್ಮನ್ನು ಯಾವ ರೀತಿಯ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡರು?**
   ಕುಂಬ್ಳೆ ಅವರು ಆಟದ ಅಂಗಳದಿಂದ ನಿವೃತ್ತರಾದ ಮೇಲೂ, ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ಚುನಾಯಿತ ಅಧ್ಯಕ್ಷರಾಗಿ ಕ್ರಿಕೆಟ್‌ನ ವಿಶಾಲ ಕ್ಷೇತ್ರದ ಸೇವೆಯಲ್ಲಿ ತೊಡಗಿದ್ದರು.ಅಲ್ಲದೆ ಬೆಂಗಳೂರಿನ ರಾಯಲ್ ಚಾಲೆಂಜರ್ಸ್ ತಂಡದ ಪ್ರಮುಖ ಆಟಗಾರರಾಗಿದ್ದು ಐ.ಪಿ.ಎಲ್ ಕ್ರೀಡಾ ಸ್ಪರ್ಧೆಯ ಎರಡನೇ ವರ್ಷವೇ ಸ್ವತಃ ಅತಿ ಹೆಚ್ಚು ವಿಕೆಟ್ ಪಡೆದ ಎರಡನೇ ಬೌಲರಾದ ಹಿರಿಮೆಯೂ, ಮೂರನೆಯ ವರ್ಷ ತಂಡವನ್ನು ದ್ವಿತೀಯ ಸ್ಥಾನಕ್ಕೆ ಕೊಂಡೊಯ್ದ ಕೀರ್ತಿಯೂ ಇವರದಾಗಿದೆ.

**ಪದ್ಯ – 6**

**ಮಾಯಾದೀಪ** **ಬಿ.ಆರ್. ಲಕ್ಷ್ಮಣರಾವ್**

1. **ಅಕ್ಷರವು ಹೇಗೆ ನಮಗೆ ಹೊಸ ಜೀವನ ಹೊಸರೂಪ ಕೊಡುತ್ತದೆ?**
   ಅಕ್ಷರವೆಂಬುದು ಅದ್ಭುತ ಮಾಯದೀಪ. ತಂದೆ ತಾಯಿಗಳು ಅಕ್ಷರ ವಿದ್ಯೆ ಕಲಿಸದಿದ್ದರೆ ಮಕ್ಕಳನ್ನು ಕೊಂದ ಹಾಗೆ ಅಕ್ಷರವೆಂಬ ಮಾಯಾದೀಪ ವಶವಾದರೆ ಹೊಸಜೀವನ ಮತ್ತು ಹೊಸ ರೂಪವನ್ನು ಕೊಡುತ್ತದೆ.
2. **ಮನುಷ್ಯನು ಹೊಸ ಮನುಷ್ಯನಾಗುವುದು ಹೇಗೆ?**
   ಶಿಕ್ಷಣ ಜ್ಞಾನ ಒಲಿದಾಗ ಆ ವಿದ್ಯೆಯ ಬೆಳಕು ಸರ್ವಶಕ್ತ ದೂತನಂತೆ ನಮ್ಮೊಡನೆ ಸಂಚರಿಸಿ ಕಷ್ಟಕಾರ್ಪಣ್ಯಗಳನ್ನು ದೂರ ಮಾಡುತ್ತದೆ. ಹೀಗೆ ಬಲಹೀನತೆಯ ಸರಪಣಿ ಕಳಚಿ ಹೊಸ ಮನುಷ್ಯನಾಗುವನು.

## ಗದ್ಯಪಾಠ – 7

**ಧ್ವಜ ರಕ್ಷಣೆ (ನಾಟಕ)** **ಲೇ. ಎಸ್. ಆರ್.ರೋಹಿಡೇಕರ್**

1. **ರಾಮಸಿಂಗನ ಕುಟುಂಬಕ್ಕೂ ಸ್ವಾತಂತ್ರ್ಯ ಸಂಗ್ರಾಮಕ್ಕೂ ಏನು ಸಂಬಂಧವಿತ್ತು?**
ರಾಮ್‌ಸಿಂಗ್‌ನ ತಂದೆ ಸ್ವಾತಂತ್ರ್ಯ ಹೋರಾಟದಲ್ಲಿ ಹೋರಾಡಿ ತನ್ನ ಪ್ರಾಣವನ್ನು ಅರ್ಪಿಸಿದರು.ಅದನ್ನು ಲೆಕ್ಕಿಸದೆ ತಾಯಿ ತುಳಜಾಬಾಯಿ ತನ್ನ ಮಗನನ್ನು ಆಶೀರ್ವದಿಸಿ, ಸ್ವತಂತ್ರ್ಯ ಸಂಗ್ರಾಮಕ್ಕೆ ಹೋರಾಟ ಮಾಡಲು ಕಳುಹಿಸಿ ಕೊಟ್ಟಳು.ಇದೇ ರಾಮ್‌ಸಿಂಗ್ ಕುಟುಂಬಕ್ಕೂ ಸ್ವಾತಂತ್ರ್ಯ ಸಂಗ್ರಾಮಕ್ಕೂ ಇರುವ ಸಂಬಂಧ.
2. **ರಾಮ್‌ಸಿಂಗ್‌ನಿಗೂ ಶಿಪಾಯಿಗಳಿಗೂ ನಡೆದ ಸಂಭಾಷಣೆಯನ್ನು ನಿಮ್ಮ ಮಾತುಗಳಲ್ಲಿ ಸಂಗ್ರಹಿಸಿ.**
ಮೋಹನಪುರದ ಎರಡು ರಸ್ತೆಗಳು ಕೂಡುವ ಸ್ಥಳದಲ್ಲಿ ರಾಮ್‌ಸಿಂಗ್ ಕೆಲವು ಸ್ವಯಂ ಸೇವಕರು ಜಯಕಾರ ಕೂಗುತ್ತಾ ಬಂದರು ಅಷ್ಟರಲ್ಲಿ ಇಬ್ಬರು ಶಿಪಾಯಿಗಳು ಪೋಲೀಸ್ ಸಮವಸ್ತ್ರ ಧರಿಸಿ ಬರುವರು.ಇಲ್ಲಿ ಸಭೆ ಸೇರಕೂಡದೆಂದು ಡಂಗೂರ ಸಾರಿಸಿದ್ದು ನಿಮಗೆ ಕೇಳಿಸಲಿಲ್ಲವೆ? ಎಂದು ಶಿಪಾಯಿ ಕೇಳಿದಾಗ ಡಂಗೂರ ಸಾರಿಸಲು ಇದು ನಿಮ್ಮ ಅಪ್ಪನ ಮನೆಯಲ್ಲ;ಇದು ನಮ್ಮ ಊರು ಎಂದು ಉತ್ತರಿಸಿದನು. ಅದಕ್ಕೆ 2ನೇ ಸಿಪಾಯಿ ಇಲ್ಲಿ ರಾಜ್ಯವಾಳುವವರು ನೀವಲ್ಲ, ಬ್ರಿಟೀಷರು ಎಂದನು. ಆಗ ರಾಮ್‌ಸಿಂಗ್ ನೀವು ಬ್ರಿಟಿಷರಲ್ಲವಲ್ಲ! ಎಂದು ಹೇಳಿದನು.ಪ್ರತಿಯಾಗಿಶಿಪಾಯಿ ನಾವು ಬ್ರಿಟಿಷ್ ಸರಕಾರದ ನೌಕರರೆಂದಾಗ ರಾಮ್‌ಸಿಂಗ್ "ನೀವು ನೌಕರರಲ್ಲ; ಬ್ರಿಟಿಷರ ಗುಲಾಮರು" ಎಂದು ಹೇಳಿದನು.
3. **ಕುಲಕರ್ಣಿ ಅವರಿಗೂ ರಾಮಸಿಂಗ್‌ನಿಗೂ ನಡೆದ ಸಂಭಾಷಣೆಯನ್ನು ಸಂಗ್ರಹಿಸಿ.**
ಕೈಯಲ್ಲಿ ಪಿಸ್ತೂಲು ಹಿಡಿದು ಬಂದ ಕುಲಕರ್ಣಿಯು ದರ್ಪದಿಂದ ಬ್ರಿಟಿಷರ ರಾಜ್ಯಭಾರ ನಡೆಯುತ್ತದೆಂದು ತೋರಿಸಲು ನಮಗೆ ಆಜ್ಞೆಯಾಗಿದೆ ಎಂದನು.ಆಗ ನಿಮ್ಮ ಅಧಿಕಾರ ನಡೆಯದು ಎಂದು ತೋರಿಸಲಿಕ್ಕೆ ಸಭೆ ಸೇರಿದ್ದೇವೆ ಎಂದು ರಾಮ್‌ಸಿಂಗ್ ಹೇಳಿದನು.ಅದಕ್ಕೆ ಕುಲಕರ್ಣಿ ಎಷ್ಟು ಉದ್ಧಟನಾಗಿದ್ದಿಯಾ ಎಂದಾಗ ನಿಮ್ಮಷ್ಟಲ್ಲ ಎಂದನು ರಾಮ್‌ಸಿಂಗ್.ಸಾಕು ಬಾಯಿಮುಚ್ಚು ಎಂದು ಕುಲಕರ್ಣಿ ಹೇಳಿದಾಗ ಬಿಚ್ಚೆಂದಾಗ ಬಿಚ್ಚಲು ಮುಚ್ಚೆಂದಾಗ ಮುಚ್ಚಲು ಈ ಬಾಯಿ ನಿಮ್ಮಂತಹ ಗುಲಾಮರ ಬಾಯಿಯಲ್ಲ ಎಂದು ರಾಮಸಿಂಗ್ ಉತ್ತರಿಸಿದನು.
4. **ಕುಲಕರ್ಣಿಯ ಪಿಸ್ತೂಲು ರಾಮ್‌ಸಿಂಗ್ ಹಿಡಿದಿದ್ದ ಧ್ವಜಗಳಲ್ಲಿ ಯಾವುದು ಶ್ರೇಷ್ಠ ಏಕೆ?**
ಕುಲಕರ್ಣಿಯ ಪಿಸ್ತೂಲು ಹಾಗೂ ರಾಮ್‌ಸಿಂಗ್ ಹಿಡಿದಿದ್ದ ಧ್ವಜಗಳಲ್ಲಿ ರಾಮ್‌ಸಿಂಗ್ ಹಿಡಿದಿದ್ದ ಧ್ವಜವೇ ಶ್ರೇಷ್ಠ ಏಕೆಂದರೆ ರಾಷ್ಟ್ರಧ್ವಜ ರಾಷ್ಟ್ರದ ಏಕತೆ ಮತ್ತು ಅಭಿಮಾನದ ಸಂಕೇತ, ಭಾವೈಕ್ಯತೆಯ ಸಂಕೇತ.ಆದ್ದರಿಂದ ರಾಮ್‌ಸಿಂಗ್ ಹಿಡಿದಿದ್ದ ಧ್ವಜವೇ ಶ್ರೇಷ್ಠ.
5. **ರಾಮ್‌ಸಿಂಗನ ಛಲ ಯಾವುದಕ್ಕಾಗಿ? ಅದನ್ನು ಅವನು ಹೇಗೆ ಸಾಧಿಸಿದನು?**
ರಾಮ್‌ಸಿಂಗ್‌ನ ಛಲ ಸ್ವಾತಂತ್ರ್ಯ ಹೋರಾಟಕ್ಕಾಗಿ. ಹೋರಾಟದಲ್ಲಿ ಶಿಪಾಯಿಗಳ ಮಾತಿಗೆ ಎದುರಾಡಿದನು ಪೋಲೀಸ್ ಪಡೆಯ ಅಧಿಕಾರಿಯಾದ ಕುಲಕರ್ಣಿ ಹೋರಾಟ ನಿಲ್ಲಿಸಲು ತಿಳಿಸಿದನು. ರಾಮ್‌ಸಿಂಗ್ ಕದಲಲಿಲ್ಲ. ಕುಲಕರ್ಣಿ ಪಿಸ್ತೂಲ್ ತೋರಿಸಿ ಹೆದರಿಸಿದನು. ರಾಮಸಿಂಗ್ ಧ್ವಜ ತೋರಿಸಿ, ಇದರ ಮುಂದೆ ನಿಲ್ಲಲಾರೆ ಎಂದನು. ಆಗ ಕುಲಕರ್ಣಿ ಪಿಸ್ತೂಲಿನಿಂದ ರಾಮ್‌ಸಿಂಗ್‌ನನ್ನು ಕೊಲ್ಲುವನು.ಹೀಗೆ ರಾಮ್‌ಸಿಂಗ್ ಸ್ವಾತಂತ್ರ್ಯ ಹೋರಾಟಕ್ಕಾಗಿ ಪ್ರಾಣತ್ಯಾಗ ಮಾಡಿದನು.
6. **ಮಗನಿಗೆ ಗುಂಡೇಟು ತಗುಲಿದ್ದರೂ ತುಳಜಾಬಾಯಿ ಅವನನ್ನು ಸಮಾಧಾನ ಮಾಡಲು ಏನನ್ನು ತಂದಿದ್ದಳು? ಏಕೆ?**
ಮಗನಿಗೆ ಗುಂಡೇಟು ತಗುಲಿದ್ದರೂ ತುಳಜಾಬಾಯಿ ಅವನನ್ನು ಸಮಾಧಾನ ಮಾಡಲು ರಾಷ್ಟ್ರಧ್ವಜ ತಂದಿದ್ದಳು. ಏಕೆಂದರೆ ರಾಷ್ಟ್ರಧ್ವಜದ ಮೇಲೆ ಆಕೆಗೆ ಅಪಾರನಂಬಿಕೆ, ದೇಶಕ್ಕಾಗಿ ತನ್ನ ಗಂಡ ಹಾಗೂ,ಮಗನನ್ನೆ ಬಲಿಕೊಟ್ಟಿದ್ದಾಳೆ ಆದರೂ ದೇಶದ ಮೇಲೆ ಆಕೆಗೆ ವ್ಯಾಮೋಹ ಕಡಿಮೆಯಾಗಲಿಲ್ಲ ತನ್ನ ಮಗ ಸಾಯುವಾಗಲೂ ಧ್ವಜ ಹಿಡಿದು ಸಾಯಬೇಕು ಎಂಬುದು ಅವಳ ಉದ್ದೇಶವಾಗಿತ್ತು.

## ಗದ್ಯ – 9

**ಕರ್ನಾಟಕದ ವೀರ ವನಿತೆಯರು** **ಲೆ. ಡಾ॥ ವಿಜಯಲಕ್ಷ್ಮಿ ಬಾಳೇಕುಂದ್ರಿ**

1. **ಇಟಲಿಯ ಪ್ರವಾಸಿ ಜಿನೋವ ಪಿತ್ರೋ ಅಬ್ಬಕ್ಕ ರಾಣಿಯನ್ನು ಏನೆಂದು ಶ್ಲಾಘಿಸಿದ್ದಾನೆ?**
"ರಾಣಿ ಅಬ್ಬಕ್ಕದೇವಿ ಆರ್ಥಿಕ ಶೋಷಣೆಗೆ ತಲೆಬಾಗದ ಸ್ವಾಭಿಮಾನಿಯೂ ವಿವೇಚನಾಶೀಲಳೂ ನ್ಯಾಯಪರಳೂ ಕುಶಲಳೂ ಆಗಿದ್ದಳು" ಎಂದು ಇಟಲಿಯ ಪ್ರವಾಸಿ ಪಿತ್ರೋ ಶ್ಲಾಘಿಸಿದ್ದಾನೆ.
2. **ಮೊಗಲರು ಪ್ರಾಣಭೀತಿಯಿಂದ ಪಲಾಯನಗೈಯಲು ಕೆಳದಿಯ ರಾಣಿ ಚೆನ್ನಮ್ಮ ಕೈಗೊಂಡ ಉಪಾಯಗಳೇನು?**
ಚೆನ್ನಮ್ಮ ರಾಜಧಾನಿಯನ್ನು ಭುವನಗಿರಿಗೆ ಸ್ಥಳಾಂತರಿಸಿ ಸುತ್ತಲಿನ ಬೆಟ್ಟ, ಕಣಿವೆ, ಇಕ್ಕಟ್ಟು ದಾರಿ, ಕಾಲುದಾರಿ, ಕಳ್ಳದಾರಿಗಳಲ್ಲಿ ತನ್ನ ಸೈನಿಕರನ್ನು ನಿಲ್ಲಿಸಿ ಮೊಗಲರಿಗೆ ಅನ್ನ ನೀರು ಸಿಗದಂತೆ ಮಾಡಿದಳು.ದಟ್ಟವಾದ ಕಾಡುಗಳ ಸಂದುಗೊಂದುಗಳಲ್ಲಿ ಚಲಿಸಲು ಆಗದೆ ಮಲೆನಾಡಿನ ಮಳೆಗೆ ತತ್ತರಿಸಿ ಪಲಾಯನಗೈದರು.

3. **ರಾಣಿ ಅಬ್ಬಕ್ಕದೇವಿ ಪೋರ್ಚುಗೀಸರ ವಿರುದ್ಧ ಹೋರಾಡಿದ್ದಕ್ಕೆ ಕಾರಣ ಹಾಗೂ ಅವರನ್ನು ಸೋಲಿಸಿದ ಪರಿಯನ್ನು ವಿವರಿಸಿ.**
   ರಾಣಿ ಅಬ್ಬಕ್ಕದೇವಿ ಪೋರ್ಚುಗೀಸರ ಆರ್ಥಿಕ ಶೋಷಣೆ ಮತ್ತು ವಾರ್ಷಿಕ ಕಪ್ಪವನ್ನು ವಿರೋಧಿಸಿ ಹೋರಾಡಿದಳು. ಮೋಗೆರು ಎಂಬ ಮೀನುಗಾರ ಸಾಹಸಿ ಸೈನಿಕರು ಕರಾಳ ರಾತ್ರಿಯಲ್ಲಿ ಸಣ್ಣ ದೋಣಿಗಳಲ್ಲಿ ಹೋಗಿ ಸಾವಿರಾರು ತೆಂಗಿನಗರಿಯ ಉರಿಯುವ ದೀವಟಿಗೆಗಳನ್ನು ಕ್ಷಣಾರ್ಧದಲ್ಲಿ ಏಕಕಾಲಕ್ಕೆ ನೌಕೆಯ ಮೇಲೆ ಎಸೆದರು.ಧಗಧಗನೆ ಉರಿಯುವ ನೌಕೆಯಿಂದ ದಿಕ್ಕೆಟ್ಟ ಪೋರ್ಚುಗೀಸ್ ಸೈನಿಕರು ಸಾವಿನಿಂದ ಪಾರಾಗಲು ಸಮುದ್ರಕ್ಕೆ ಹಾರಿದಾಗ ಅಬ್ಬಕ್ಕದೇವಿಯ ಸೈನಿಕರ ಖಡ್ಗ, ಈಟಿಗೆ ಬಲಿಯಾದರು.
4. **ಬ್ರಿಟಿಷರ ವಿರುದ್ಧ ಸಮರ ಸಾರಿದ ಕಿತ್ತೂರು ರಾಣಿ ಚೆನ್ನಮ್ಮನ ವಿರುದ್ಧ ನಡೆಸಿದ ಒಳಸಂಚೇನು?**
   ಬೆಳಗಾವಿ ಜಿಲ್ಲೆಯ ಕಿತ್ತೂರು ಚೆನ್ನಮ್ಮ ಬಲಾಢ್ಯ ಬ್ರಿಟಿಷರನ್ನು ಸೋಲಿಸಿದಳು.ಅವಳು ಸೆರೆಯಾಳುಗಳನ್ನು ಅದರಲ್ಲೂ ಮಹಿಳೆ ಮತ್ತು ಮಕ್ಕಳನ್ನು ಅಕ್ಕರೆಯಿಂದ ಕಂಡ ಕರುಣಾಮಯಿ, ಮುಂದೆ ಅವಳ ಕಡೆಯ ದೇಶದ್ರೋಹಿಗಳು ಹಿತಶತ್ರುಗಳೊಂದಿಗೆ ಪಿತೂರಿ ನಡೆಸಿ, ಮದ್ದಿನಲ್ಲಿ ಸಗಣಿ ಸೇರಿಸಿ ರಾಣಿ ಚೆನ್ನಮ್ಮಳ ತೋಪು ಹಾರದಂತೆ ಮಾಡಿ ಮೋಸಮಾಡಿ ಅವಳನ್ನು ಬಂಧಿಸಿದರು.

## ಪದ್ಯ – 10

**ದಾಸರ ಪದಗಳು ಮನಃಶುದ್ಧಿ – ಪುರಂದರದಾಸರು**

1. **ಮನಸ್ಸನ್ನು ಶುದ್ಧವಾಗಿಡಲು ಅನುಸರಿಸುವ ವಿಧಾನಗಳನ್ನು ತಿಳಿಸಿ.**
   ಮನಸ್ಸನ್ನು ಶುದ್ಧವಾಗಿಡಲು ಮನವನ್ನು ಶೋಧಿಸಬೇಕು.ಕೆಟ್ಟದ್ದು ಮತ್ತು ಒಳ್ಳೆಯದನ್ನು ಬೇರ್ಪಡಿಸಬೇಕು.ನಿತ್ಯವೂ ಪಾಪ, ಪುಣ್ಯದ ಲೆಕ್ಕಾಚಾರಗಳನ್ನು ಹಾಕುತ್ತಾ ಮನಸ್ಸನ್ನು ಶುದ್ಧವಾಗಿಡಬೇಕು.
2. **'ಮುಕ್ತಿ ನಿನಗೆ ಒಂದು ಗೇಣು ದೂರ' ಎಂಬುದನ್ನು ಪುರಂದರದಾಸರು ಹೇಗೆ ವಿವರಿಸಿದ್ದಾರೆ?**
   ತನುವನ್ನು ಖಂಡಿಸಿ ಅಂದರೆ ಶರೀರದ ಆಸೆಗಳನ್ನು ಹಿಡಿತದಲ್ಲಿ ಇಟ್ಟುಕೊಂಡಿರಬೇಕು.ಮನವ ದಂಡಿಸಿ ಎಂದರೆ ಮನಸ್ಸನ್ನು ಅಂಕೆಯುಲ್ಲಿ ಇಟ್ಟುಕೊಂಡಿರಬೇಕು.ಆಗ ಮಾತ್ರ ನಾವು ಪರಮಾತ್ಮನನ್ನು ಕಾಣಬಹುದು.ಆಗ ಮುಕ್ತಿ ಒಂಬತ್ತು ಅಂಗುಲದಷ್ಟು ಹತ್ತಿರ ಎಂದು ಪುರಂದರದಾಸರು ಹೇಳುತ್ತಾರೆ.
3. **ಎಷ್ಟೇ ಸಾಧನೆ ಮಾಡಿದರು ಕೊನೆಗೆ ಸಿದ್ಧಿ ದೊರೆಯಲು ವ್ಯಕ್ತಿ ತನ್ನ ದೃಷ್ಟಿಯನ್ನು ಎಲ್ಲಿ ಕೇಂದ್ರೀಕರಿಸಬೇಕು?**
   ಧರ್ಮ ಅಧರ್ಮಗಳನ್ನು ವಿಂಗಡಿಸಬೇಕು.ಅಧರ್ಮ ಎಂಬ ನರಗಳ ಬೇರುಗಳನ್ನು ಕತ್ತರಿಸಬೇಕು.ಒಳ್ಳೆಯ ನಡವಳಿಕೆ ರೂಢಿಸಿಕೊಳ್ಳಬೇಕು.ಪರಬ್ರಹ್ಮನಿಗೆ ಶರಣಾಗಬೇಕು.ಆತನೇ ಗತಿ, ಅವನಿಲ್ಲದೆ ಏನು ಇಲ್ಲ ಎಂದು ತನ್ನ ದೃಷ್ಟಿಯನ್ನು ಅವನಲ್ಲಿಯೇ ಕೇಂದ್ರೀಕರಿಸಬೇಕು.

## ಗದ್ಯ ಪಾಠ – 11

**ಹಾಸ್ಯಜೀವಿ ನಾ. ಕಸ್ತೂರಿ – ಅ.ರಾ. ಮಿತ್ರ**

1. **ಕಸ್ತೂರಿಯವರಿಗೆ ಸಂಕಟದ ವಿಷಯವಾದುದು ಯಾವುದು?**
   ಕಸ್ತೂರಿಯವರು ಒಮ್ಮೆ ಅನಾರೋಗ್ಯದ ನಿಮಿತ್ತ ವೈದ್ಯರ ಬಳಿ ಹೋದರು.ಆಗ ವೈದ್ಯರು ಮರುದಿನ ಬೆಳಿಗ್ಗೆ ಮಲ ಪರೀಕ್ಷೆ ಮಾಡುವುದಾಗಿ ಹೇಳಿದರು.ಬೆಳಿಗ್ಗೆ ಎದ್ದು ಡಬ್ಬಿಯಲ್ಲಿ ಮಲವನ್ನು ಸಂಗ್ರಹಿಸಿಟ್ಟುಕೊಂಡು ಆ ಡಬ್ಬಿಯ ಮೇಲೆ 'ಕಸ್ತೂರಿ' ಎಂದು ಬರೆದು ತೆಗೆದುಕೊಂಡು ಹೋಗುವುದು ಕಸ್ತೂರಿಯವರಿಗೆ ಸಂಕಟದ ವಿಷಯವಾಗಿತ್ತು.
2. **ಹಾಸ್ಯಗಾರನ ಲಕ್ಷಣಗಳೇನು?**
   ಬಳಸುವ ಶಬ್ದದ ಸುತ್ತಮುತ್ತ ವಿಹಾರ ಮಾಡಿ ರೂಢಿಯ ಅರ್ಥವನ್ನು ವಿಚಿತ್ರವಾಗಿ ತಿರುಚಿ ನಾನಾರ್ಥ ಸಂಪಾದನೆಗೆ ಅವನ್ನು ಬಳಸಿಕೊಳ್ಳುವುದೇ ಹಾಸ್ಯಗಾರನ ಲಕ್ಷಣ.
3. **ಕನ್ನಡ ಭಾಷೆಯ ಒಳಸತ್ವವನ್ನು ಚಿಮ್ಮಿಸಿದವರು ಯಾರು ಯಾರು?**
   ಕಸ್ತೂರಿ, ಕೈಲಾಸಂ, ರಾಶಿ, ವೈ ಎನ್ ಕೆ ಮತ್ತು ಲಾಂಗೂಲಾಚಾರ್ಯ ಮೊದಲಾದವರು ಧಾರಾಳವಾಗಿ ಮಾಡಿ ಭಾಷೆಯ ಒಳಸತ್ವವನ್ನು ಚಿಮ್ಮಿಸಿದ್ದಾರೆ.
4. **ಕಸ್ತೂರಿಯವರ ಆರಂಭಿಕ ಜೀವನ ಹೇಗೆ ನಡೆಯಿತು?**
   ಬಿ.ಎ. ಪರೀಕ್ಷೆಯನ್ನು ಪ್ರಥಮ ಸ್ಥಾನ ಪಡೆದು, ದಾಮೋದರ ಪೊಟ್ಟಿ ಎಂಬುವವರ ಪತ್ರಿಕೆಗೆ ಪೋಸ್ಟ್ ರೈಟರ್ ಆಗಿ ಬಿಟ್ಟಿ ಮನೆಯನ್ನು, ಆ ಮನೆಯ ಕಾಂಪೌಂಡಿನ ತೆಂಗಿನ ಫಸಲನ್ನು, ತಿಂಗಳಿಗೆ ಹದಿನೈದು ರೂಪಾಯಿ ಸಂಭಾವನೆ ಪಡೆದು, ಕಸ್ತೂರಿ ಅವರು ತಮ್ಮ ಆರಂಬಿಕ ಜೀವನ ಆರಂಭಿಸಿದರು.

5. **'ಆಶುನಾಟಕ'ಗಳೆಂದರೇನು? ಕೆಲವು ಉದಾಹರಣೆ ಕೊಡಿ.**

ಸ್ಥಳದಲ್ಲಿ ಕಥೆ, ಪಾತ್ರ, ಮಾತು, ನಟನೆ ಮತ್ತು ನಾಟಕದ ಅಂತ್ಯವನ್ನು ನಿರ್ಧರಿಸಿ, ಬರೆಯದೆ ತಕ್ಷಣವೇ ಅಭಿನಯಿಸುವ ನಾಟಕಗಳೇ ಆಶುನಾಟಕಗಳು.ಉದಾ : ಯದ್ವಾತದ್ವಾ, ಡೊಂಕುಬಾಲ, ಅಲ್ಲೋಲಕಲ್ಲೋಲ, ಉಪಾಯವೇದಾಂತ ಇನ್ನು ಮುಂತಾದವು.

## ಪದ್ಯ – 12

**ಜಾನಪದ** **– ಸಂಗ್ರಹ**

1. **ರೈತನು ದನಕರುಗಳು ಹೇಗಾದವೆಂದು ಮಳೆರಾಯನಲ್ಲಿ ನಿವೇದಿಸುತ್ತಾನೆ?**
   ರಕ್ಷಿಸುವವರಿಲ್ಲದೆ ಈ ಭೂಮಿ ಬತ್ತಿ ಹೋಗಿದೆ.ದನಕರುಗಳು ಸೊರಗಿ ಹೋಗಿವೆ. ತಿನ್ನಲು ಮೇವಿಲ್ಲ ಕುಡಿಯಲು ನೀರಿಲ್ಲದೆ ಬಳಲಿ ಬೆಂಡಾಗಿವೆ. ಅವುಗಳ ಹಸಿವನ್ನು ನೀಗಿಸಲು ದಾಹವನ್ನು ತೀರಿಸಲು ಮಳೆ ಬೀಳಬೇಕು. ಅಲ್ಲದೆ ಭೂಮಿಯ ತಾಪವನ್ನು ತಣಿಸಲು ಮಳೆರಾಯ ನೀ ಬೇಗ ಬಂದು ಕರುಣೆ ತೋರಿಸು ಎಂದು ರೈತನು ನಿವೇದಿಸುತ್ತಾನೆ.
2. **ಮೋಡಗಳು ಕಾಣಿಸಿಕೊಂಡಾಗ ರೈತನಿಗಾದ ಸಂತೋಷವೇನು?**
   ಮಳೆ ಸುರಿಸುವ ಮೋಡಗಳು ದಟ್ಟವಾಗಿ ಕಪ್ಪಾಗಿ ಕಾಣುವುದು.ಮೂಡಲ ದಿಕ್ಕಿನಲ್ಲಿ ಮೋಡಗಳು ಆವರಿಸಿದಾಗ ಅವು ಬಿಳಿ ಗೋಡೆಗೆ ಕಪ್ಪು ಬಣ್ಣ ಬಳಿದ ಹಾಗೆ ಕಾಣುವುದು ಮಳೆಯನ್ನು ನಿರೀಕ್ಷಿಸುವರೈತನಿಗೆ ಆ ಕಪ್ಪನೆಯ ಮೋಡವು ಅಂದವಾಗಿ ಕಾಣುತ್ತದೆ ಅದನ್ನು ನೋಡಿ ರೈತನು ತನ್ನ ಕೂಗು ಮಳೆರಾಯ ಕೇಳಿಸಿಕೊಂಡನೆಂದು ಸಂತೋಷ ಪಡುವನು.
3. **ಸ್ವಾತಿ ಮಳೆ ಸುರಿದಾಗ ರೈತನಿಗಾಗುವ ಲಾಭವೇನು?**
   ಸ್ವಾತಿ ಮಳೆ ಹುಯ್ದು ಸಾವಿರಾರು ಕೆರೆ ತುಂಬುವುದು.ಆ ಮಳೆನೀರಿನಿಂದ ಕೆರೆಯೆಲ್ಲ ತುಂಬಿ ಕುಚ್ಚಲು ಮೀನುಗಳು ಹುಟ್ಟಿ ನಗಲಾರಂಭಿಸುತ್ತವೆ ಅವುಗಳನ್ನು ಹಿಡಿದು ಮಾರಿ ರೈತನು ಲಾಭ ಪಡೆದುಕೊಳ್ಳುತ್ತಾನೆ.
4. **ಮಳೆದೇವರಲ್ಲಿ ರೈತನ ಪ್ರಾರ್ಥನೆಯೇನು?**
   ರಕ್ಷಕರಿಲ್ಲದೆ ಬರಿದಾಗಿದೆ ಈ ಭೂಮಿ, ದನಕರುಗಳು ಸೊರಗಿ ಬೆಂಡಾಗಿವೆ. ಮಳೆರಾಯ ನೀ ಬಂದು ಕರುಣಿಸೋ ತಂದೆ ಮೂಡಲ ದಿಕ್ಕಿನಲ್ಲಿ ಮುತ್ತಿನಂತಹ ಸೋನೆ ಮಳೆ ಬರಿಸು. ಬೆಟ್ಟದ ಮೇಲಿರುವ ಭೈರವನೆ ಹುಯ್ಯೋ ಮಳೆರಾಯ.ಸ್ವಾತಿ ಮಳೆಯು ಹುಯ್ದು ಸಾವಿರಾರು ಕೆರೆ ತುಂಬಿ ಹರಿಯಲಿ.ಇಡೀ ಜೀವರಾಶಿಗೆ ನೀನು ಕರುಣೆ ತೋರಿಸು ಎಂದು ಮಳೆ ದೇವರಲ್ಲಿ ರೈತನು ಪರಿ ಪರಿಯಾಗಿ ಪ್ರಾರ್ಥಿಸುತ್ತಾನೆ.

## ಪಠ್ಯ ಪೋಷಕ ಅಧ್ಯಯನ – 1.

**ಹೀಗೊಂದು ಟಾಪ್ ಪ್ರಯಾಣ** **– ಈರಪ್ಪ ಎಂ. ಕಂಬಳಿ**

1. **ಮುಂಡರಿಗಿಗೆ ಹೋಗಲು ಯಾವ ಊರುಗಳ ಮೂಲಕ ಬಸ್ಸು ಪ್ರಯಾಣ ಅನಿವಾರ್ಯ?**
   ಲೇಖಕರು ಒಮ್ಮೆ ತಂಗಿಯೊಬ್ಬಳನ್ನು ಮಾತನಾಡಿಸಿಕೊಂಡು ಬರಲು ಯಲಬುರ್ಗಿಯಿಂದ ಮುಂಡರಗಿಗೆ ಹೊರಟಿದ್ದರು.ಒಳರಸ್ತೆಯಲ್ಲಿ ಕೇವಲ ಐವತ್ತು ಕಿಲೋಮೀಟರು ದೂರವಿತ್ತು.ಆದರೆ ನೇರ ಬಸ್ಸು ಇಲ್ಲದಿದ್ದ ಕಾರಣ ಗದಗ ಮೂಲಕವಾಗಿ, ಇಲ್ಲಾ ಕೊಪ್ಪಳ ಮೂಲಕ ಬಳಸು ಪ್ರಯಾಣ ಮಾಡುವುದು ಅನಿವಾರ್ಯವಾಗಿತ್ತು.ಇದರಿಂದ ಲೇಖಕರು ಕೊಪ್ಪಳ ಮೂಲಕ ಮುಂಡರಗಿಗೆ ಹೋಗುವ ಬಳಸು ದಾರಿಯನ್ನೇ ಆರಿಸಿದರು.
2. **ಬಸ್ಸು ಹೇಗೆ ವಾಲಡುತ್ತ ಹೊರಟಿತು?**
   ಬಸ್‌ನಲ್ಲಿ ಪ್ರಯಾಣ ಮಾಡುವ ಪ್ರಯಾಣಿಕರ ಸಂಖ್ಯೆ ಹೆಚ್ಚು ಅಲ್ಲದೆ ಕೊಪ್ಪಳ ಜಿಲ್ಲಾ ಕೇಂದ್ರ ಮತ್ತು ಸಾರಿಗೆ ಡಿಪೋ ಹೊಂದಿದೆ ಆದರೂ ಬಸ್ಸುಗಳ ವ್ಯವಸ್ಥೆ ಸಾಕಷ್ಟು ಇಲ್ಲದ ಕಾರಣ ಒಮ್ಮೊಮ್ಮೆ ಬಸ್ಸು ಮೇಲೆ ಒಳಗೆ ಭರ್ತಿಯಾಗುವುದು ಸರ್ವಸಾಮಾನ್ಯ.ಹೀಗೆಯೆ ಮೇಲೆ–ಒಳಗೆ ಭರ್ತಿ ತುಂಬಿದ್ದ ಬಸ್ಸು ಥೇಟ್ ಗಬ್ಬದ ಹಂದಿಯಂತೆ ವಾಲಾಡುತ್ತ ಹೊರಟಿತು.
3. **ವಿದ್ಯುತ್ ತಂತಿಗಳು ತಲೆಗೆ ಹತ್ತಿರದಲ್ಲೇ ಹಾದು ಹೋದಾಗ ಲೇಖಕರಿಗೆ ಉಂಟಾದ ಅನುಭವ ಯಾವುದು?**
   ಲೇಖಕರು ಬಸ್ಸು ಒಳಗೆಲ್ಲ ಭರ್ತಿಯಾಗಿದ್ದರಿಂದ ಬಸ್ಸಿನ ಮೇಲೆ ಹತ್ತಿ ಕುಳಿತಿದ್ದರು.ಇಪ್ಪತ್ತು ಕಿಲೋಮೀಟರು ಹಾಗೆ ಪ್ರಯಾಣಿಸುವ ಹೊತ್ತಿಗೆ, ಒಂದುಕಡೆ ನೋಡನೋಡುತ್ತಿದ್ದಂತೆ ರಸ್ತೆಗೆ ಅಡ್ಡವಾಗಿ ಎಳೆಯಲಾಗಿದ್ದ ವಿದ್ಯುತ್ ತಂತಿಗಳು ತಲೆಗೆ ಹತ್ತಿರದಲ್ಲಿಯೇ ಹಾದು ಹೋದಾಗ ಮೈಮರೆತು ಕುಳಿತಿದ್ದವರಿಗೆ ಸಾವೆ ಭುಜ ಸವರಿ ಹೋದಂತೆ ಅನುಭವ ಆಗಿತ್ತಂತೆ.ಅಲ್ಲದೆ ಎದೆಯ ಬಡಿತ ಹೆಚ್ಚಿದಂತೆ ಆಗಿತ್ತು.

4. **ಬಿಸಿಲ ಸೀಮೆಯ ಜನರ ಸ್ವಭಾವ ಎಂತಹದು?**

ಬಿಸಿಲ ಸೀಮೆಯ ಜನರ ಸ್ವಭಾವ ಎಂತಹದೆಂದರೆ, ಕಷ್ಟಸಹಿಷ್ಣುಗಳು, ಸಾಹಸಪ್ರಿಯರು ಆಗಿರುತ್ತಾರೆ.ಅವರು ಯಾವುದೇ ಕಷ್ಟಗಳನ್ನು ಬೇಸರಪಡದೆ ಸಹಿಸುತ್ತಾರೆ.ಅಲ್ಲದೆ ಯಾವುದೇ ರೀತಿಯ ಅನಾನುಕೂಲ ಪರಿಸ್ಥಿತಿಯಲ್ಲೂ ಅದನ್ನು ಎದುರಿಸುವ ಸಾಹಸ ತೋರುತ್ತಾರೆ.

**ಪಠ್ಯ ಪೋಷಕ ಅಧ್ಯಯನ –2.**

**ಸೋಮೇಶ್ವರ ಶತಕ – ಪುಲಿಗೆರೆ ಸೋಮನಾಥ**

1. **ಮೊದಲ ಪದ್ಯದಲ್ಲಿ ಕವಿಯು ಜನರಿಗೆ ಹೇಳುವ ಬುದ್ಧಿವಾದವನ್ನು ವಿವರಿಸಿ.**
ವಿನಯವಿಲ್ಲದ ಮಗನೂ, ಪರಿಶುದ್ಧನಲ್ಲದ ಋಷಿಯೂ, ಬೈಯುವ ಹೆಂಡತಿಯೂ, ರುಚಿಗೆಟ್ಟ ಅನ್ನದ ಊಟವೂ, ಕೆಟ್ಟವರ ಸಹವಾಸದಲ್ಲಿರುವ ದೊಡ್ಡ ಮನುಷ್ಯನೂ, ಯುದ್ಧಕ್ಕಾಗದ ಭಟನೂ, ಕಷ್ಟಕ್ಕಾಗದ ನೆಂಟನೂ ಶಿವನನ್ನು ಬಿಟ್ಟಿರುವ ಆಚಾರವಂತನೂ ಆಯಾ ಹೆಸರಿಗೆ ಅರ್ಹರಲ್ಲ ಎಂದು ಬುದ್ಧಿವಾದ ಹೇಳಿದ್ದಾರೆ.
2. **ಸಮಾಜದಲ್ಲಿ ಜವಾಬ್ದಾರಿಯ ಉದ್ಯೋಗ ಅಪೇಕ್ಷೆಯುಳ್ಳವರಿಗೆ ಯಾವ ಸಾಮರ್ಥ್ಯ ಇರಬೇಕೆಂದು ಕವಿ ಹೇಳಿದ್ದಾನೆ?**
ಯುದ್ಧ ಮಾಡಬಲ್ಲವನೇ ಭಟನಾಗಬೇಕು.ನಾನಾ ವಿಧದ ಚಮತ್ಕಾರಗಳನ್ನು ತಿಳಿದವನೇ ಮಂತ್ರಿಯಾಗಬೇಕು.ಯಾರು ಏನೆಂದರೂ ಕೋಪಿಸಿಕೊಳ್ಳದೆ ತಾಳ್ಮೆಯಿಂದ ಇರುವವನೇ ದೊರೆಯಾಗಬೇಕು.ಕಾಮ ಕ್ರೋಧ ಮೊದಲಾದ ಅರಿಷಡ್ವರ್ಗಗಳನ್ನು ಗೆಲ್ಲುವ ಸಾಮರ್ಥ್ಯವುಳ್ಳವನೇ ಯೋಗಿಯಾಗಬೇಕು.ತನ್ನ ಕೈಯಿಂದ ದಂಡ ತೆರುವ ಸಾಮರ್ಥ್ಯವಿರುವವನು ಮಾತ್ರ ಮತ್ತೊಬ್ಬರು ಮಾಡುವ ಸಾಲಕ್ಕೆ ಹೊಣೆಯಾಗಬೇಕು.

**ಪಠ್ಯ ಪೋಷಕ ಅಧ್ಯಯನ – 3.**

**ಮಹಾಶಿಲ್ಪಿ – ಪ್ರೇಮ ಭಟ್**

1. **ಧರ್ಮಪದನು ತನ್ನ ಭಾವನೆಗಳನ್ನು ಏಕೆ ಹತ್ತಿಕ್ಕಿಕೊಂಡ?**
ಧರ್ಮಪದನು ತನ್ನ ತಂದೆಯನ್ನು ನೋಡಿದ.ತಂದೆಯಾದ 'ವಿಶು'ವಿನ ಕಣ್ಣುಗಳು ಆಳಕ್ಕಿಳಿದಿವೆ, ನೆರೆಕೂದಲಿನ ಗಡ್ಡ, ತುಟಿಗಳಲ್ಲಿ ಜೀವಸೆಲೆಯಿಲ್ಲ. ದೀರ್ಘವಾದ ಅಗಲಿಕೆಯಿಂದ ತಳಮಳಗೊಂಡಿದ್ದ ಮಗನಿಗೆ ತಂದೆಯ ಸ್ಥಿತಿಯನ್ನು ಕಂಡು ಪ್ರೀತಿ ಉಕ್ಕಿ ಬಂದಂತಾಯಿತು.ಅಲ್ಲದೆ ತಂದೆಯನ್ನು ಆಲಂಗಿಸಿಕೊಳ್ಳುವ ಆಸೆ ತೀವ್ರವಾಯಿತು.ಆದರೆ ತಾಯಿಯ ಎಚ್ಚರಿಕೆ ಮಾತು ನೆನಪಾಗಿ ತನ್ನ ಭಾವನೆಗಳನ್ನು ಹತ್ತಿಕ್ಕಿಕೊಂಡ.
2. **ಮಹಾಶಿಲ್ಪಿ ವಿಶುವಿಗೆ ಧರ್ಮಪದನು ನೀಡಿದ ಆಶ್ವಾಸನೆ ಏನು?**
ಮಹಾಶಿಲ್ಪಿ ವಿಶುವಿಗೆ ಧರ್ಮಪದನು ತಾನು ಖಂಡಿತವಾಗಿ ದೇವಾಲಯದ ಕಲಶವನ್ನು ನಿಲ್ಲಿಸುತ್ತೇನೆ.ತಾವು ಅನುಮಾನ ಪಡುವುದು ಬೇಡ ಒಂದೇ ಒಂದು ಅವಕಾಶ ಕೊಟ್ಟು ನೋಡಿ ನನ್ನ ಪ್ರಯತ್ನಕ್ಕೆ ಜಯ ಖಚಿತ. ನಿಮ್ಮ ನಿಟ್ಟುಸಿರು ನೀಗುವಂತೆ ಮಡುತ್ತೇನೆ.ನಾನು ವಯಸ್ಸಿನಲ್ಲಿ ಚಿಕ್ಕವನು ಎಂದು ಅಲಕ್ಷ್ಯ ತೋರಬೇಡಿ.ನಾನು ಖಂಡಿತ ಈ ಪ್ರಯತ್ನದಲ್ಲಿ ಜಯಶಾಲಿಯಾಗುತ್ತೇನೆ ಎಂದು ಆಶ್ವಾಸನೆ ನೀಡಿದನು.
3. **ಧರ್ಮಪದನನ್ನು ನೋಡಿ ವಿಶುವಿನಲ್ಲಿ ಮೂಡಿದ ಭಾವನೆಗಳೇನು?**
ಧರ್ಮಪದನನ್ನು ನೋಡಿ ವಿಶುವಿನಲ್ಲಿ ಇವನು ತನ್ನ ಮಗನೇ ಇರಬೇಕೆಂದು ಕರುಳು ಕೂಗಿ ಹೇಳಿದಂತಾಯಿತು.ಸುಂದರ ಧೃಢಕಾಯದ ವ್ಯಕ್ತಿ, ನೋಡಿದ ತಕ್ಷಣ ಅವನ ಮೇಲೆ ಪ್ರೀತಿಯ ಭಾವ ಉಕ್ಕಿತು.ಮನಸ್ಸು ತನ್ನ ಮಗನ ಬಗ್ಗೆಯೇ ಯೋಚಿಸಿತು.ತಾನು ಬಿಟ್ಟು ಬಂದಾಗ ಮಗನಿಗೆ ಆರೇಳು ವರ್ಷವಿತ್ತು ಎಂದೆನಿಸಿತ್ತು. ಈಗ ಆ ಮಗನಿಗೆ ಹದಿನೇಳರ ಪ್ರಾಯ ಇರಬಹುದು.ಇವನಿಗೂ ಅಷ್ಟೆ ವಯಸ್ಸಾಗಿರಬಹುದು ಎಂದು ಆಲೋಚಿಸಿದ.ಜೊತೆಗೆ ಇವನೇ ತನ್ನ ಮಗ ಏಕಾಗಿರಲು ಬಾರದು ಎಂದು ಅವನ ಮನಸ್ಸು ಹೇಳಿತ್ತು.
4. **ವಿಶು ಜ್ಞಾನ ತಪ್ಪಿ ಏಕೆ ಕೆಳಗುರುಳಿದ?**
ತಂದೆಯಿಂದ ಅನುಮೋದನೆ ದೊರೆತ ಕ್ಷಣವೇ ಧರ್ಮಪದ ಉಳಿಯನ್ನು ಕೈಗೆತ್ತಿಕೊಂಡ. ಕಲಶ ಕೂಡಿಸಬೇಕಾದ ಜಾಗವನ್ನು ಒಂದೆರಡು ಕ್ಷಣ ನಿರುಕಿಸಿದ.ಎಲ್ಲರೂ ನೋಡುನೋಡುತ್ತಿರುವಾಗಲೆ ಕಲಶ ಕೂಡಿಸಿಬಿಟ್ಟ.ಶತಪ್ರಯತ್ನ ಮಾಡಿದರೂ ತನ್ನಿಂದ ಕೂಡಿಸಲು ಸಾಧ್ಯವಾಗದ್ದನ್ನು ಅರ್ಧ ಗಂಟೆಯಲ್ಲಿ ಈ ಹುಡುಗ ಕೂಡಿಸಿಬಿಟ್ಟನಲ್ಲ ಎಂದು ವಿಶು ನೋವನ್ನು ಅನುಭವಿಸಿದ.ಅಲ್ಲದೆ ಅವಮಾನವಾದಂತೆ ಆಗಿ ತಲೆತಗ್ಗಿಸಿದ.ತನ್ನ ಪ್ರತಿಭೆಗೆ ಮುಳ್ಳಾಗಿ ಇವನು ಎಲ್ಲಿಂದ ಬಂದ ಎನಿಸಿತು. ಈಗಿವನು ಬಿರುದು ಬಾವಲಿಗಳನ್ನು ಮಹಾರಾಜರಿಂದ ಪಡೆಯುವುದನ್ನು ನಾನು ನೋಡಬೇಕೆ?ತನ್ನ ಕೆಳಗೆ ಕೆಲಸ ಮಾಡಿದ ಶಿಲ್ಪಿಗಳೆದುರು ನಾನು ಸೋತೆನಲ್ಲ ಎಂದು ಜ್ಞಾನ ತಪ್ಪಿ ಕೆಳಗುರುಳಿದ.

**ಕೆಳಗಿನ ಗದ್ಯಭಾಗವನ್ನು ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

## ಗದ್ಯ – 1.

ಕಬೀರ್ ವೃತ್ತಿಯಿಂದ ನೇಕಾರನಾಗಿದ್ದ.ಒಂದು ಮುಸಲ್ಮಾನ ಕುಟುಂಬದಲ್ಲಿ ಹುಟ್ಟಿದನು.ಜಾತಿ ಪದ್ಧತಿ, ಮೂರ್ತಿಪೂಜೆ, ತೀರ್ಥಯಾತ್ರೆ, ಉಪವಾಸ ವ್ರತ, ಹರಕೆ ಹೊರುವುದು. ಈ ಮೊದಲಾದ ಆಚರಣೆಗಳನ್ನು ಕಬೀರ್ ತಿರಸ್ಕರಿಸಿದನು.ನಾನು ಅಲ್ಲಾ ಮತ್ತು ರಾಮನ ಮಗ ಎಂದು ಅವನು ಘೋಷಿಸಿಕೊಂಡನು.ಹಿಂದೂ ಮುಸಲ್ಮಾನರ ಕಲಹಗಳನ್ನು ಕಂಡು ಕಬೀರ್ ಬೇಸರ ಪಡುತ್ತಿದ್ದ."ಹಿಂದೂಗಳು" ರಾಮ ಎನ್ನುತ್ತಾರೆ.ಮುಸಲ್ಮಾನರು 'ರಹೀಮ' ಎನ್ನುತ್ತಾರೆ.ಆದರೆ ಪರಸ್ಪರ ಹೋರಾಡಿ ಕೊಲೆಗಳನ್ನು ಮಾಡುತ್ತಾರೆ.ಸತ್ಯ ಯಾರಿಗೂ ತಿಳಿದಿಲ್ಲ ಎಂದು ಕಬೀರ್ ವಿಷಾದಿಸಿದ.ಒಳ್ಳೆಯ ಹಾಡುಗಾರನೂ, ಕವಿಯೂ ಆಗಿದ್ದ. "ಕಬೀರ್ ದೋಹಾ"ಗಳೆಂದು ಕರೆಯಲ್ಪಡುವ ದ್ವಿಪದಿಗಳನ್ನು ರಚಿಸಿದ್ದಾನೆ. ಕಬೀರನ ಅನುಯಾಯಿಗಳನ್ನು ಕಬೀರ್ ಪಂಥಿಗಳು ಅಥವಾ "ಕಬೀರ್ ಮಾರ್ಗಿ"ಗಳು ಎನ್ನುತ್ತಾರೆ.

ಪ್ರಶ್ನೆಗಳು:

1. **ಕಬೀರ್ ವೃತ್ತಿ ಯಾವುದು?**
2. **ಕಬೀರ್ ಏನನ್ನು ತಿರಸ್ಕರಿಸಿದನು?**
3. **ಕಬೀರ್ ಏನೆಂದು ಘೋಷಿಸಿಕೊಂಡನು?**
4. **ಅವನ ಅನುಯಾಯಿಗಳನ್ನು ಏನೆಂದು ಕರೆಯುತ್ತಾರೆ?**

**ಉತ್ತರಗಳು:**

1. ಕಬೀರ್ ವೃತ್ತಿಯಿಂದ ನೇಕಾರನಾಗಿದ್ದ.
2. ಕಬೀರ್ ಜಾತಿಪದ್ಧತಿ, ಮೂರ್ತಿಪೂಜೆ, ತೀರ್ಥಯಾತ್ರೆ, ಉಪವಾಸ ಹರಕೆ ಹೊರುವುದು ವ್ರತ ಇತ್ಯಾದಿಗಳನ್ನೆಲ್ಲಾ ತಿರಸ್ಕರಿಸಿದನು.
3. ಕಬೀರ್ ತಾನು ಅಲ್ಲಾ ಮತ್ತು ರಾಮನ ಮಗನೆಂದು ಘೋಷಿಸಿಕೊಂಡನು.
4. ಅವನ ಅನುಯಾಯಿಗಳನ್ನು ಕಬೀರ್ ಪಂಥಿಗಳು ಅಥವಾ ಕಬೀರ್ ಮಾರ್ಗಿಗಳು ಎನ್ನುತ್ತಾರೆ.

## ಗದ್ಯ – 2.

ಕಟ್ಟಿಗೆ ಚೂರುಗಳು ತರಗಲೆ, ಪ್ರಾಣಿಗಳ ಮಲ, ಬತ್ತದ ಹೊಟ್ಟು ಮುಂತಾದವುಗಳು ವಿಸರ್ಜಿತ ವಸುಗಳು.ಇವುಗಳನ್ನು ಸಾವಯವ ವಿಸರ್ಜಿತ ವಸ್ತುಗಳು ಎಂದು ಕರೆಯುತ್ತೇವೆ.ಈ ವಿಸರ್ಜಿತ ವಸ್ತುಗಳನ್ನು ಎರಡು ರೀತಿಯಲ್ಲಿ ಉಪಹೋಗಿಸಿ ಶಕ್ತಿ ಪಡೆಯಬಹುದು.ಕಟ್ಟಿಗೆ, ತರಗೆಲೆ, ಸಗಣಿ ಮುಂತಾದವುಗಳನ್ನು ಒಣಗಿಸಿದ ನಂತರ ಅವುಗಳನ್ನು ಉರಿಸಿ, ನೇರವಾಗಿ ಶಕ್ತಿಯನ್ನು ಪಡೆಯಬಹುದು.ಇವುಗಳನ್ನು ಮನೆಯಲ್ಲಿ ಅಡಿಗೆ ಮಾಡುವುದಕ್ಕೆ, ನೀರು ಕಾಯಿಸುವುದಕ್ಕೆ ಉಪಯೋಗಿಸಬಹುದು.ಇದಲ್ಲದೆ ವಿಸರ್ಜಿತ ವಸ್ತುಗಳನ್ನು ಕೊಳೆಯಿಸಿ, ಅವುಗಳಿಂದ ಬರುವ ಅನಿಲವನ್ನು ಸಂಗ್ರಹಿಸಲೂ ಬಹುದು. ಹಳ್ಳಿಗಳಲ್ಲಿ ಸಗಣಿಯಿಂದ ಗೋಬರ್ ಗ್ಯಾಸ್ ತಯಾರಿಸಿ ಅಡಿಗೆಗೂ ಬಳಸುತ್ತಾರೆ.

ಪ್ರಶ್ನೆಗಳು:

1. **ಸಾವಯವ ವಿಸರ್ಜಿತ ವಸ್ತುಗಳೆಂದರೇನು?**
2. **ಇವುಗಳಿಂದ ಶಕ್ತಿ (ಶಾಖ) ಪಡೆಯುವುದು ಹೇಗೆ?**
3. **ಅನಿಲವನ್ನು ಸಂಗ್ರಹಿಸುವುದು ಹೇಗೆ?**
4. **ಸಗಣಿಯಿಂದ ಏನನ್ನು ತಯಾರಿಸುತ್ತಾರೆ?**

ಉತ್ತರಗಳು:

1. ಕಟ್ಟಿಗೆ ಚೂರುಗಳು ತರಗಲೆ, ಪ್ರಾಣಿಗಳ ಮಲ, ಬತ್ತದ ಹೊಟ್ಟು ಮುಂತಾದವುಗಳು ವಿಸರ್ಜಿತ ವಸುಗಳು. ಇವುಗಳನ್ನು ಸಾವಯವ ವಿಸರ್ಜಿತ ವಸ್ತುಗಳು ಎಂದು ಕರೆಯುತ್ತೇವೆ
2. ಇವುಗಳನ್ನು ಉರುವಲಾಗಿ ನೇರವಾಗಿ ಉಪಯೋಗಿಸಬಹುದು. ಅಥವಾ ಇವುಗಳನ್ನು ಕೊಳೆಸಿ ಗೋಬರ್ ಗ್ಯಾಸ್ ತಯಾರಿಸಿ ಉಪಯೋಗಿಸುವುದು. ಈ ಎರಡೂ ರೀತಿಯಲ್ಲಿ ಶಕ್ತಿಯನ್ನು (ಶಾಖವನ್ನು) ಪಡೆಯಲುಬಹುದು.
3. ವಿಸರ್ಜಿತ ವಸ್ತುಗಳನ್ನು ಕೊಳೆಯಿಸಿ, ಅವುಗಳಿಂದ ಬರುವ ಅನಿಲವನ್ನು ಸಂಗ್ರಹಿಸಲೂ ಬಹುದು.
4. ಹಳ್ಳಿಗಳಲ್ಲಿ ಸಗಣಿಯಿಂದ ಗೋಬರ್ ಗ್ಯಾಸ್ ತಯಾರಿಸುತ್ತಾರೆ.

## ಗದ್ಯ – 3.

ನಮ್ಮ ದೇಶದಲ್ಲಿ ಮೂಢನಂಬಿಕೆಗಳು ತುಂಬಿ ತುಳುಕುತ್ತಿವೆ. ಈ ಮೂಢನಂಬಿಕೆಗಳನ್ನು ಪ್ರತಿಪಾದಿಸುವ ವಿದ್ಯಾವಂತನು ಮೂಢನಂಬಿಕೆಯನ್ನು ಹೊಂದಿರುವ ಅವಿದ್ಯಾವಂತನಿಗಿಂತಲೂ ಹೆಚ್ಚು ಅಪಾಯಕಾರಿ.ಈ ಗುಂಪಿನಲ್ಲಿ ಪ್ರಸಿದ್ಧ ಶಿಕ್ಷಣವೇತ್ತರೂ ಇದ್ದಾರೆ ಎನ್ನುವುದು ಖಂಡನಾರ್ಹ.ಮೂಢನಂಬಿಕೆಗಳ ಬಗ್ಗೆ ತಳೆಯುವ ಉದಾಸೀನಭಾವ ಮತ್ತು ನಿಷ್ಕ್ರಿಯತೆ ಸಮಾಜಕ್ಕೆ ತುಂಬಾ ಹಾನಿಯನ್ನುಂಟು ಮಾಡುತ್ತದೆ.ಈ ರೀತಿಯ ತಟಸ್ಥ ಮನೋಭಾವ ಅರ್ಥಹೀನ ಹಾಗೂ ಅವೈಜ್ಞಾನಿಕ ವಿಚಾರಗಳಿಗೆ ಪರೋಕ್ಷವಾಗಿ ಸಮರ್ಥನೆ ಕೊಟ್ಟಂತೆ ಆಗುತ್ತದೆ.ಅಲ್ಲದೆ ಮೌನ ಸಮ್ಮತಿಯ ಲಕ್ಷಣ ಆಗಿಬಿಡಬಹುದು.

ಪ್ರಶ್ನೆಗಳು:

1. **ಸಮಾಜಕ್ಕೆ ತುಂಬಾ ಹಾನಿಯನ್ನುಂಟು ಮಾಡುವ ಅಂಶಗಳಾವುವು?**
2. **ಮೌನವಾಗಿರುವುದು ಯಾವುದರ ಲಕ್ಷಣ?**
3. **ತಟಸ್ಥ ಮನೋಭಾವವು ಯಾವುದಕ್ಕೆ ಸಮರ್ಥನೆ ಕೊಟ್ಟಂತೆ ಆಗುತ್ತದೆ?**
4. **ನಮ್ಮ ದೇಶದಲ್ಲಿ ತುಂಬಿ ತುಳುಕುತ್ತಿರುವ ಸಾಮಾಜಿಕ ಅನಿಷ್ಟ ಯಾವುದು?**
5.

**ಉತ್ತರಗಳು:**

1. ಮೂಢನಂಬಿಕೆಗಳ ಬಗ್ಗೆ ತಳೆಯುವ ಉದಾಸೀನಭಾವ ಮತ್ತು ನಿಷ್ಕ್ರಿಯತೆ ಸಮಾಜಕ್ಕೆ ತುಂಬಾ ಹಾನಿಯನ್ನುಂಟು ಮಾಡುತ್ತದೆ.
2. ಮೌನವು ಸಮ್ಮತಿಯ ಲಕ್ಷಣ
3. ತಟಸ್ಥ ಮನೋಭಾವ ಅರ್ಥಹೀನ ಹಾಗೂ ಅವೈಜ್ಞಾನಿಕ ವಿಚಾರಗಳಿಗೆ ಪರೋಕ್ಷವಾಗಿ ಸಮರ್ಥನೆ ಕೊಟ್ಟಂತೆ ಆಗುತ್ತದೆ.
4. ನಮ್ಮ ದೇಶದಲ್ಲಿ ತುಂಬಿ ತುಳುಕುತ್ತಿರುವ ಸಾಮಾಜಿಕ ಅನಿಷ್ಟ ಮೂಢನಂಬಿಕೆ ಆಗಿದೆ.

## ಗದ್ಯ – 4

ವಿಜಯನಗರ ಕಾಲದ ಅತ್ಯಂತ ಸುಂದರವಾದ ದೇವಾಲಯಗಳನ್ನು ಹಂಪಿ, ಲೇಪಾಕ್ಷಿ, ತಾಡಪತ್ರಿ ಮತ್ತಿತರ ಕಡೆಗಳಲ್ಲಿ ಕಾಣಬಹುದು. ಹಂಪಿಯ ವಿರೂಪಾಕ್ಷ ದೇವಾಲಯದ ಹೆಬ್ಬಾಗಿಲಿನ ಮೇಲೆ ವಿಜಯನಗರದ ಅರಸರು ಕಟ್ಟಿಸಿದ ಅತ್ಯಂತ ಎತ್ತರವಾದ ಗೋಪುರ ನಿಂತಿದೆ. ವಿಠಲ ದೇವಾಲಯವು ಶ್ರೇಷ್ಠ ವಾಸ್ತುಶಿಲ್ಪಕ್ಕೆ ಪ್ರಖ್ಯಾತವಾಗಿದೆ. ಬೃಹತ್ತಾದ ಮತ್ತು ಆಧಾರವಿಲ್ಲದೆ ನಿಂತಿರುವ ಉಗ್ರನರಸಿಂಹ, ಗಣೇಶ, ನಂದಿ ಮೊದಲಾದ ವಿಗ್ರಹಗಳು ಆ ಕಾಲದ ಉತ್ಕೃಷ್ಟ ಕಲೆಗಳಾಗಿವೆ.

**ಪ್ರಶ್ನೆಗಳು:**

1. **ವಿಜಯನಗರದ ಅತ್ಯಂತ ಸುಂದರ ದೇವಾಲಯಗಳನ್ನು ಎಲ್ಲಿ ಕಾಣಬಹುದು?**
2. **ಅತ್ಯಂತ ಎತ್ತರವಾದ ಗೋಪುರ ಎಲ್ಲಿ ನಿಂತಿದೆ?**
3. **ವಿಠಲ ದೇವಾಲಯವು ಯಾವುದಕ್ಕೆ ಪ್ರಸಿದ್ಧವಾಗಿದೆ?**
4. **ಆ ಕಾಲದ ಉತ್ಕೃಷ್ಟ ಕಲೆಗಳು ಯಾವುವು?**

**ಉತ್ತರಗಳು:**

1. ವಿಜಯನಗರ ಕಾಲದ ಅತ್ಯಂತ ಸುಂದರವಾದ ದೇವಾಲಯಗಳನ್ನು ಹಂಪಿ, ಲೇಪಾಕ್ಷಿ, ತಾಡಪತ್ರಿ ಮತ್ತಿತರ ಕಡೆಗಳಲ್ಲಿ ಕಾಣಬಹುದು.
2. ಹಂಪಿಯ ವಿರೂಪಾಕ್ಷ ದೇವಾಲಯದ ಹೆಬ್ಬಾಗಿಲಿನ ಮೇಲೆ ಅತ್ಯಂತ ಎತ್ತರವಾದ ಗೋಪುರ ನಿಂತಿದೆ.
3. ವಿಠಲ ದೇವಾಲಯವು ಶ್ರೇಷ್ಠ ವಾಸ್ತುಶಿಲ್ಪಕ್ಕೆ ಪ್ರಖ್ಯಾತವಾಗಿದೆ.
4. ಬೃಹತ್ತಾದ ಮತ್ತು ಆಧಾರವಿಲ್ಲದೆ ನಿಂತಿರುವ ಉಗ್ರನರಸಿಂಹ, ಗಣೇಶ, ನಂದಿ ಮೊದಲಾದ ವಿಗ್ರಹಗಳು ಆ ಕಾಲದ ಉತ್ಕೃಷ್ಟ ಕಲೆಗಳಾಗಿವೆ.

ಲೇಖಕರ / ಕವಿಗಳ ಪರಿಚಯದ ಪಟ್ಟಿ

| ಕ್ರ. ಸಂ. | ಪಾಠದ ಹೆಸರು | ಲೇಖಕರ / ಕವಿಗಳ ಹೆಸರು | ಕಾಲ | ಜನ್ಮಸ್ಥಳ | ಪ್ರಮುಖ ಕೃತಿಗಳು | ಪ್ರಶಸ್ತಿಗಳು/ ಬಿರುದುಗಳು |
|---|---|---|---|---|---|---|
| 1 | ಲಾಕಪ್ಪಿನಲ್ಲಿ ಒಂದು ರಾತ್ರಿ | ಗೊರೂರು ರಾಮಸ್ವಾಮಿ ಅಯ್ಯಂಗಾರ್ | ಕ್ರಿ. ಶ. 1904 | ಗೊರೂರು | ಅಮೆರಿಕಾದಲ್ಲಿ ಗೊರೂರು, ಹೇಮಾವತಿ, ನಮ್ಮ ಊರಿನ ರಸಿಕರು | ಕೇಂದ್ರ ಸಾಹಿತ್ಯ ಅಕಾಡಮಿ ಪ್ರಶಸ್ತಿ ಗೌರವ ಡಿಲಿಟ್ ಪದವಿ |
| 2 | ಕರ್ನಾಟಕ(ತ್ವ) | ಜಿ.ಪಿ. ರಾಜರತ್ನಂ | ಕ್ರಿ.ಶ. 1908 | ರಾಮನಗರ ಜಿಲ್ಲೆಯ ರಾಮನಗರ | ರತ್ನನ ಪದಗಳು, ಏಸುಕ್ರಿಸ್ತ, ಗೌತಮಬುದ್ಧ | ರಾಜ್ಯೋತ್ಸವ ಪ್ರಶಸ್ತಿ, ಮೈಸೂರು ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್ |
| 3. | ಸ್ಪಿನ್ ಮಾಂತ್ರಿಕ ಅನಿಲ್ ಕುಂಬ್ಳೆ | ಸಂಪಾದಿತ | | | | |
| 4. | ಧ್ವಜ ರಕ್ಷಣೆ | ಎಸ್. ಆರ್. ರೋಹಿಡೇಕರಕ್ | ಕ್ರಿ.ಶ. 1915 | ಬಿಜಾಪುರ | ಮುರು ಏಕಾಂಕ ನಾಟಕಗಳು | |
| 5 | ಕರ್ನಾಟಕದ ವೀರ ವನಿತೆಯರು | ಡಾ॥ ವಿಜಯಲಕ್ಷ್ಮಿ ಬಾಳೆಕುಂದ್ರಿ | ಕ್ರಿ.ಶ. 1950 | ಬೆಳಗಾವಿ | ವೈದ್ಯಕೀಯ ಕೃತಿಗಳು ಜೀವನಧಾರೆ | ಗೌರವ ಡಾಕ್ಟರೇಟ್ ಪದವಿ |
| 6 | ಹಾಸ್ಯ ಜೀವಿ ನಾ.ಕಸ್ತೂರಿ | ಅ.ರಾ. ಮಿತ್ರ | ಕ್ರಿ.ಶ. 1935 | ಹಾಸನ ಜಿಲ್ಲೆಯ ಬೇಲೂರು (ಅಕ್ಕಿಹೆಬ್ಬಾಳು) | ಆರತಕ್ಷತೆ, ಒಳನೋಟಗಳು, ಸ್ಮರಣೀಯರು | |

## ಲೇಖಕರ / ಕವಿಗಳ ಪರಿಚಯದ ಪಟ್ಟಿ

| ಕ್ರ. ಸಂ. | ಪಾಠದ ಹೆಸರು | ಲೇಖಕರ / ಕವಿಗಳ ಹೆಸರು | ಕಾಲ | ಜನ್ಮಸ್ಥಳ | ಪ್ರಮುಖ ಕೃತಿಗಳು | ಪ್ರಶಸ್ತಿಗಳು/ ಬಿರುದುಗಳು |
|---|---|---|---|---|---|---|
| 1 | ಕೋಗಿಲೆ | ಚೆನ್ನವೀರಕಣವಿ | ಕ್ರಿ.ಶ. 1928 | ಗದಗ ಜಿಲ್ಲೆಯ ಹೊಂಬಾಳ | ಆಕಾಶ ಬುಟ್ಟಿ, ನೆಲ ಮುಗಿಲು, ಭಾವಜೀವ | ಕೇಂದ್ರ ಸಾಹಿತ್ಯ ಪ್ರಶಸ್ತಿ ಬೊಂಬಾಯಿ ಸರ್ಕಾರದ ರಾಜ್ಯ ಪ್ರಶಸ್ತಿ |
| 2 | ಒಂದೇ | ಕೆ. ಎಸ್. ನಿಸಾರ್ ಅಹಮದ್ | ಕ್ರಿ.ಶ. 1936 | ದೇವನಹಳ್ಳಿ | ನಿತ್ಯೋತ್ಸವ, ನಾನೆಂಬ ಪರಕೀಯ, ಸುಮೂಹರ್ತ, ಸಮಗ್ರ ಕವಿತೆಗಳು | ರಾಜ್ಯೋತ್ಸವ ಪ್ರಶಸ್ತಿ ಸೊವಿಯತ್ ಲ್ಯಾಂಡ್ ನೆಹರು ಪ್ರಶಸ್ತಿ |
| 3. | ಮಾಯಾದೀಪ | ಬಿ.ಆರ್. ಲಕ್ಷ್ಮಣರಾವ್ | ಕ್ರಿ.ಶ. 1946 | ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ | ಟುವಟಾರ, ಶಾಂಗ್ರಿಲಾ ಭಾರತ ಸಿಂಧು ರಶ್ಮಿ | ಗೊರೂರು ಸಾಹಿತ್ಯ ಪ್ರಶಸ್ತಿ, ಪುತಿನ ಕಾವ್ಯ ಪ್ರಶಸ್ತಿ, ರಾಜ್ಯ ಸಾಹಿತ್ಯ ಅಕಾಡಮಿ ಪ್ರಶಸ್ತಿ |
| 4. | ವಚನ | ಅಂಬಿಗರ ಚೌಡಯ್ಯ | 12ನೇ ಶತಮಾನ | ಹಾವೇರಿ ಜಿಲ್ಲೆಯ ಚೌಡದಾನಪುರ | ವಚನಗಳು | |
| 5 | ದಾಸರ ಪದಗಳು | ಪುರಂದದರ ದಾಸರು | ಕ್ರಿ.ಶ. 1484–1564 | ಪುರಂದರಗಡ | ಕೀರ್ತನೆಗಳು | |
| 6 | ಜಾನಪದ | ಜನಪದರು | | | | |

ಕರ್ನಾಟಕ ಸರ್ಕಾರ
ಆಯುಕ್ತರ ಕಚೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ,
ನೃಪತುಂಗ ರಸ್ತೆ, ಬೆಂಗಳೂರು – 560 001
ಮತ್ತು
ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ,
ನೃಪತುಂಗ ರಸ್ತೆ, ಬೆಂಗಳೂರು.
*ಸಹಯೋಗ*
ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ,
ಮಲ್ಲೇಶ್ವರಂ, ಬೆಂಗಳೂರು.

# ಪ್ರಗತಿ

ಹತ್ತನೆಯ ತರಗತಿ ಫಲಿತಾಂಶ ಉತ್ತಮೀಕರಣಕ್ಕಾಗಿ
ಪ್ರಶ್ನೋತ್ತರ ಮಾಲಿಕೆ

## ತೃತೀಯ ಭಾಷೆ ಕನ್ನಡ

**ಆಯೋಜಕರು**

ಶ್ರೀ ಮೊಹಮ್ಮದ್ ಮೊಹಸಿನ್,
ಆಯುಕ್ತರು,
ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು – 560 001.

**ಪರಿಕಲ್ಪನೆ**

ಶ್ರೀಮತಿ ಜ್ಹೋಹರಾ ಜಬೀನ್ ಎಂ.
ನಿರ್ದೇಶಕರು,
ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ,
ಆಯುಕ್ತರ ಕಚೇರಿ, ನೃಪತುಂಗ ರಸ್ತೆ, ಬೆಂಗಳೂರು – 560 001.

## ಸಂಯೋಜಕರು

**ಶ್ರೀಮತಿ ಮಂಜುಳ ಆರ್.**
ಹಿರಿಯ ಸಹಾಯಕ ನಿರ್ದೇಶಕರು,
ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ,

**ಶ್ರೀ ಮರಿಗೌಡ ಬಿ.ಎನ್.**
ಹಿರಿಯ ಸಹಾಯಕ ನಿರ್ದೇಶಕರು,
ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ

## ಸಲಹೆ ಮತ್ತು ಮಾರ್ಗದರ್ಶನ

**ಶ್ರೀಮತಿ ನಾಗರತ್ನ ಎಚ್.**
ಉಪನ್ಯಾಸಕರು
ಸರ್ಕಾರಿ ಶಿಕ್ಷಕ ಶಿಕ್ಷಣ ವಿದ್ಯಾಲಯ,
ಮಂಗಳೂರು.

## ಸಂಪನ್ಮೂಲ ಶಿಕ್ಷಕರು

ಶ್ರೀಮತಿ ಉಮ್ಮಿ ಸಲ್ಮ.
ಕನ್ನಡ ಭಾಷಾ ಶಿಕ್ಷಕರು
ಫಾರೂಖಿಯಾ ಬಾಲಕಿಯರ ಪ್ರೌಢಶಾಲೆ.
ಅಶೋಕ ರಸ್ತೆ, ಲಷ್ಕರ್ ಮೊಹಲ್ಲಾ,
ಮೈಸೂರು.

ಶ್ರೀಮತಿ ಜಯಂತಿ ಕೆ.ಟಿ.
ಕನ್ನಡ ಭಾಷಾ ಶಿಕ್ಷಕರು
ಸರ್ಕಾರಿ ಪದವಿ ಪೂರ್ವ ಕಾಲೇಜು.
ಪೀಪಲ್ಸ್ ಪಾರ್ಕ್, ಮೈಸೂರು.

# ಆಶಯ

**ಆತ್ಮೀಯ ಶಿಕ್ಷಕ ಮಿತ್ರರೇ,**

ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ, ಬೆಂಗಳೂರು, ಇವರು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಬೆಂಗಳೂರು ಇವರ ಸಹಯೋಗದೊಂದಿಗೆ 2014–15 ನೇ ಸಾಲಿನಲ್ಲಿ ಜಾರಿಗೊಂಡ ಹತ್ತನೆಯ ತರಗತಿಯ ನೂತನ ಪಠ್ಯಪುಸ್ತಕವನ್ನು ಆಧರಿಸಿ 2015ರ ಏಪ್ರಿಲ್ ಮಾಹೆಯಲ್ಲಿ ನಡೆಯುವ ನೂತನ ಪರೀಕ್ಷಾ ಪದ್ಧತಿಗೆ ಅನುಗುಣವಾಗಿ ಕಲಿಕಾ ಗುಣಮಟ್ಟ ಮತ್ತು ಸಾರ್ವತ್ರಿಕ ಪರೀಕ್ಷಾ ಫಲಿತಾಂಶ ಉತ್ತಮಪಡಿಸುವ ದೃಷ್ಟಿಯಿಂದ ವಿದ್ಯಾರ್ಥಿಗಳ ಕಲಿಕಾವೇಗವನ್ನು ಗಮನದಲ್ಲಿಟ್ಟುಕೊಂಡು ಎಲ್ಲಾ ಭಾಷೆಗಳು ಮತ್ತು ಕೋರ್ ವಿಷಯಗಳಲ್ಲಿ ಕಲಿಕೆಗೆ ಸಹಾಯಕವಾಗುವಂತೆ ಪ್ರಶ್ನೋತ್ತರ ಮಾಲಿಕೆಗಳನ್ನು ರಚಿಸಿದ್ದಾರೆ. ಇದನ್ನು ರಾಜ್ಯದ ವಿವಿಧ ಜಿಲ್ಲೆಗಳ ಪ್ರೌಢಶಾಲೆಗಳ ಕರ್ತವ್ಯನಿರತ ವಿಷಯವಾರು ಆಯ್ದ ಸಂಪನ್ಮೂಲ ಶಿಕ್ಷಕರು ಸಿದ್ಧಪಡಿಸಿದ್ದಾರೆ.ರಾಜ್ಯದ ಎಲ್ಲಾ ಶಾಲೆಗಳ ಮುಖ್ಯಶಿಕ್ಷಕರು ಮತ್ತು ವಿಷಯವಾರು ಶಿಕ್ಷಕರು ಇದರ ಸಂಪೂರ್ಣ ಪ್ರಯೋಜನವನ್ನು ಪಡೆದುಕೊಳ್ಳುವ ಮೂಲಕ ವಿದ್ಯಾರ್ಥಿಗಳ ಪುರೋಭಿವೃದ್ಧಿಗೆ ಶ್ರಮಿಸುವುದು. ಈ ಕಿರು ಹೊತ್ತಗೆಗಳನ್ನು ಹೊರತರಲು ಶ್ರಮಿಸಿದ ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯದ ನಿರ್ದೇಶಕರು ಮತ್ತು ಅವರ ಕಾರ್ಯಾಲಯದ ಸಿಬ್ಬಂದಿ ವರ್ಗದವರಿಗೆ ಈ ಕಾರ್ಯದ ಸಫಲತೆಗಾಗಿ ಶ್ಲಾಘನೆಗಳು ಸಲ್ಲುತ್ತವೆ.

**ಶ್ರೀ ಮೊಹಮ್ಮದ್ ಮೊಹಸಿನ್**
**ಆಯುಕ್ತರು,**
**ಸಾರ್ವಜನಿಕ ಶಿಕ್ಷಣ ಇಲಾಖೆ**
**ಆಯುಕ್ತರ ಕಚೇರಿ, ನೃಪತುಂಗ ರಸ್ತೆ, ಬೆಂಗಳೂರು – 560 001.**

.

# ಮುನ್ನುಡಿ

**ಆತ್ಮೀಯ ಶಿಕ್ಷಕ ಮಿತ್ರರೇ,**

ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯವು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಬೆಂಗಳೂರು ಇವರ ಸಹಯೋಗದೊಂದಿಗೆ ಹತ್ತನೆಯ ತರಗತಿಯ ಕಲಿಕೆಯನ್ನು ಗುಣಾತ್ಮಕವಾಗಿ ಉತ್ತಮಪಡಿಸುವ ಸಲುವಾಗಿ ಹಾಗೂ ಎಸ್.ಎಸ್.ಎಲ್.ಸಿ.ಪರೀಕ್ಷೆಯ ಫಲಿತಾಂಶವನ್ನು ಉನ್ನತೀಕರಿಸುವ ದೃಷ್ಟಿಯಿಂದ ಎಲ್ಲಾ ಭಾಷೆಗಳು ಮತ್ತು ಕೋರ್ ವಿಷಯಗಳಲ್ಲಿ ವಿದ್ಯಾರ್ಥಿಗಳ ಕಲಿಕಾ ವೇಗವನ್ನು ಅನುಸರಿಸಿ, ಕಲಿಕೆಗೆ ಸಹಾಯಕವಾಗುವಂತೆ ಪ್ರಶ್ನೋತ್ತರ ಮಾಲಿಕೆಗಳನ್ನು ರಚಿಸಿದೆ.ಇದನ್ನು ರಾಜ್ಯದ ವಿವಿಧ ಜಿಲ್ಲೆಗಳ ಪ್ರೌಢಶಾಲೆಗಳ ಕರ್ತವ್ಯನಿರತ ವಿಷಯವಾರು ಆಯ್ದ ಸಂಪನ್ಮೂಲ ಶಿಕ್ಷಕರಿಂದ ಸಿದ್ಧಪಡಿಸಲಾಗಿದೆ.ಈ ಕಲಿಕಾ ಸಹಾಯಕಗಳನ್ನು ಶಿಕ್ಷಕರು ಪಠ್ಯಪುಸ್ತಕಗಳಿಗೆ ಪೂರಕವಾಗಿ ಬಳಸಿಕೊಂಡು ವಿದ್ಯಾರ್ಥಿಗಳ ಯಶಸ್ಸಿಗೆ ಕಾರ್ಯಪ್ರವೃತ್ತರಾಗಬೇಕೆಂಬುದು ನಮ್ಮ ಆಶಯವಾಗಿದೆ.ರಾಜ್ಯದ ಎಲ್ಲಾ ಶಾಲೆಗಳ ಮುಖ್ಯಶಿಕ್ಷಕರು ಮತ್ತು ವಿಷಯವಾರು ಶಿಕ್ಷಕರು ಇದರ ಸಂಪೂರ್ಣ ಪ್ರಯೋಜನವನ್ನು ಪಡೆದುಕೊಳ್ಳುವ ಮೂಲಕ ವಿದ್ಯಾರ್ಥಿಗಳ ಉತ್ತಮ ಫಲಿತಾಂಶಕ್ಕಾಗಿ ಶ್ರಮಿಸುವುದು. ಈ ಕಾರ್ಯದಲ್ಲಿ ಪಾಲ್ಗೊಂಡು ಕಿರು ಹೊತ್ತಗೆಗಳನ್ನು ಹೊರತರಲು ಶ್ರಮಿಸಿದ ಎಲ್ಲಾ ಅಧಿಕಾರಿವರ್ಗದವರಿಗೂ, ಸರ್ಕಾರಿ ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯಗಳ ಪ್ರವಾಚಕರಿಗೂ, ಉಪನ್ಯಾಸಕ ವರ್ಗದವರಿಗೂ, ಸಂಪನ್ಮೂಲ ಶಿಕ್ಷಕರು ಮತ್ತು ಸಿಬ್ಬಂದಿ ವರ್ಗದವರಿಗೂ ಹೃತ್ಪೂರ್ವಕ ಧನ್ಯವಾದಗಳು.

**ಶ್ರೀಮತಿ ಜ಼ೋಹರಾ ಜಬೀನ್ ಎಂ.**

**ನಿರ್ದೇಶಕರು,**

**ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ,**

**ಆಯುಕ್ತರ ಕಚೇರಿ, ನೃಪತುಂಗ ರಸ್ತೆ, ಬೆಂಗಳೂರು – 560 001.**

.

# ಸೂಚನೆಗಳು

- ಕಾರ್ಯಕ್ರಮವನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ತಮ್ಮೆಲ್ಲರ ಸಹಕಾರ ಅತ್ಯಗತ್ಯ. ಅದಕ್ಕಾಗಿ ನೀಡಿರುವ **'ಪ್ರೇರಣೆ', 'ಪ್ರಗತಿ', ಹಾಗೂ 'ಪ್ರತಿಭೆ'** ಎಂಬ ಹೊತ್ತಗೆಗಳನ್ನು ಶಿಕ್ಷಕರು ಓದಿ ಮನನ ಮಾಡಿಕೊಳ್ಳುವುದು.

- ವಿದ್ಯಾರ್ಥಿಗಳನ್ನು ಅವರ ಕಲಿಕಾ ವೇಗದ ಸಾಮರ್ಥ್ಯಕ್ಕೆ ಅನುಗುಣವಾಗಿ
  (1) ನಿಧಾನ ಗತಿಯಲ್ಲಿ ಕಲಿಯುವವರು,
  (2) ಸಾಧಾರಣ ವೇಗದಲ್ಲಿ ಕಲಿಯುವವರು ಮತ್ತು
  (3) ಶೀಘ್ರಗತಿಯಲ್ಲಿ ಸವಾಲಿನೊಂದಿಗೆ ಕಲಿಯುವವರು
  ಎಂದು ಮೂರು ಗುಂಪುಗಳಾಗಿ ವಿಂಗಡಿಸಿಕೊಳ್ಳುವುದು.

- ನಿಧಾನ ಗತಿಯಲ್ಲಿ ಕಲಿಯುವವರಿಗೆ ನಿಗದಿತ ಸಮಯದಲ್ಲಿ ಪರೀಕ್ಷೆಯನ್ನು ಎದುರಿಸಲು ಪಠ್ಯಾಂಶದಲ್ಲಿ ಅತಿಮುಖ್ಯವೆನಿಸಿದ ಕೆಲವೇ ಅಂಶಗಳನ್ನು **'ಪ್ರೇರಣೆ'** ಕಲಿಕಾ ಸಹಾಯಕದಲ್ಲಿ ಸಂಗ್ರಹಿಸಿದ್ದು, ಅವುಗಳನ್ನು ಮೊದಲು ಕಲಿಯುಂತೆ ಮಾಡುವುದು.

- ಸಾಧಾರಣ ವೇಗದಲ್ಲಿ ಕಲಿಯುವವರಿಗೆ ಮೊದಲು **'ಪ್ರೇರಣೆ'** ಕಲಿಕಾ ಸಹಾಯಕದ ಪಠ್ಯಾಂಶಗಳನ್ನು ಕಲಿಸಿ, ನಂತರದಲ್ಲಿ **'ಪ್ರಗತಿ'** ಹಾಗೂ ಕೊನೆಯಲ್ಲಿ **'ಪ್ರತಿಭೆ'** ಕಲಿಕಾ ಸಹಾಯಕದ ಪಠ್ಯಾಂಶಗಳ ಹೆಚ್ಚಿನ ಕಲಿಕೆಗೆ ಅವಕಾಶ ಮಾಡಿಕೊಡುವುದು.

- ಶೀಘ್ರಗತಿಯಲ್ಲಿ ಸವಾಲಿನೊಂದಿಗೆ ಕಲಿಯುವವರಿಗೆ ಮೊದಲು **'ಪ್ರೇರಣೆ'** ಹಾಗೂ **'ಪ್ರಗತಿ'** ಕಲಿಕಾ ಸಹಾಯಕದ ಪಠ್ಯಾಂಶಗಳನ್ನು ಕಲಿಸಿ, ನಂತರದಲ್ಲಿ **'ಪ್ರತಿಭೆ'** ಕಲಿಕಾ ಸಹಾಯಕದ ಪಠ್ಯಾಂಶಗಳ ಹೆಚ್ಚು ಹೆಚ್ಚಿನ ಕಲಿಕೆಗೆ ಅವಕಾಶ ಮಾಡಿಕೊಡುವುದು.

- ಈ ಕಲಿಕಾ ಸಹಾಯಕಗಳ ಪಠ್ಯಾಂಶಗಳನ್ನು ಶಾಲಾವಧಿಯ ಪೂರ್ವದ ವಿಶೇಷ ತರಗತಿ ಮತ್ತು ಶಾಲಾವಧಿಯ ನಂತರದ ವಿಶೇಷ ತರಗತಿಗಳಲ್ಲಿ ಸತತ ಅಭ್ಯಾಸ ಮಾಡಿಸುವುದು.

- ನಿಗದಿತ ವೇಳಾಪಟ್ಟಿಯಂತೆ ತರಗತಿಯ ಅವಧಿಗಳಲ್ಲಿ ವಾರ್ಷಿಕ ಪಾಠಯೋಜನೆಯಂತೆ ಕಲಿಕಾ ಮತ್ತು ಬೋಧನಾ ಚಟುವಟಿಕೆಗಳನ್ನು ನಡೆಸುವುದು.

- ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕ ಓದುವ ಅಭ್ಯಾಸವನ್ನು ಕಡ್ಡಾಯವಾಗಿ ರೂಢಿಸುವುದು.

- ನಿರಂತರ ಅಭ್ಯಾಸ ಮತ್ತು ಪುನರವಲೋಕನಕ್ಕೆ ಹೆಚ್ಚು ಒತ್ತು ನೀಡುವುದು.

- **'ಪ್ರೇರಣೆ', 'ಪ್ರಗತಿ', ಹಾಗೂ 'ಪ್ರತಿಭೆ'** ಇವುಗಳು ಕೇವಲ ಕಲಿಕಾ ಸಹಾಯಕಗಳೇ ಹೊರತು ಪರೀಕ್ಷಾ ತಯಾರಿಕೆಗೆ ಅಂತಿಮವಲ್ಲ ಎಂಬುದು ಗಮನಿಸಬೇಕಾದ ಅಂಶ.

## ವ್ಯಾಕರಣಾಂಶಗಳು

| ಕನ್ನಡ ವರ್ಣಮಾಲೆ – 49 | | | | | | | | |
|---|---|---|---|---|---|---|---|---|
| ಸ್ವರಗಳು – 13 | | | ವ್ಯಂಜನಗಳು – 34 | | | | ಯೋಗವಾಹಗಳು –2 | |
| ಹ್ರಸ್ವ ಸ್ವರಗಳು | ದೀರ್ಘ ಸ್ವರಗಳು | ಪ್ಲುತ ಸ್ವರಗಳು | ವರ್ಗೀಯ ವ್ಯಂಜನಗಳು 25 | | | ಅವರ್ಗೀಯ ವ್ಯಂಜನಗಳು | ಅನುಸ್ವಾರ | ವಿಸರ್ಗ |
| | | | ಅಲ್ಪ ಪ್ರಾಣಗಳು | ಮಹಾ ಪ್ರಾಣಗಳು | ಅನುನಾಸಿಕಗಳು | | | |
| 6 | 7 | | 10 | 10 | 5 | 9 | 1 | 1 |
| ಅ | ಆ | | ಕ್ ಗ್ | ಖ್ ಘ್ | ಙ್ | ಯ್ | ಂ | ಃ |
| ಇ | ಈ | | ಚ್ ಜ್ | ಛ್ ಝ್ | ಞ್ | ರ್ | | |
| ಉ | ಊ | | ಟ್ ಡ್ | ಠ್ ಢ್ | ಣ್ | ಲ್ | | |
| ಋ | ಏ | | ತ್ ದ್ | ಥ್ ಧ್ | ನ್ | ವ್ | | |
| ಎ | ಐ | | ಪ್ ಬ್ | ಫ್ ಭ್ | ಮ್ | ಶ್ | | |
| ಒ | ಓ | | | | | ಷ್ | | |
| | ಔ | | | | | ಸ್ | | |
| | | | | | | ಹ್ | | |
| | | | | | | ಳ್ | | |

### ಸಂಯುಕ್ತಾಕ್ಷರಗಳು

ಸಜಾತಿ ಸಂಯುಕ್ತಾಕ್ಷರಗಳು : – ಅಮ್ಮ, ಅಕ್ಕ, ಅಜ್ಜ, ಅಪ್ಪ

ವಿಜಾತಿ ಸಂಯುಕ್ತಾಕ್ಷರಗಳು : – ಶಸ್ತ್ರ, ಅಸ್ತ್ರ, ಅಕ್ಷರ, ಪುಸ್ತಕ

ಕೊಟ್ಟಿರುವ ಪ್ರಶ್ನೆಗಳಿಗೆ ನೀಡಲಾಗಿರುವ ಆಯ್ಕೆಗಳಲ್ಲಿ ಸೂಕ್ತ ಉತ್ತರಗಳನ್ನು ಆರಿಸಿ ಕ್ರಮಾಕ್ಷರದೊಡನೆ ಬರೆಯಿರಿ.

1. 'ವರ್ಣಮಾಲೆ'ಯಲ್ಲಿರುವ ಸ್ವರಾಕ್ಷರಗಳ ಸಂಖ್ಯೆ ________
   ಎ. 10 ಬಿ. 12 ಸಿ. 13 ಡಿ. 05
2. 'ಸ್ವರಾಕ್ಷರ'ಗಳಲ್ಲಿ ಹ್ರಸ್ವರಗಳ ಸಂಖ್ಯೆ ____________
   ಎ. 03 ಬಿ. 02 ಸಿ. 08 ಡಿ. 06
3. 'ಸ್ವರಾಕ್ಷರ'ಗಳಲ್ಲಿ ದೀರ್ಘಸ್ವರಗಳ ಸಂಖ್ಯೆ ________
   ಎ. 08 ಬಿ. 09 ಸಿ. 05 ಡಿ. 07
4. 'ವ್ಯಂಜನಾಕ್ಷರ'ಗಳಲ್ಲಿರುವ ಅವರ್ಗೀಯ ವ್ಯಂಜನಗಳ ಸಂಖ್ಯೆ _____
   ಎ. 13 ಬಿ. 10 ಸಿ. 06 ಡಿ. 09
5. 'ಙ, ಞ, ಣ್, ನ್, ಮ್' ಅಕ್ಷರಗಳು ವರ್ಣಮಾಲೆಯ ______ ಅಕ್ಷರಗಳಾಗಿವೆ.
   ಎ. ಸ್ವರಗಳು ಬಿ.ಅಲ್ಪಪ್ರಾಣ ಸಿ. ಅನುನಾಸಿಕ ಡಿ. ಮಹಾಪ್ರಾಣ
6. ಕೆಳಗಿನ ಪದಗಳಲ್ಲಿ 'ಸಜಾತಿ ಸಂಯುಕ್ತಾಕ್ಷರ' ಇರುವ ಪದ ________
   ಎ. ಶಸ್ತ್ರ ಬಿ.ಅಸ್ತ್ರ ಸಿ. ಪುಸ್ತಕ ಡಿ. ಅಜ್ಜ
7. ಕೆಳಗಿನ ಪದಗಳಲ್ಲಿ 'ವಿಜಾತಿ ಸಂಯುಕ್ತಾಕ್ಷರ' ಇರುವ ಪದ ___________
   ಎ. ಅಮ್ಮ ಬಿ. ಅಪ್ಪ ಸಿ. ಸಕ್ಕರೆ ಡಿ. ಅಸ್ತ್ರ

## ವಿರುದ್ಧಾರ್ಥಕ ಪದಗಳು

| | | | | | |
|---|---|---|---|---|---|
| ಪರಿಚಿತ<br>ದೊಡ್ಡ | ಮಧುರ<br>ಧರ್ಮ | ಸ್ಪಷ್ಟ<br>ನಾಕ | ಬೆಳಕು<br>ತಗ್ಗಿಸು | ಹಗಲು<br>ಶ್ರೇಷ್ಠ | ಅಲ್ಲಿ<br>ಮಿತ್ರ |
| ಯುಕ್ತ<br>ಚಿಂತೆ | ಸಮೀಪ<br>ಕೇಡು | ಅರ್ಥ<br>ಇದ್ದವರ | ಬಿಳಿ<br>ಬಡತನ | ವಿದೇಶ<br>ಕಾಣೆ | ಹುಟ್ಟು |

1. 'ಪರಿಚಿತ' ಪದದ ವಿರುದ್ಧಾರ್ಥಕ ರೂಪ ಇದು ________
   ಎ. ಪರಚಿತ ಬಿ.ಪರಿಣಿತ ಸಿ. ಪರಾಜಿತ ಡಿ. ಅಪರಿಚಿತ
2. 'ಮಿತ್ರ' ಪದದ ವಿರುದ್ಧಾರ್ಥಕ ರೂಪ ಇದು ________
   ಎ. ಶತೃ ಬಿ.ಮಿತೃ ಸಿ. ಮಿತುರ ಡಿ. ಮಿಗ
3. 'ಅರ್ಥ' ಪದದ ವಿರುದ್ಧಾರ್ಥಕ ರೂಪ ಇದು ________
   ಎ. ಅಪಾರ್ಥ ಬಿ. ಅನರ್ಥ ಸಿ. ಸಮಾನಾರ್ಥ ಡಿ. ನಿರರ್ಥಕ
4. 'ಶ್ರೇಷ್ಠ' ಪದದ ವಿರುದ್ಧಾರ್ಥಕ ರೂಪ ಇದು ________
   ಎ. ಉನ್ನತ ಬಿ. ಉತ್ತಮ ಸಿ. ಕನಿಷ್ಠ ಡಿ. ಅನಿಷ್ಠ
5. 'ಕಾಣೆ' ಪದದ ವಿರುದ್ಧಾರ್ಥಕ ರೂಪ ಇದು ________
   ಎ. ಕಣಾ ಬಿ. ಕಾಣು ಸಿ.ಕಾಣೋ ಡಿ. ಕಾಣ
6. 'ವಿದೇಶ' ಪದದ ವಿರುದ್ಧಾರ್ಥಕ ರೂಪ ಇದು ________
   ಎ. ಆದೇಶ ಬಿ. ಈ ದೇಶ ಸಿ. ಸದೇಶ ಡಿ. ಸ್ವದೇಶ
7. 'ಮಧುರ' ಪದದ ವಿರುದ್ಧಾರ್ಥಕ ರೂಪ ಇದು ________
   ಎ. ಮಾಧುರ್ಯ ಬಿ.ಮಾಧುರಿ ಸಿ. ಇಂಪಾದ ಡಿ. ಕಠೋರ
8. 'ಚಿಂತೆ' ಪದದ ವಿರುದ್ಧಾರ್ಥಕ ರೂಪ ಇದು ________
   ಎ. ದುಃಖ ಬಿ.ಸುಖ ಸಿ. ನಿಶ್ಚಿಂತೆ ಡಿ. ಶಾಂತಿ
9. 'ನಾಕ' ಪದದ ವಿರುದ್ಧಾರ್ಥಕ ರೂಪ ಇದು ________
   ಎ. ನರಕ ಬಿ.ನರಖ ಸಿ. ನರಗ ಡಿ. ನರೂಕ
10. 'ತಗ್ಗಿಸು' ಪದದ ವಿರುದ್ಧಾರ್ಥಕ ರೂಪ ಇದು ________
   ಎ. ತಗೀಸು ಬಿ.ತಾಗಿಸು ಸಿ. ಎತ್ತರಿಸು ಡಿ. ತೂಗಿಸು
11. 'ಯುಕ್ತ' ಪದದ ವಿರುದ್ಧಾರ್ಥಕ ರೂಪ ಇದು ________
   ಎ. ಅನಯುಕ್ತ ಬಿ. ಅಪಯುಕ್ತ ಸಿ. ಯುಕ್ತವಿಲ್ಲ ಡಿ. ಅಯುಕ್ತ

## ಸಮಾನಾರ್ಥಕ ಪದಗಳು

ತಾಯಿ – ಅಮ್ಮ, ಮಾತೃ, ಜನನಿ
ಭೂಮಿ – ಇಳೆ, ಪೃಥ್ವಿ, ಧರೆ
ಮುಗಿಲು – ಬಾನು, ಆಕಾಶ, ಗಗನ
ವಸು – ಚಿನ್ನ, ಹೊನ್ನು, ಬಂಗಾರ
ಉದಯ – ಹುಟ್ಟು, ಜನನ

1. 'ತಾಯಿ ಪದದ ಸಮಾನಾರ್ಥಕ ಪದ:
   ಎ. ಅಮ್ಮ ಬಿ. ಅಮ್ಮಂದಿರು ಸಿ.ಅಮ್ಮಗಳು ಡಿ. ಅಮ್ಮರು
2. 'ಭೂಮಿ' ಪದದ ಸಮಾನಾರ್ಥಕ ಪದ:
   ಎ. ಬೂಮಿ ಬಿ.ಬೊಮಿ ಸಿ. ಇಳೆ ಡಿ. ಇಳಿ
3. 'ಮುಗಿಲು ಪದದ ಸಮಾನಾರ್ಥಕ ಪದ:
   ಎ. ಭಾನು ಬಿ.ಬಾನು ಸಿ. ಬೋನು ಡಿ. ಬೂನು
4. 'ವಸು' ಪದದ ಸಮಾನಾರ್ಥಕ ಪದ:
   ಎ. ಚಿನ್ನ ಬಿ.ಚೆನ್ನ ಸಿ.ಚಿನ್ನು ಡಿ. ಚೊನ್ನ

## ಅನ್ಯದೇಶೀಯ ಪದಗಳು

| | | | | |
|---|---|---|---|---|
| ಪೊಲೀಸ್, | ಲಾಕಪ್, | ಟಿಕೆಟ್, | ಟ್ರಾಫಿಕ್ | ಡಾಲರ್, |
| ಬ್ರೆಡ್, | ಬಲ್ಬು, | ಬಿಸ್ಕತ್, | ರೈಲ್ವೆ ಸ್ಟೇಷನ್, | ಟೆಸ್ಟ್, |
| ಔಟ್, | ಬೌಲರ್, | ವಿಕೆಟ್, | ಬ್ಯಾಟ್ಸ್‌ಮನ್, | ರಿಸ್ಕ್ |
| ಬೋಲೋ, | ಮಾತಾಳಿ, | ಪಿಸ್ತೂಲು, | ಫೌಜುದಾರ, | ನೋಟ್ಸ |
| ಸೈತಾನರೇ, | ಕಿಮ್ಮತ್ತು, | ಡಿಕ್ಟೇಟ್, | ಸ್ಟಾಫ್‌ರೂಮ್, | ಕ್ಲಾಸ್, |
| ಟಾಪ್, | ಬಸ್‌ಸ್ಟ್ಯಾಂಡ್, | ಬಾದಲ್, | ಲೇಕರ್, | ಬರಸೆ, |
| ಹಲಕೆ, | ಸ್ಪಿನ್, | | | |

1. ಇದು ಅನ್ಯದೇಶಿ ಪದವಾಗಿದೆ ____________
   ಎ. ರಕ್ಷಕ　ಬಿ.ಶಿಕ್ಷಕ　ಸಿ. ಪೀಡಕ　ಡಿ. ಪೊಲೀಸ್
2. ಇದು ಅನ್ಯದೇಶಿ ಪದವಾಗಿದೆ ____________
   ಎ. ಬೌಲರ್　ಬಿ.ಬಾಲಕ　ಸಿ. ಬಾಲಕಿ　ಡಿ. ಬಾಲೆ
3. ಇದು ಅನ್ಯದೇಶಿ ಪದವಾಗಿದೆ ____________
   ಎ. ಡಿಕ್ಟೇಟ್　ಬಿ.ಬೋಧಿಸು　ಸಿ. ವಿವರಿಸು　ಡಿ. ವರ್ಣಿಸು
4. ಇದು ಅನ್ಯದೇಶಿ ಪದವಾಗಿದೆ ____________
   ಎ. ಬಾದಲ್　ಬಿ.ಬದಲು　ಸಿ. ಬದಲಿ　ಡಿ. ಬದಳಿ
5. ಇದು ಅನ್ಯದೇಶಿ ಪದವಾಗಿದೆ ____________
   ಎ. ಬರಸೊ　ಬಿ.ಬರಸೆ　ಸಿ. ಬೊಗಸೆ　ಡಿ. ಬೆರಗು
6. ಇದು ಅನ್ಯದೇಶಿ ಪದವಾಗಿದೆ ____________
   ಎ. ಟಮಟೆ　ಬಿ.ಟಗರು　ಸಿ. ಗಟ್ಟಿ　ಡಿ. ಟಿಕೇಟು

## ನಾಮಪದ

| | | |
|---|---|---|
| ರೂಢನಾಮ | :– | ನದಿ, ಪರ್ವತ, ಊರು, ಮನುಷ್ಯ, ದೇಶ |
| ಅಂಕಿತನಾಮ | :– | ಧರ್ಮರಾಯ, ಕಮಲ, ರಾಮ, |
| ಅನ್ವರ್ಥನಾಮ | :– | ವಿದ್ವಾಂಸ, ವಿಜ್ಞಾನಿ, ಪೂಜಾರಿ |
| ಗುಣವಾಚಕ | :– | ಒಳ್ಳೆಯ, ಕೆಟ್ಟ, ದೊಡ್ಡ, ಹಳೆಯ |
| ಸಂಖ್ಯಾವಾಚಕ | :– | ಹತ್ತು, ಒಂಬತ್ತು, ಐವತ್ತು, ಆರು |
| ಭಾವನಾಮ | :– | ಕೆಂಪು, ಹಿರಿಮೆ, ನೋಟ, ಮಾಟ |
| ಪರಿಮಾಣವಾಚಕ | :– | ಅಷ್ಟು, ಎಷ್ಟು, ಹಲವು, ಅನಿತು, ಇನಿತು |
| ದಿಗ್ವಾಚಕ | :– | ಮೂಡಣ, ತೆಂಕಣ, ಪಡುವಣ, ಬಡಗಣ |

1. ಇದು ರೂಢನಾಮಕ್ಕೆ ಉದಾಹರಣೆ
   ಎ. ಸಹದೇವ　ಬಿ.ನದಿ　ಸಿ. ಆರು　ಡಿ. ಮೂಡಣ
2. ಸರಳನ ಹತ್ತಿರ ಏಳು ಪುಸ್ತಕಗಳಿದ್ದವು ಇಲ್ಲಿರುವ ಸಂಖ್ಯಾವಾಚಕ
   ಎ. ಏಳು　ಬಿ. ಹತ್ತಿರ　ಸಿ. ಸರಳ　ಡಿ. ಪುಸ್ತಕ
3. ಒಳ್ಳೆಯ ಈ ಪದವು ನಾಮಪದದ ಈ ಗುಂಪಿಗೆ ಸೇರಿದೆ.
   ಎ. ದಿಗ್ವಾಚಕ　ಬಿ.ಗುಣವಾಚಕ　ಸಿ. ಸಂಖ್ಯಾವಾಚಕ　ಡಿ. ಪರಿಮಾಣವಾಚಕ

## ಸರ್ವನಾಮ :

ನಾಮಪದದ ಬದಲಾಗಿ ಬಳಸುವ ಪದವೇ ಸರ್ವನಾಮ.
ಸರ್ವನಾಮದ ವಿಧಗಳು :
ಪುರುಷಾರ್ಥಕ ಸರ್ವನಾಮ
ಪ್ರಶ್ನಾರ್ಥಕ ಸರ್ವನಾಮ
ಆತ್ಮಾರ್ಥಕ ಸರ್ವನಾಮ
ಪುರುಷಾರ್ಥಕ ಸರ್ವನಾಮಗಳನ್ನು ಉತ್ತಮ, ಮಧ್ಯಮ, ಪ್ರಥಮಗಳೆಂದು ವಿಂಗಡಿಸಲಾಗಿದೆ.

| ಕ್ರ.ಸಂ. | ಪುರುಷಾರ್ಥಕಗಳು | ಏಕವಚನ | ಬಹುವಚನ |
|---|---|---|---|
| 1 | ಉತ್ತಮ ಪುರುಷ | ನಾನು | ನಾವು |
| 2 | ಮಧ್ಯಮ ಪುರುಷ | ನೀನು | ನೀವು |
| 3 | ಪ್ರಥಮ ಪುರುಷ | ಅವನು, ಅವಳು, ಅದು, ಇವನು, ಇವಳು, ಇದು | ಅವರು, ಇವರು, ಅವು ಇವು |

ಪ್ರಶ್ನಾರ್ಥಕ : ಯಾರು? ಏನು? ಯಾವುದು?
ಆತ್ಮಾರ್ಥಕ : ತಾನು, ತಾವು, ತನ್ನ, ತಮ್ಮ

**ಕೊಟ್ಟಿರುವ ಪ್ರಶ್ನೆಗಳಿಗೆ ನೀಡಲಾಗಿರುವ ಆಯ್ಕೆಗಳಲ್ಲಿ ಸೂಕ್ತ ಉತ್ತರಗಳನ್ನು ಆರಿಸಿ ಕ್ರಮಾಕ್ಷರದೊಡನೆ ಬರೆಯಿರಿ.**

1. ನಾಮಪದದ ಬದಲಾಗಿ ಬಳಸುವ ಪದ.
   ಎ. ಸರ್ವನಾಮ ಬಿ.ರೂಢನಾಮ ಸಿ. ಭಾವನಾಮ ಡಿ. ಅಂಕಿತನಾಮ
2. 'ನಾನು' ಪದವು ಈ ಸರ್ವನಾಮಕ್ಕೆ ಉದಾಹರಣೆ:
   ಎ. ಮಧ್ಯಮ ಪುರುಷ ಬಿ.ಉತ್ತಮ ಪುರುಷ ಸಿ. ಪ್ರಥಮ ಪುರುಷ ಡಿ. ದ್ವಿತೀಯ ಪುರುಷ
3. 'ಏನು' ಪದವು ಈ ಸರ್ವನಾಮಕ್ಕೆ ಉದಾಹರಣೆ.
   ಎ. ಪ್ರಥಮ ಪುರುಷ ಬಿ.ಆತ್ಮಾರ್ಥಕ ಸಿ. ಪ್ರಶ್ನಾರ್ಥಕ ಡಿ. ಪುರುಷಾರ್ಥಕ

## ಲಿಂಗಗಳು

ಕನ್ನಡ ಭಾಷೆಯಲ್ಲಿ ಸ್ವಭಾವಕ್ಕನುಗುಣವಾಗಿ ಮೂರು ವಿಧಗಳಿವೆ.

**ಪುಲ್ಲಿಂಗ :**
'ಗಂಡಸು' ಎಂಬರ್ಥ ಸೂಚಿಸುವ ಶಬ್ದಗಳು ಪುಲ್ಲಿಂಗವೆನಿಸುತ್ತವೆ. ಉದಾ: ಸುರೇಶ, ಪಂಡಿತ, ಕೃಷ್ಣ, ಭೀಮ, ಶಿಕ್ಷಕ, ಹುಡುಗ, ರಾಮ, ಅಣ್ಣ, ಕವಿ
**ಸ್ತ್ರೀಲಿಂಗ:**
'ಹೆಂಗಸು' ಎಂಬರ್ಥ ಸೂಚಿಸುವ ಶಬ್ದಗಳು ಸ್ತ್ರೀಲಿಂಗವೆನಿಸುತ್ತವೆ. ಉದಾ: ರಾಣಿ, ಸೀತೆ, ತಾಯಿ, ಹುಡುಗಿ, ಕವಯಿತ್ರಿ

**ನಪುಂಸಕಲಿಂಗ :**
ಯಾವು ಶಬ್ದವು ನಿರ್ದಿಷ್ಟವಾಗಿ ಗಂಡು ಅಥವಾ ಹೆಣ್ಣು ಎಂದು ಸೂಚಿಸಲಾರದೊ ಅಂತಹ ಶಬ್ದಗಳನ್ನು ನಪುಂಸಕಲಿಂಗ ಎನ್ನುವರು. ಉದಾ: ಮಗು, ಕರು, ಕಲ್ಲು, ಜನ, ಮರ,
**ಕೊಟ್ಟಿರುವ ಪ್ರಶ್ನೆಗಳಿಗೆ ನೀಡಲಾಗಿರುವ ಆಯ್ಕೆಗಳಲ್ಲಿ ಸೂಕ್ತ ಉತ್ತರಗಳನ್ನು ಆರಿಸಿ ಕ್ರಮಾಕ್ಷರದೊಡನೆ ಬರೆಯಿರಿ.**

1. ಲಿಂಗಗಳಲ್ಲಿರುವ ವಿಧಗಳು:
   ಎ. ಎರಡು ಬಿ. ಮೂರು ಸಿ. ನಾಲ್ಕು ಡಿ. ಐದು
2. 'ಮಗು' ಪದವು ಈ ಲಿಂಗಕ್ಕೆ ಉದಾಹರಣೆ.
   ಎ. ಪುಲ್ಲಿಂಗ ಬಿ.ಸ್ತ್ರೀಲಿಂಗ ಸಿ. ನಪುಂಸಕಲಿಂಗ ಡಿ. ಗುರುಲಿಂಗ
3. ಇವುಗಳಲ್ಲಿ ಸ್ತ್ರೀಲಿಂಗಕ್ಕೆ ಉದಾಹರಣೆ.
   ಎ. ರಾಣಿ ಬಿ.ರಾಜ ಸಿ. ಮುರಳಿ ಡಿ. ರಾಮ

## ವಚನಗಳು

ವಚನ ಎಂದರೆ ಸಂಖ್ಯೆಯನ್ನು ಸೂಚಿಸುವ ಪದ
ಏಕವಚನ : ಒಂದು ವಸ್ತುವನ್ನು ಹೇಳುವ ಪದ.
ಉದಾ: ಶಾಲೆ, ಮಗು, ಹುಡುಗಿ, ಗಿಡ,, ಪ್ರಾಣಿ, ತಾಯಿ, ಮಿತ್ರ, ಕುಟುಂಬ, ನಗರ, ದೀಪ
ಬಹುವಚನ: ಎರಡು ಅಥವಾ ಎರಡಕ್ಕಿಂತ ಹೆಚ್ಚು ವಸ್ತುಗಳನ್ನು ಸೂಚಿಸುವ ಪದವನ್ನು ಬಹುವಚನ ಎನ್ನುವರು.
ಉದಾ: ಹುಡುಗರು, ಗಿಡಗಳು, ಪ್ರಾಣಿಗಳು, ತಾಯಂದಿರು

**ಕೊಟ್ಟಿರುವ ಪ್ರಶ್ನೆಗಳಿಗೆ ನೀಡಲಾಗಿರುವ ಆಯ್ಕೆಗಳಲ್ಲಿ ಸೂಕ್ತ ಉತ್ತರಗಳನ್ನು ಆರಿಸಿ ಕ್ರಮಾಕ್ಷರದೊಡನೆ ಬರೆಯಿರಿ.**

1. 'ಶಾಲೆ' ಪದವು ಈ ವಚನಕ್ಕೆ ಉದಾಹರಣೆ
   ಎ. ಏಕವಚನ ಬಿ. ಬಹುವಚನ ಸಿ. ದ್ವಿವಚನ ಡಿ. ಅನೇಕವಚನ
1. ಎರಡಕ್ಕಿಂತ ಹೆಚ್ಚು ವಸ್ತುಗಳನ್ನು ಸೂಚಿಸುವ ಪದ :
   ಎ. ಬಹುವಚನ ಬಿ.ನಾಮಪದ ಸಿ.ರೂಢನಾಮ ಡಿ. ಏಕವಚನ
2. 'ಮಗು' ಪದವನ್ನು ಬಹುವಚನದಲ್ಲಿ ಬಳಸಿದಾಗ ಆಗುವ ರೂಪ
   ಎ. ಮಗುಗಳು ಬಿ.ಮಕ್ಕಳು ಸಿ. ಮಗಳು ಡಿ. ಮಗ

## ವಿಭಕ್ತಿ ಪ್ರತ್ಯಯಗಳು

| ಕ್ರ.ಸಂ. | ವಿಭಕ್ತಿಯ ಹೆಸರು | ವಿಭಕ್ತಿ ಪ್ರತ್ಯಯಗಳು | ಉದಾಹರಣೆ |
|---|---|---|---|
| 1 | ಪ್ರಥಮಾ ವಿಭಕ್ತಿ | ಉ | ಮರ + ಉ = ಮರವು |
| 2 | ದ್ವಿತೀಯಾ ವಿಭಕ್ತಿ | ಅನ್ನು | ಮರ + ಅನ್ನು = ಮರವನ್ನು |
| 3 | ತೃತೀಯಾ ವಿಭಕ್ತಿ | ಇಂದ | ಮರ + ಇಂದ = ಮರದಿಂದ |
| 4 | ಚತುರ್ಥಿ ವಿಭಕ್ತಿ | ಗೆ/ಕೆ/ಇಗೆ/ಕ್ಕೆ | ಮರ + ಕ್ಕೆ = ಮರಕ್ಕೆ ಮನೆಗೆ, ಅದಕ್ಕೆ |
| 5 | ಪಂಚಮೀ ವಿಭಕ್ತಿ | ದೆಸೆಯಿಂದ | ಮರ + ದೆಸೆಯಿಂದ = ಮರದ ದೆಸೆಯಿಂದ |
| 6 | ಷಷ್ಠೀ ವಿಭಕ್ತಿ | ಅ | ಮರ + ಅ = ಮರದ |
| 7 | ಸಪ್ತಮಿ ವಿಭಕ್ತಿ | ಅಲ್ಲಿ | ಮರ + ಅಲ್ಲಿ = ಮರದಲ್ಲಿ |

**ಕೊಟ್ಟಿರುವ ಪ್ರಶ್ನೆಗಳಿಗೆ ನೀಡಲಾಗಿರುವ ಆಯ್ಕೆಗಳಲ್ಲಿ ಸೂಕ್ತ ಉತ್ತರಗಳನ್ನು ಆರಿಸಿ ಕ್ರಮಾಕ್ಷರದೊಡನೆ ಬರೆಯಿರಿ.**

1. <u>ಮನೆಯನ್ನು</u> ಈ ಪದದಲ್ಲಿ ಇರುವ ವಿಭಕ್ತಿಯ ಹೆಸರು :
   ಎ. ಪ್ರಥಮ ಬಿ.ದ್ವಿತೀಯ ಸಿ.ತೃತೀಯ ಡಿ. ಷಷ್ಠೀ

2. <u>'ಹೆಸರಿಗೆ'</u> ಈ ಪದದಲ್ಲಿರುವ ವಿಭಕ್ತಿ ಪ್ರತ್ಯಯ :
   ಎ. ಅ ಬಿ. ಗೆ ಸಿ. ಅನ್ನು ಡಿ. ಉ

3. ಇಲ್ಲಿರುವ ಪದಗಳಲ್ಲಿ <u>ಸಪ್ತಮಿ ವಿಭಕ್ತಿಗೆ</u> ಉದಾಹರಣೆ ಇದು :
   ಎ. ಶಾಲೆಯಲ್ಲಿ ಬಿ.ಶಾಲೆಗೆ ಸಿ. ಮರಕ್ಕೆ ಡಿ. ರಾಮನ

## ಸಂಧಿಗಳು
## ಕನ್ನಡ ಸಂಧಿಗಳು

**<u>ಲೋಪಸಂಧಿ</u>**

ಬೆರಳಿಂದ, ಬೇರೊಬ್ಬ, ಅರಿವಿಲ್ಲ, ಊರೂರು, ಬಿಚ್ಚಿಂದಾಗ, ಜನರೊಪ್ಪದೆ, ನಡೆಯಲಾರದು, ಹೆದರುತ್ತಿರುವಾಗ, ಮುಚ್ಚಿಂದಾಗ, ಊಣಲಾದರೆ, ಹೆಂಡಿರಾದರೆ, ಬದುಕಾದರೆ, ಬೋರಾಡು, ಮೂಡಲಾಗಿ, ಜೋತಾಡು, ತಂಡಗಳಲ್ಲಿ, ಬೆಳೆಸಿದವರು, ಮಂತ್ರದಲ್ಲಿ, ಕೊಟ್ಟಿರುವ, ಗುಂಡಗಿರುವ

**<u>ಆಗಮಸಂಧಿ</u>**

.ಊಟವಾಯಿತು, ರಕ್ಷಣೆಯನ್ನು, ಅರಿವಿಲ್ಲ, ಗಾನವಾಯ್ತೆ, ಉದಯವಾಗಿ, ತಂಡವಾಗಲು, ಸ್ಥಾನವನ್ನು, ಭೂಮಿಯಲ್ಲಿ, ಸ್ಪಷ್ಟವಾಗಿ

**ಆದೇಶಸಂಧಿ**

ತಲೆಗೂದಲು,  ಬೆಟ್ಟದಾವರೆ,  ಹೂಬುಟ್ಟಿ,  ಒರೆಗಲ್ಲು

## ಸಂಸ್ಕೃತ ಸಂಧಿಗಳು

**ಸವರ್ಣದೀರ್ಘಸಂಧಿ**

ದೇವಾಲಯ,  ದೀಪಾಲಂಕಾರ,  ಧರ್ಮಾರ್ಥ

**ಗುಣಸಂಧಿ**

ಸುರೇಂದ್ರ,  ಜೀವನೋತ್ಸಾಹ,  ರಾಜ್ಯೋತ್ಸವ,  ಮಹರ್ಷಿ

**ವೃದ್ಧಿಸಂಧಿ**

ಏಕೈಕ,  ವನೌಷಧ,  ಮಹೌನ್ನತ,  ಸಿದ್ಧೌಷಧ

**ಯಣ್‌ಸಂಧಿ**

ಗತ್ಯಂತರ,  ಅತ್ಯಂತ,  ಇತ್ಯಾದಿ,  ಪಿತ್ರಾರ್ಜಿತ

**ಕೊಟ್ಟಿರುವ ಪ್ರಶ್ನೆಗಳಿಗೆ ನೀಡಲಾಗಿರುವ ಆಯ್ಕೆಗಳಲ್ಲಿ ಸೂಕ್ತ ಉತ್ತರಗಳನ್ನು ಆರಿಸಿ ಕ್ರಮಾಕ್ಷರದೊಡನೆ ಬರೆಯಿರಿ.**

1. **'ದೇವಾಲಯ'** ಪದವು ಈ ಸಂಧಿಗೆ ಉದಾಹರಣೆ
   ಎ. ಸವರ್ಣ  ಬಿ.ಗುಣ  ಸಿ. ವೃದ್ಧಿ  ಡಿ. ಯಣ್
2. **'ಒರೆ + ಕಲ್ಲು'** ಪದವನ್ನು ಕೂಡಿಸಿ ಬರೆದಾಗ ಆಗುವ ರೂಪ:
   ಎ. ಒರೆಗಲ್ಲು  ಬಿ. ಬರಕಲ್ಲು  ಸಿ. ಒರೆಕಲ್ಲು  ಡಿ. ಒರಕಲ್ಲು
3. ಈ ಕೆಳಗಿನ ಪದಗಳಲ್ಲಿ ಆಗಮಸಂಧಿಗೆ ಉದಾಹರಣೆ:
   ಎ. ಮಹರ್ಷಿ  ಬಿ.ಮನೆಯನ್ನು  ಸಿ. ಮಳೆಗಾಲ  ಡಿ. ಅತ್ಯಂತ

## ತತ್ಸಮ – ತದ್ಭವಗಳು

| ತತ್ಸಮ | ತದ್ಭವ |
|---|---|
| ಶಾಲಾ | ಶಾಲೆ |
| ದಯಾ | ದಯೆ |
| ಸೀತಾ | ಸೀತೆ |
| ಲಕ್ಷ್ಮೀ | ಲಕುಮಿ, ಲಕ್ಷ್ಮಿ |
| ಸರೋಜಾ | ಸರೋಜ |
| ಮಾಲಾ | ಮಾಲೆ |
| ವೇಳಾ | ವೇಳೆ |
| ವಿನೋದ | ಬಿನದ |
| ಯುಗ | ಜುಗ |
| ರಾಜ | ರಾಯ |
| ಕುಮಾರ | ಕುವರ |
| ಕ್ಷಣ | ಚಣ |
| ಸ್ವರ್ಗ | ಸಗ್ಗ |
| ಭೂಮಿ | ಬುವಿ |

**ಕೊಟ್ಟಿರುವ ಪ್ರಶ್ನೆಗಳಿಗೆ ನೀಡಲಾಗಿರುವ ಆಯ್ಕೆಗಳಲ್ಲಿ ಸೂಕ್ತ ಉತ್ತರಗಳನ್ನು ಆರಿಸಿ ಕ್ರಮಾಕ್ಷರದೊಡನೆ ಬರೆಯಿರಿ.**

1. '<u>ಬಿನದ</u>' ಪದದ ತತ್ಸಮ ರೂಪ
   ಎ. ವಿನೋದ  ಬಿ.ಬಿನಾದ  ಸಿ. ಬಿನೋದ  ಡಿ. ಬಿದನ
2. ಈ ಕೆಳಗಿನ ಪದಗಳಲ್ಲಿ ತದ್ಭವ ಪದ
   ಎ. ಸ್ವರ್ಗ  ಬಿ.ಕ್ಷಣ  ಸಿ. ಭೂಮಿ  ಡಿ. ರಾಯ

## ಕ್ರಿಯಾಪದ

ಕ್ರಿಯೆಯ ಅರ್ಥವನ್ನು ಸಂಪೂರ್ಣವಾಗಿ ಕೊಡುವ ಪದಗಳು ಕ್ರಿಯಾಪದಗಳು
ಕ್ರಿಯಾಪದದ ಮೂಲರೂಪ <u>'ಧಾತು'</u>
<u>ಕಾಲ ಮತ್ತು ಕ್ರಿಯಾಪದದ ರೂಪ</u>
ಭೂತಕಾಲಸೂಚ ಪ್ರತ್ಯಯ 'ದ'
ವರ್ತಮಾನ ಕಾಲಸೂಚಕ ಪ್ರತ್ಯಯ 'ಉತ್ತ'
ಭವಿಷ್ಯತ್ ಕಾಲಸೂಚಕ ಪ್ರತ್ಯಯ 'ಉವ, ವ'

| **ಭೂತಕಾಲ ರೂಪ** | **ವರ್ತಮಾನಕಾಲ ರೂಪ** | **ಭವಿಷ್ಯತ್ ಕಾಲ ರೂಪ** |
|---|---|---|
| ಮಾಡಿದನು | ಮಾಡುತ್ತಾನೆ | ಮಾಡುವನು |
| ಹೋದನು | ಹೋಗುತ್ತಾನೆ | ಹೋಗುವನು |
| ಬಂದನು | ಬರುತ್ತಾನೆ | ಬರುವನು |
| ತಿಂದೆನು | ತಿನ್ನುತ್ತೇನೆ | ತಿನ್ನುವೆನು |
| ತಿಂದಳು | ತಿನ್ನುತ್ತಾಳೆ | ತಿನ್ನುವಳು |
| ಕೇಳಿದೆವು | ಕೇಳುತ್ತೇವೆ | ಕೇಳುವೆವು |

## ದ್ವಿರುಕ್ತಿ

ಬೇರೆ ಬೇರೆ ಭಾವನೆ ಅಭಿವ್ಯಕ್ತಪಡಿಸುವಾಗ ಒಂದೇ ಪದ ಎರಡೆರಡು ಬಾರಿ ಪ್ರಯೋಗಿಸುವುದು
ಉದಾ: ಧಮನಿ ಧಮನಿ, ನಿಲ್ಲು ನಿಲ್ಲು, ನಡೆನಡೆ, ದೊಡ್ಡ ದೊಡ್ಡ, ಸಾಕು ಸಾಕು,
ಬೇಗ ಬೇಗ, ಬನ್ನಿಬನ್ನಿ, ಬೇಡಬೇಡ

## ಅನುಕರಣಾವ್ಯಯ

ಶಬ್ದವನ್ನು ಅನುಸರಿಸಿ ಬರುವ ಪದಗಳು: ಸರಸರ, ಚಟಚಟ, ಝಳಝಳ, ಕಿಡಿಕಿಡಿ,
ಕಣಕಣ

## ಜೋಡುನುಡಿ

ಪ್ರಾಸಕ್ಕಾಗಿ ಪರಿಣಾಮಕ್ಕಾಗಿ ಬಳಸುವ ಪದ
ಉದಾ: ಹಣ್ಣುಹಂಪಲು, ಆಟಪಾಠ, ಮನೆಮಠ, ರೀತಿನೀತಿ, ನೆರೆಹೊರೆ

## ನುಡಿಗಟ್ಟು/ಪಡೆನುಡಿ

ವಿಶೇಷಾರ್ಥ ನೀಡಬಲ್ಲ ಪದಪುಂಜ
ಉದಾ: ಕೈಕೊಡು, ಕಾಲಿಗೆ ಬುದ್ದಿಹೇಳು, ಕಣ್ಣು ಕೆಂಪಗೆ ಮಾಡು, ಮೈಮರೆ

**ಕೊಟ್ಟಿರುವ ಪ್ರಶ್ನೆಗಳಿಗೆ ನೀಡಲಾಗಿರುವ ಆಯ್ಕೆಗಳಲ್ಲಿ ಸೂಕ್ತ ಉತ್ತರಗಳನ್ನು ಆರಿಸಿ ಕ್ರಮಾಕ್ಷರದೊಡನೆ ಬರೆಯಿರಿ.**

1. **'ಕ್ರಿಯಾಪದದ'**ಮೂಲ ರೂಪ : ___________
   ಎ. ನಾಮಪದ ಬಿ.ಧಾತು ಸಿ. ಕ್ರಿಯೆ ಡಿ. ಸರ್ವನಾಮ
2. **'ಹೋಗುತ್ತಾನೆ'** ಈ ಕ್ರಿಯಾಪದದ ಭೂತಕಾಲ ರೂಪ: ________
   ಎ. ಹೋದನು ಬಿ. ಹೋಗುವನು ಸಿ. ಹೋಗಲಿಲ್ಲ ಡಿ. ಹೋದಾನು
3. **'ಹಣ್ಣುಹಂಪಲು'** ಇದು ಒಂದು : _______________
   ಎ. ದ್ವಿರುಕ್ತಿ ಬಿ.ಜೋಡುನುಡಿ ಸಿ. ಅನುಕರಣಾವ್ಯಯ ಡಿ. ನುಡಿಗಟ್ಟು
4. ಈಕೆಳಗಿನವುಗಳಲ್ಲಿರುವ ದ್ವಿರುಕ್ತಿ ಪದ :
   ಎ. ನಿಲ್ಲುನಿಲ್ಲು ಬಿ.ನೆರೆಹೊರೆ ಸಿ.ಚಟಚಟ ಡಿ. ಮೈಮರೆ
5. ಮಳೆ ಪಟಪಟನೆ ಸುರಿಯುತ್ತಿತ್ತು. ಇಲ್ಲಿರುವ ಅನುಕರಣಾವ್ಯಯ
   ಎ. ಪಟಪಟ ಬಿ.ಮಳೆ ಸಿ.ಸುರಿಯುತ್ತಿತ್ತು ಡಿ. ಸುರಿ

## ಸಮಾಸಗಳು

ಎರಡು ಅಥವಾ ಎರಡಕ್ಕಿಂತ ಹೆಚ್ಚು ಪದಗಳು ಅರ್ಥಕ್ಕೆ ಲೋಪ ಬಾರದ ರೀತಿಯಲ್ಲಿ ಸೇರುವ ಪದವೇ ಸಮಾಸ. ಸಮಾಸ ಪದವನ್ನು ಬಿಡಿಸಿ ಬರೆಯುವುದನ್ನು ವಿಗ್ರಹವಾಕ್ಯ ಎನ್ನುವರು.ಸಮಾಸದಲ್ಲಿ ಒಟ್ಟು ಏಳು ವಿಧಗಳಿವೆ.

1. ತತ್ಪುರುಷ 2. ಕರ್ಮಧಾರಯ 3. ದ್ವಿಗು 4.ಅಂಶಿ 5.ದ್ವಂದ್ವ 6. ಕ್ರಿಯಾ 7. ಬಹುವ್ರೀಹಿ

### ತತ್ಪುರುಷ ಸಮಾಸ

ಪುರ್ವ ಉತ್ತರ ಪದಗಳು ನಾಮಪದಗಳಾಗಿದ್ದು ಉತ್ತರಪದದ ಅರ್ಥ ಪ್ರಧಾನ

ಉದಾ: ಕಾಲಿನ + ಬಳೆ = ಕಾಲುಬಳೆ
ಅರಸನ + ಮನೆ = ಅರಮನೆ
ಮಳೆಯ + ಕಾಲ = ಮಳೆಗಾಲ

### ಕರ್ಮಧಾರಯ ಸಮಾಸ

ವಿಶೇಷಣ ವಿಶೇಷ ಸಂಬಂಧ ಉತ್ತರಪದ ಪ್ರಧಾನ

ಉದಾ: ಹಳೆಯದು + ಕನ್ನಡ = ಹಳಗನ್ನಡ
ಇನಿದು + ಸರ = ಇಂಚರ
ಹಿರಿದು + ಮರ = ಹೆಮ್ಮರ

### ದ್ವಿಗು ಸಮಾಸ

ಪೂರ್ವಪದ ಸಂಖ್ಯಾವಾಚಕವಾಗಿದ್ದು ಉತ್ತರದಲ್ಲಿ ನಾಮಪದವಿರುತ್ತದೆ.

ಉದಾ: ಮೂರು + ಮಡಿ = ಮುಮ್ಮಡಿ
ಮೂರು + ಕಣ್ಣು = ಮುಕ್ಕಣ್ಣು
ಎರಡು + ಕೆಲ = ಇಕ್ಕೆಲ
ಒಂದು + ಕಟ್ಟು = ಒಗ್ಗಟ್ಟು

### ಅಂಶಿ ಸಮಾಸ

ಪೂರ್ವಪದ ಪ್ರಧಾನ ಸಮಾಸ

ಉದಾ : ಕೈಯ + ಅಡಿ = ಅಂಗೈ
ತಲೆಯ + ಹಿಂದೆ = ಹಿಂದಲೆ
ಕೈಯ + ಮುಂದು = ಮುಂಗೈ

## ದ್ವಂದ್ವ ಸಮಾಸ

ಎಲ್ಲಾ ಪದಗಳ ಅರ್ಥ ಪ್ರಧಾನವಾಗುಳ್ಳ ಸಮಾಸ

| | | | |
|---|---|---|---|
| ಉದಾ: ಕಸವೂ | + ಕಡ್ಡಿಯೂ | = ಕಸಕಡ್ಡಿಯೂ | |
| ಕೆರೆಯು | + ಕಟ್ಟೆಯು | + ಬಾವಿಯು | = ಕೆರೆಕಟ್ಟೆಬಾವಿಯು |
| ಭೀಮನು | + ಅರ್ಜುನನು | = ಬೀಮಾರ್ಜುನರು | |

## ಕ್ರಿಯಾಸಮಾಸ

ಪೂರ್ವಪದ ದ್ವಿತೀಯಾಂತ್ಯವಾಗಿದ್ದು ಉತ್ತರಪದ ಕ್ರಿಯಾಪದವಾಗಿರುತ್ತದೆ.

| | | |
|---|---|---|
| ಉದಾ : ಕೈಯನ್ನು | + ಮುಗಿ | = ಕೈಮುಗಿ |
| ಮೈಯನ್ನು | + ತಡವಿ | = ಮೈದಡವಿ |
| ತಲೆಯನ್ನು | + ಬಾಗು | = ತಲೆಬಾಗು |

## ಬಹುವ್ರೀಹಿ ಸಮಾಸ

ಅನ್ಯಪದದ ಅರ್ಥ ಪ್ರಧಾನವಾಗುಳ್ಳ ಸಮಾಸ

| | | |
|---|---|---|
| ಉದಾ: ಹಣೆಯಲ್ಲಿ | + ಕಣ್ಣುಳ್ಳವ | = ಹಣೆಗಣ್ಣ |
| ಮೂರು | + ಕಣ್ಣುಳ್ಳವ | = ಮುಕ್ಕಣ್ಣ |
| ಒಂದು | + ಕಣ್ಣುಳ್ಳವ | = ಒಕ್ಕಣ್ಣ |

**ಕೊಟ್ಟಿರುವ ಪ್ರಶ್ನೆಗಳಿಗೆ ನೀಡಲಾಗಿರುವ ಆಯ್ಕೆಗಳಲ್ಲಿ ಸೂಕ್ತ ಉತ್ತರಗಳನ್ನು ಆರಿಸಿ ಕ್ರಮಾಕ್ಷರದೊಡನೆ ಬರೆಯಿರಿ.**

1.. ಸಮಾಸದ ವಿಧಗಳು:
ಎ. ಆರು ಬಿ. ಏಳು ಸಿ. ನಾಲ್ಕು ಡಿ. ಐದು

2. **'ಕೈಮುಗಿ'** ಪದವು ಈ ಸಮಾಸಕ್ಕೆ ಉದಾಹರಣೆ
ಎ.ತತ್ಪುರುಷ ಬಿ.ದ್ವಂದ್ವ ಸಿ. ಅಂಶಿ ಡಿ. ಕ್ರಿಯಾ

3. ಈ ಕೆಳಗಿನವುಗಳಲ್ಲಿ ಅಂಶಿ ಸಮಾಸಕ್ಕೆ ಉದಾಹರಣೆ
ಎ. ಅಂಗೈ ಬಿ.ಒಕ್ಕಣ್ಣ ಸಿ. ಮಳೆಗಾಲ ಡಿ. ಹೆಮ್ಮರ

4. **'ಹಳಗನ್ನಡ'** ಪದವನ್ನು ವಿಗ್ರಹವಾಕ್ಯ ಮಾಡಿದಾಗ
ಎ. ಹಳ + ಗನ್ನಡ ಬಿ. ಹಳೆಯದು + ಕನ್ನಡ ಸಿ. ಹಳೆಯುದು + ಕನ್ನಡ ಡಿ. ಹಳಿ + ಕನ್ನಡ

## ವಾಕ್ಯ ಪ್ರಭೇದ

ವಾಕ್ಯಗಳಲ್ಲಿ ಮೂರು ವಿಧ

1. ಸಾಮಾನ್ಯ ವಾಕ್ಯ
2. ಸಂಯೋಜಿತ ವಾಕ್ಯ
3. ಮಿಶ್ರವಾಕ್ಯ
4.

**ಸಾಮಾನ್ಯ ವಾಕ್ಯ:** ಒಂದು ಪೂರ್ಣ ಕ್ರಿಯಾಪದದೊಡನೆ ಸ್ವತಂತ್ರವಾಗಿರುವ ವಾಕ್ಯ.

ಉದಾ: ಹಕ್ಕಿ ಹಣ್ಣನ್ನು ತಿನ್ನುತ್ತದೆ.
ಮೀನು ನೀರಲ್ಲಿ ಈಜುತ್ತದೆ.

**ಸಂಯೋಜಿತ ವಾಕ್ಯ:** ಎರಡು ಅಥವಾ ಅನೇಕ ವಾಕ್ಯಗಳು ಅರ್ಥಸ್ಪಷ್ಟತೆಗಾಗಿ ಸಂಬಂಧದ ಮೂಲಕ ಸೇರಿ ಪೂರ್ಣ ಅರ್ಥನೀಡುತ್ತದೆ.

ಉದಾ: ಮಕ್ಕಳು ಶಾಲೆಗೆ ಬರುತ್ತಾರೆ ಆದರೆ ಪಾಠ ಹೇಳಲು ಶಿಕ್ಷಕರಿಲ್ಲ.
ಮಕ್ಕಳು ಹಾಲು ಕುಡಿಯುತ್ತಾರೆ ಮತ್ತು ಹಣ್ಣನ್ನು ತಿನ್ನುತ್ತಾರೆ.

**ಮಿಶ್ರವಾಕ್ಯ :** ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನವಾಕ್ಯಕ್ಕೆ ಅಧೀನವಾಗಿರುತವೆ.
ಉದಾ: ಕುವೆಂಪು ಅವರ ಭಾವಗೀತೆಗಳನ್ನು ಕೇಳಿ ವಿದ್ಯಾರ್ಥಿಗಳು ಮೈಮರೆತರು.
ತಮ್ಮ ಗ್ರಾಮಕ್ಕೆ ಹೆಚ್ಚು ಬಸ್ಸು ಬರುವುದೆಂದು ತಿಳಿದು ಗ್ರಾಮಸ್ಥರು ಸಂತಸಪಟ್ಟರು.

**ಕೊಟ್ಟಿರುವ ಪ್ರಶ್ನೆಗಳಿಗೆ ನೀಡಲಾಗಿರುವ ಆಯ್ಕೆಗಳಲ್ಲಿ ಸೂಕ್ತ ಉತ್ತರಗಳನ್ನು ಆರಿಸಿ ಕ್ರಮಾಕ್ಷರದೊಡನೆ ಬರೆಯಿರಿ.**

1. ಒಂದು ಅಥವಾ ಅನೇಕ ವಾಕ್ಯಗಳು <u>ಪ್ರಧಾನವಾಕ್ಯಕ್ಕೆ</u> ಅಧೀನವಾಗಿದ್ದರೆ:
   ಎ. ಸಾಮಾನ್ಯವಾಕ್ಯ ಬಿ.ಸಂಯೋಜಿತ ವಾಕ್ಯ ಸಿ. ಮಿಶ್ರವಾಕ್ಯ ಡಿ. ವಿಶೇಷ ವಾಕ್ಯ
2. <u>ಹಕ್ಕಿ ಹಣ್ಣನ್ನು ತಿನ್ನುತ್ತದೆ</u>. ಈ ವಾಕ್ಯವು :
   ಎ. ಮಿಶ್ರವಾಕ್ಯ ಬಿ.ಸಾಮಾನ್ಯವಾಕ್ಯ ಸಿ. ವಾಕ್ಯ ಡಿ. ಸಂಯೋಜಿತ ವಾಕ್ಯ

## <u>ಲೇಖನ ಚಿಹ್ನೆಗಳು</u>

**ಪೂರ್ಣವಿರಾಮ :** ವಾಕ್ಯದ ಪೂರ್ಣಾರ್ಥ ಕ್ರಿಯೆಯನ್ನು ಸೂಚಿಸುವುದು.
ಉದಾ: ವಿದ್ಯಾರ್ಥಿಗಳು ಚೆನ್ನಾಗಿ ಅಭ್ಯಾಸ ಮಾಡಬೇಕು.
**ಅರ್ಧವಿರಾಮ:** ಪ್ರಧಾನ ವಾಕ್ಯದಲ್ಲಿಯ ಅನೇಕ ಉಪವಾಕ್ಯಗಳ ಅಂತ್ಯದಲ್ಲಿ ಮಾತ್ರ ಬರುವುದು.
ಉದಾ: ಅಟ್ಟಮೇಲೆ ಒಲೆ ಉರಿಯಿತು; ಕೆಟ್ಟ ಮೇಲೆ ಬುದ್ದಿ ಬಂತು.
**ಅಲ್ಪವಿರಾಮ :** ಸಂಬೋಧನೆಯ ಮುಂದೆ ಕರ್ತೃ, ಕರ್ಮ, ಕ್ರಿಯಾಪದಗಳಿಗೆ ವಿಶೇಷಣಗಳು ಬಂದಾಗ ಕೊನೆಯ ಪದವನ್ನು ಬಿಟ್ಟು ಉಳಿದ ಪದಗಳ ಮುಂದೆ ಬಳಸುವ ಚಿಹ್ನೆ.
ಉದಾ: ರಾಮ, ಸೀತೆ, ಲಕ್ಷ್ಮಣ ಒಟ್ಟಿಗೆ ಕಾಡಿಗೆ ಹೋದರು.

**ಪ್ರಶ್ನಾರ್ಥಕ :**ಪ್ರಶ್ನೆಗಳನ್ನು ಬರೆಯುವ ಸಂದರ್ಭದಲ್ಲಿ ವಾಕ್ಯದ ಅಂತ್ಯದಲ್ಲಿ ಬಳಸುವ ಚಿಹ್ನೆ
ಉದಾ: ನಿನ್ನ ಹೆಸರೇನು? ನಿನ್ನ ತಂದೆತಾಯಿ ಎಲ್ಲಿದ್ದಾರೆ?

**ಭಾಸೂಚಕ ಚಿಹ್ನೆ :**ಹರ್ಷ, ಅಚ್ಚರಿ, ದುಃಖ, ಕೋಪ ಇತ್ಯಾದಿ ಭಾವನೆಗಳನ್ನು ವ್ಯಕ್ತಪಡಿಸುವಾಗ ಸೂಚಿಸುವ ಪದಗಳ ಮುಂದೆ ಬಳಸುವ ಚಿಹ್ನೆ.
ಉದಾ : ಅಬ್ಬಾ! ಎಂಥ ರಮ್ಯ ನೋಟ.
ಆಹಾ! ಹೂ ಎಷ್ಟು ಸುಂದರವಾಗಿದೆ.

**ವಿವರಣಾತ್ಮಕ ಚಿಹ್ನೆ :**ಅಭಿಪ್ರಾಯದ ವಿವರಣೆ ಇಂತಿದೆ ಎಂದು ತಿಳಿಸುವ ಸಂದರ್ಭದಲ್ಲಿ ಬಳಸುವ ಚಿಹ್ನೆ.
ಉದಾ: ನಾನು ಹೇಳುತ್ತೇನೆ : ನೀವು ಅಲ್ಲಿಗೆ ಹೋಗದಿರುವುದೇ ಒಳ್ಳೆಯದು.

**ಉದ್ಧರಣ ಚಿಹ್ನೆ :**ಬರವಣಿಗೆಯಲ್ಲಿ ಇನ್ನೊಬ್ಬರ ಹೇಳಿಕೆಯನ್ನು ಯಥಾವತ್ತಾಗಿ ತಿಳಿಸಲು ಬಳಸುವ ಚಿಹ್ನೆ.
ಉದಾ: "ವಚನ ಸಾಹಿತ್ಯವು ಪ್ರಪಂಚದ ಸಾಹಿತ್ಯದಲ್ಲಿಯೆ ವಿಶಿಷ್ಟ ಬಗೆಯ ಸಾಹಿತ್ಯ" ವೆಂದು ಗುರುಗಳು ಹೇಳಿದರು.

**ವಾಕ್ಯವೇಷ್ಟನ :**ಬರವಣಿಗೆಯಲ್ಲಿ ಪಾರಿಭಾಷಿಕ ಪ್ರಧಾನ ವಿಶಿಷ್ಟ ಪದಗಳನ್ನು ಬಳಸುವಾಗ ಉಪಯೋಗಿಸುವ ಚಿಹ್ನೆ.
ಉದಾ: 'ಒಲಿದರೆ ನಾರಿ, ಮುನಿದರೆ ಮಾರಿ'
ಕನ್ನಡದಲ್ಲಿ ಅನೇಕ 'ಇಂಗ್ಲಿಷ್' ಪದಗಳು ಬಳಕೆಯಲ್ಲಿವೆ.

**ಆವರಣ :**ನೇರ ಸಂಬಂಧವಿಲ್ಲದ ವಿವರಣೆಗಳನ್ನು ಅರ್ಥಗಳನ್ನು ನೀಡುವ ಸಂದರ್ಭದಲ್ಲಿ ಬಳಸುವ ಚಿಹ್ನೆ. ಒಂದು ಪದಕ್ಕೆ ಇನ್ನೊಂದು ಸಮಾನಾರ್ಥಕ ಪದವನ್ನು ಹೇಳುವಾಗ ಬಳಸುವ ಚಿಹ್ನೆ.
ಉದಾ: ಒಂದು ದಿನ ನರಿಯು ಕೊಕ್ಕರೆಯನ್ನು (ನೀರುಹಕ್ಕಿ) ಊಟಕ್ಕೆ ಕರೆಯಿತು.

**ಕೊಟ್ಟಿರುವ ಪ್ರಶ್ನೆಗಳಿಗೆ ನೀಡಲಾಗಿರುವ ಆಯ್ಕೆಗಳಲ್ಲಿ ಸೂಕ್ತ ಉತ್ತರಗಳನ್ನು ಆರಿಸಿ ಕ್ರಮಾಕ್ಷರದೊಡನೆ ಬರೆಯಿರಿ.**

1. ನಿನ್ನ ಹೆಸರೇನು ಈ ವಾಕ್ಯದಲ್ಲಿ ಇರಬೇಕಾದ ಲೇಖನ ಚಿಹ್ನೆ.
   ಎ. ಭಾವಸೂಚಕ ಬಿ.ಉದ್ಧರಣ ಸಿ. ಪ್ರಶ್ನಾರ್ಥಕ ಡಿ. ಆವರಣ
2. ವಾಕ್ಯದ ಪೂರ್ಣಾರ್ಥ ಕ್ರಿಯೆಯನ್ನು ಸೂಚಿಸುವಾಗ ಬಳಸುವ ಚಿಹ್ನೆ
   ಎ. ಪೂರ್ಣವಿರಾಮ ಬಿ.ಅರ್ದವಿರಾಮ ಸಿ. ಅಲ್ಪವಿರಾಮ ಡಿ. ವಾಕ್ಯವೇಷ್ಟನ

## ಅಲಂಕಾರ

ಕಾವ್ಯದ ಸೌಂದರ್ಯವನ್ನು ಹೆಚ್ಚಿಸುವ ಶಬ್ದ – ಅರ್ಥ ಚಮತ್ಕಾರಕ್ಕೆ ಅಲಂಕಾರ ಎನ್ನುವರು.
ಅಲಂಕಾರದಲ್ಲಿ ಶಬ್ದಾಲಂಕಾರ ಮತ್ತು ಅರ್ಥಾಲಂಕಾರ ಎಂಬ ಎರಡು ವಿಧಗಳಿವೆ.
ಶಬ್ದಾಲಂಕಾರ : ಶಬ್ದ ಅಥವಾ ಅಕ್ಷರಗಳ ಜೋಡಣೆಯ ಚಮತ್ಕಾರದಿಂದ ಕಾವ್ಯ ಅಥವಾ ಮಾತಿನ ಸೌಂದರ್ಯ ಹೆಚ್ಚಿಸುವ ಅಲಂಕಾರ.
ಉದಾ: ಲಲಿತ ಲಮಗ ಲತಾ ಪರಿಶೀಲನ ಕೋಮಲ ಮಲಲಯ ಸುಮೀರೇ.

ನನ್ನಾನೇನೂ ನಿನ್ನಾನೇನೂ
ನಾನು ನೀನೂ ನೋನೋನೆ

## ಅರ್ಥಾಲಂಕಾರ

ಪದಗಳ ಅರ್ಥ ಚಮತ್ಕಾರದಿಂದ ಕಾವ್ಯ ಸೌಂದರ್ಯ ಹೆಚ್ಚಿದರೆ ಅರ್ಥಾಲಂಕಾರ.

## ಉಪಮಾಲಂಕಾರ

ಉಪಮಾನ ಉಪಮೇಯಗಳಿಗೆ ಹೋಲಿಕೆ ಇರುವ ಅಲಂಕಾರವೇ ಉಪಮಾಲಂಕಾರ
ಉಪಮೇಯ : ವರ್ಣ್ಯ, ವರ್ಣಿಸುವ ವಸ್ತು.
ಉಪಮಾನ : ವರ್ಣಕ, ಯಾವ ವಸ್ತುವನ್ನು ಆಧಾರವಾಗಿಟ್ಟು ವರ್ಣಿಸುವ ವಸ್ತುವೇ ವರ್ಣಕ

ಉದಾ :– ಸೀತೆಯ ಮುಖ ಕಮಲದಂತೆ ಅರಳಿತು.

ಹನುಮಂತನಂತೆ ನೀ ವಿಕಾಸಗೊಳ್ಳುವೆ.

## ರೂಪಕಾಲಂಕಾರ

ಉಪಮಾನ ಉಪಮೇಯ ಒಂದೇ ಎಂದು ಅಭೇದ ರೂಪಿಸಿಕೊಳ್ಳುವುದೇ ರೂಪಕಾಲಂಕಾರ.

ಉದಾ :– ಸೀತೆಯ ಮುಖಕಮಲ ಅರಳಿತು.
ನೀನೇ ಬೆನ್ನೆಲುಬು

ಅಕ್ಷರವೆಂಬುದು ಅಲ್ಲಾದೀನನ ಅದ್ಭುತ ಮಾಯಾದೀಪ.

**ಕೊಟ್ಟಿರುವ ಪ್ರಶ್ನೆಗಳಿಗೆ ನೀಡಲಾಗಿರುವ ಆಯ್ಕೆಗಳಲ್ಲಿ ಸೂಕ್ತ ಉತ್ತರಗಳನ್ನು ಆರಿಸಿ ಕ್ರಮಾಕ್ಷರದೊಡನೆ ಬರೆಯಿರಿ.**

1. ಅಭೇದ ಕಲ್ಪನೆ ಇರುವ ಅಲಂಕಾರ.
   ಎ. ರೂಪಕ ಬಿ.ಉಪಮ ಸಿ. ಚಂಪಕ ಡಿ. ದೃಷ್ಟಾಂತ
2. ಉಪಮಾಲಂಕಾರದಲ್ಲಿ ವರ್ಣಿಸುವ ವಸ್ತು
   ಎ. ಸಮನ್ವಯ ಬಿ.ಉಪಮೇಯ ಸಿ. ಉಪಮಾನ ಡಿ. ಉಪಮಾವಾಚಕ
3. 'ಅಕ್ಷರವೆಂಬುದು ಅಲ್ಲದೀನನ ಅದ್ಭುತ ಮಾಯಾದೀಪ' ಇದು ಈ ಅಲಂಕಾರಕ್ಕೆ ಉದಾಹರಣೆ
   ಎ. ಉಪಮ ಬಿ. ರೂಪಕ ಸಿ. ಶ್ಲೇಷೆ ಡಿ. ದೃಷ್ಟಾಂತ
4. 'ಹನುಮಂತನಂತೆ ನೀ ವಿಕಾಸಗೊಳ್ಳುವೆ' ಇದು ಈ ಅಲಂಕಾರಕ್ಕೆ ಉದಾಹರಣೆ
   ಎ. ಉಪಮ ಬಿ. ರೂಪಕ ಸಿ. ಶ್ಲೇಷೆ ಡಿ. ದೃಷ್ಟಾಂತ
5. 'ನೀನೇ ಬೆನ್ನೆಲುಬು' ಇದು ಈ ಅಲಂಕಾರಕ್ಕೆ ಉದಾಹರಣೆ
   ಎ. ಉಪಮ ಬಿ. ರೂಪಕ ಸಿ. ಶ್ಲೇಷೆ ಡಿ. ದೃಷ್ಟಾಂತ

## ಈ ಸಾಹಿತಿಗಳ ಕಾಲ, ಸ್ಥಳ, ಕೃತಿಗಳನ್ನು ಕುರಿತು ಬರೆಯಿರಿ.

### ಗೊರೂರು ರಾಮಸ್ವಾಮಿ ಅಯ್ಯಂಗಾರ್

ಗೊರೂರು ರಾಮಸ್ವಾಮಿ ಅಯ್ಯಂಗಾರ್‌ರವರು 1904 ನೇ ಜುಲೈ 4 ರಂದು ಹಾಸನ ಜಿಲ್ಲೆಯ ಗೊರೂರಿನಲ್ಲಿ ಜನಿಸಿದರು. 'ನಮ್ಮ ಊರಿನ ರಸಿಕರು', 'ಗರುಡಗಂಬದ ದಾಸಯ್ಯ' , 'ಮೆರವಣಿಗೆ', 'ಹೇಮಾವತಿ', 'ಅಮೇರಿಕಾದಲ್ಲಿ ಗೊರೂರು' ಇವರ ಪ್ರಮುಖ ಕೃತಿಗಳು 'ರಾಜ್ಯ ಸಾಹಿತ್ಯ ಅಕಾಡಮಿ ಪ್ರಶಸ್ತಿ', ಮೈಸೂರು ವಿಶ್ವವಿದ್ಯಾನಿಲಯದ ಗೌರವ 'ಡಿ.ಲಿಟ್' ಪದವಿ, 'ಕೇಂದ್ರ ಸಾಹಿತ್ಯ ಅಕಾಡೆಮಿ' ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

### ಚೆನ್ನವೀರ ಕಣವಿ

ಚೆನ್ನವೀರ ಕಣವಿ ಗದಗ ಜಿಲ್ಲೆಯ ಹೊಂಬಳದಲ್ಲಿ ಜೂನ್ 28 1928 ರಲ್ಲಿ ಜನಿಸಿದರು. 'ಆಕಾಶ ಬುಟ್ಟಿ', 'ಭಾವಜೀವ', 'ಮಣ್ಣಿನ ಮೆರವಣಿಗೆ', ನೆಲಮುಗಿಲು, 'ಹೂವು ಹೊರಳುವುವು ಸೂರ್ಯನ ಕಡೆಗೆ' ಇವರ ಪ್ರಮುಖ ಕೃತಿಗಳು.'ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ', 'ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ', ಪಂಪ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

### ಜಿ.ಪಿ.ರಾಜರತ್ನಂ

ಜೆ.ಪಿ.ರಾಜರತ್ನಂ ರವರು ಜನಿಸಿದ್ದು ಈಗಿನ ರಾಮನಗರ ಜಿಲ್ಲೆಯ ರಾಮನಗರದಲ್ಲಿ ಆಗಿನ ಹೆಸರು 'ಕ್ಲೋಸ್‌ಪೇಟೆ' ಇವರು ಡಿಸೆಂಬರ್ 5 1908 ರಂದು ಜನಿಸಿದರು. ಇವರ ಪ್ರಮುಖ ಕೃತಿಗಳು 'ರತ್ನನ ಪದಗಳು', 'ನಾಗನ ಪದಗಳು', ಗೌತಮ ಬುದ್ಧ, ಏಸುಕ್ರಿಸ್ತ, ವಿಚಾರ ರಶ್ಮಿ–2 ಮೈಸೂರು ವಿಶ್ವವಿದ್ಯಾನಿಲಯ ಗೌರವ ಡಾಕ್ಟರೇಟ್ ಪದವಿ 'ರಾಜ್ಯೋತ್ಸವ ಪ್ರಶಸ್ತಿ' ನೀಡಿ ಗೌರವಿಸಲಾಗಿದೆ.

### ಕೆ.ಎಸ್. ನಿಸಾರ್ ಅಹಮದ್

ಕೆ.ಎಸ್. ನಿಸಾರ್ ಅಹಮದ್ 1936ರಲ್ಲಿ ಫೆಬ್ರವರಿ 5 ರಂದು ಜನಿಸಿದರು.ಇವರು ದೇವನಹಳ್ಳಿಯವರು 'ಮನಸು ಗಾಂಧಿ ಬಜಾರು'.'ನೆನೆದವರ ಮನದಲ್ಲಿ', ಸಂಜೆ ಐದರ ಮಳೆ, ನಾನೆಂಬ ಪರಕೀಯ, ನಿತ್ಯೋತ್ಸವ, ಅನಾಮಿಕ ಆಂಗ್ಲರು ಸಮಗ್ರ ಕವಿತೆಗಳು ಇವರ ಪ್ರಮುಖ ಕವನ ಸಂಕಲನಗಳು 'ಸೋವಿಯತ್ ಲ್ಯಾಂಡ್ ನೆಹರು ಪ್ರಶಸ್ತಿ' ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ರಾಜ್ಯಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಹಾಗೂ ರಾಜ್ಯೋತ್ಸವ ಪ್ರಶಸ್ತಿಗಳು ಲಭಿಸಿವೆ.

### ಬಿ. ಆರ್. ಲಕ್ಷ್ಮಣರಾವ್

ಬಿ. ಆರ್.ಲಕ್ಷ್ಮಣರಾವ್‌ರವರು ಚಿಕ್ಕಬಳ್ಳಾಪುರದ ಚಿಂತಾಮಣಿಯವರು.ಇವರು ಹುಟ್ಟಿದ್ದು 9ನೇ ಸೆಪ್ಟೆಂಬರ್ 1946.'ಕ್ಯಾಮೆರಾ ಕಣ್ಣು' ಎಂಬ ಇವರ ಸಮಗ್ರ ಕವನ ಸಂಕಲನ ಬೆಳಕು ಕಂಡಿದೆ.ಇವರ ಪ್ರಮುಖಕೃತಿಗಳು 'ಗೋಪಿ ಮತ್ತು ಗಾಂಡಲೀನ', ಟುವಟಾರ, ಶಾಂಗ್ರಿ–ಲಾ ಮತ್ತು ಭಾರತ ಬಿಂದು ರಶ್ಮಿ, ಸುಬ್ಬಾಭಟ್ಟರ ಮಗಳೇ ಇತ್ಯಾದಿ. ಇವರಿಗೆ 'ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ',, ಗೊರೂರು ಸಾಹಿತ್ಯ ಪ್ರಶಸ್ತಿ ಮತ್ತು ಪು.ತಿ.ನ. ಕಾವ್ಯ ಪುರಸ್ಕಾರಗಳು ಲಭಿಸಿವೆ.

### ಎಸ್. ಆರ್ ರೋಹಿಡೇಕರ್

ಶಾಮ್ ರೋಹಿಡೆ ಇದು ಪ್ರೊ॥ ಎಸ್. ಆರ್.ರೋಹಿಡೇಕರ್ ಅವರ ಕಾವ್ಯನಾಮ. ಇವರು 1915 ಸೆಪ್ಟೆಂಬರ್ 15ರಂದು ಬಿಜಾಪುರದಲ್ಲಿ ಜನಿಸಿದರು.ಶಿಕ್ಷಣ ಮುಗಿಸಿ ಬಿಜಾಪುರದಲ್ಲಿರುವ ಶ್ರೀ ಸಿದ್ದೇಶ್ವರ ಹೈಸ್ಕೂಲಿನಲ್ಲಿ ಶಿಕ್ಷಕ ವೃತ್ತಿಯನ್ನು ಆರಂಭಿಸಿದರು.ಪ್ರಾಧ್ಯಾಪಕ, ಪ್ರಾಂಶುಪಾಲ, ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕರೂ ಆದರು. ಹಾಗೂ ಬೆಂಗಳೂರು ವಿಶ್ವವಿದ್ಯಾನಿಲಯದ ಶಿಕ್ಷಣ ಶಾಲಾ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿ 1995ರಲ್ಲಿ ನಿವೃತ್ತರಾದರು. ಇವರ ಕೃತಿ 'ಮೂರು ಏಕಾಂಕ ನಾಟಕಗಳು' ಇತ್ಯಾದಿ.

### ಅಂಬಿಗರ ಚೌಡಯ್ಯ

ಅಂಬಿಗರ ಚೌಡಯ್ಯ 12ನೇ ಶತಮಾನದವರು.ಇವರು ವಿಶಿಷ್ಟ ವ್ಯಕ್ತಿಯಾಗಿ ಕಾಣುತ್ತಾರೆ.ಇವರ ಊರು ಇಂದಿನ ಹಾವೇರಿ ಜಿಲ್ಲಿಯ 'ಚೌಡದಾನಪುರ' ವೆಂದು ಕೆಲ ವಿದ್ವಾಂಸರ ಅಭಿಮತ.ಇವರು ಹಲವಾರು ವಚನಗಳನ್ನು ರಚಿಸಿದ್ದಾರೆ.

## ಡಾ॥ ವಿಜಯಲಕ್ಷ್ಮಿ ಬಾಳೇಕುಂದ್ರಿ

ಡಾ॥ ವಿಜಯಲಕ್ಷ್ಮಿ ಈಶ್ವರಪ್ಪ ಬಾಳೇಕುಂದ್ರಿಯವರು ಬೆಳಗಾವಿಯಲ್ಲಿ 1950 ಆಗಸ್ಟ್ 6ರಂದು ಜನಿಸಿದರು.ಇವರು ವೃತ್ತಿಯಿಂದ ವೈದ್ಯೆ.ಕರ್ನಾಟಕದ ಪ್ರಪ್ರಥಮ ಮಹಿಳಾ ಹುದ್ರೋಗ ತಜ್ಞೆ.22 ಚಿನ್ನದ ಪದಕಗಳನ್ನು ಗಳಿಸಿದ್ದಾರೆ.2002ರಲ್ಲಿ ಕರ್ನಾಟಕದ ಸರ್ಕಾರವು ರಾಜ್ಯೋತ್ಸವ ಪ್ರಶಸ್ತಿ ನೀಡಿದೆ.2012ರಲ್ಲಿ ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯವು ಗೌರವ ಡಾಕ್ಟರೇಟ್ ಪದವಿ ನೀಡಿ ಗೌರವಿಸಿದೆ.ಕೃತಿ ಜೀವನಧಾರೆ ಅಲ್ಲದೆ ವೈದ್ಯಕೀಯ ಕೃತಿಗಳು, ಅಂಕಣಗಳನ್ನು ಬರೆದಿದ್ದಾರೆ.

## ಪುರಂದರದಾಸರು

ಪುರಂದರದಾಸರು 1484 ರಿಂದ 1564 ನಡುವೆ ಜನಿಸಿದ್ದರು.ಶ್ರೀಮಂತರಾಗಿದ್ದ ಪುರಂದರದಾಸರು ಯಾವುದೋ ಕಾರಣದಿಂದ ವೈರಾಗ್ಯವನ್ನು ತಾಳಿದರು.ಪುರಂದರ ದಾಸರ ಮೊದಲ ಹೆಸರು ಶ್ರೀನಿವಾಸ ನಾಯಕ.ಇವರ ತಂದೆ ವರದಪ್ಪನಾಯಕ ತಾಯಿ ಲಕ್ಷ್ಮಿದೇವಿ.ಇವರ ಹೆಂಡತಿ ಸರಸ್ವತಿಬಾಯಿ. ಇವರು ಕೀರ್ತನೆ. ಸುಳಾದಿ, ಉಗಾಭೋಗಗಳನ್ನು ರಚಿಸಿದ್ದಾರೆ.ಇವರನ್ನು **'ಕರ್ನಾಟಕ ಸಂಗೀತ ಪಿತಾಮಹ'** ಎಂದು ಕರೆಯುತ್ತಾರೆ.

## ಅ.ರಾ. ಮಿತ್ರ

ಅ.ರಾ. ಮಿತ್ರ ಅವರು 1935ರ ಫೆಬ್ರವರಿ 25 ರಂದು ಹಾಸನ ಜಿಲ್ಲೆಯ ಬೇಲೂರಿನಲ್ಲಿ ಜನಿಸಿದರು.ಇವರು ಖ್ಯಾತ ಸಾಹಿತಿ ಮತ್ತು ವಾಗ್ಮಿ.ಇವರು ಉತ್ತಮ ವ್ಯಕ್ತಿ ಚಿತ್ರಗಳನ್ನು ರಚಿಸಿದ್ದಾರೆ.ಇವರ ಕೃತಿಗಳು ಲಲಿತ ಪ್ರಬಂಧ, ಆರತಕ್ಷತೆ, ನಾನೇಕೆ ಕೊರೆಯುತ್ತೇನೆ, ಸಮಗ್ರ ಪ್ರಬಂಧ ಸಂಕಲನ ಸಣ್ಣಕಥೆ ಪ್ರೇಮ ನದಿಯ ದಡಗಳಲ್ಲಿ ಸ್ಮರಣೀಯರು ಇತ್ಯಾದಿ.

## ಈರಪ್ಪ ಎಂ. ಕಂಬಳಿ

ಈರಪ್ಪ ಎಂ.ಕಂಬಳಿ ಇವರ ಊರು ಕೊಪ್ಪಳ ಜಿಲ್ಲೆಯ ಯಲಬುರ್ಗಿ ಇವರು ಜನಿಸಿದ್ದು ಆಗಸ್ಟ್ 15, 1958 ರಲ್ಲಿ.ಇವರ ತಂದೆ ಮುದಕಪ್ಪ ತಾಯಿ ಶಿವಬಸಮ್ಮ. 1992 ರಲ್ಲಿ ಪ್ರಕಟವಾದ ಇವರ ಮೊದಲ ಕವನ ಸಂಕಲನ 'ಅರೆಸತ್ತ ಬದುಕು' ಇವರು ಐದು ಲಲಿತ ಪ್ರಬಂಧಗಳನ್ನು ಪ್ರಕಟಿಸಿದ್ದಾರೆ ಅವು 'ಹೆದ್ದಾರಿಗುಂಟ', 'ಹೀಗೊಂದು ಟಾಪ್ ಪ್ರಯಾಣ', 'ಚಾಚನೆಹರು', ಮತ್ತು 'ಈಚಲ ಮರ', 'ಹುರಳಿಕಟ್ಟು', 'ಕಳ್ಳೀಹಾಲು', 'ಕರಾವಳಿ ಗುಂಟ ಆರು ದಿನ' ಇವರ ಪ್ರವಾಸ ಕಥನ.

## ಪುಲಿಗೆರೆ ಸೋಮನಾಥ

ಕವಿ ಪುಲಿಗೆರೆ ಸೋಮನಾಥನು ಕ್ರಿ.ಶ. ಸುಮಾರು 1299ರಲ್ಲಿ ಧಾರವಾಡ ಜಿಲ್ಲೆಯ ಶಿರಹಟ್ಟಿ ತಾಲ್ಲೂಕಿನ ಪುಲಿಗೆರೆ ಎಂಬಲ್ಲಿ ಜನಿಸಿದನು.ಕನ್ನಡ ಮತ್ತು ಸಂಸ್ಕೃತ ಭಾಷಾ ಪಂಡಿತನಾದ ಇವನು 'ಸೋಮೇಶ್ವರ ಶತಕ' ಹಾಗೂ 'ರತ್ನ ಕರಂಡಕ' ಎಂಬ ಕೃತಿಗಳನ್ನು ರಚಿಸಿದ್ದಾನೆ. 'ಹರಹರಾ ಶ್ರೀ ಚೆನ್ನಸೋಮೇಶ್ವರಾ' ಎಂಬುದು ಈತನ ಅಂಕಿತನಾಮ.

## ಶ್ರೀಮತಿ ಪ್ರೇಮಾಭಟ್

ಪ್ರೇಮಾಭಟ್‌ರವರು ಸೆಪ್ಟೆಂಬರ್ 1941ರಲ್ಲಿ ಉಡುಪಿ ಜಿಲ್ಲೆಯ ಹೆರ್ಗದಲ್ಲಿ ಜನಿಸಿದರು.ನಿವೃತ್ತ ಸರ್ಕಾರಿ ಅಧಿಕಾರಿ ಅನೇಕ ಕಾದಂಬರಿ ಹಾಗೂ ಸಣ್ಣ ಕತೆಗಳನ್ನು ಬರೆದಿದ್ದಾರೆ.ಇವರ ಕೃತಿಗಳು ಕಥಾವರ್ಷ, ಸಣ್ಣ ಕಥೆಗಳ ಬೃಹತ್ ಸಂಕಲನ ಕಾದಂಬರಿಗಳು ಮನೆಮನ, ದೇವರಾಣಿ, ಕುಂಕುಮ ಶೋಭಿನಿ.ಇವರಿಗೆ ಮಾತೃಶ್ರೀ ರತ್ನಮ್ಮ ಹೆಗ್ಗಡೆ ಪುರಸ್ಕಾರ, ವಿಶ್ವೇಶ್ವರಯ್ಯ ಪ್ರತಿಷ್ಠಾನ ಪ್ರಶಸ್ತಿ, ಅನುಪಮಾ ಪ್ರಶಸ್ತಿಗಳು ದೊರಕಿವೆ.

## ಪತ್ರಲೇಖನ

ನಾವು ದಿನನಿತ್ಯ ಹಲವರೊಂದಿಗೆ ವಿವಿಧ ಬಗೆಯಲ್ಲಿ ವ್ಯವಹರಿಸುತ್ತೇವೆ. ಇಂಥ ವ್ಯವಹಾರ ಮಾಧ್ಯಮಗಳಲ್ಲಿ ಪತ್ರ ಒಂದು.ಪತ್ರಗಳನ್ನು ಅಧ್ಯಯನದ ದೃಷ್ಟಿಯಿಂದ ಖಾಸಗಿ ಪತ್ರ, ವ್ಯವಹಾರಿಕ ಪತ್ರ, ರಜೆಪತ್ರ ಎಂಬುದಾಗಿ ವಿಭಾಗಿಸಿಕೊಳ್ಳಬಹುದು.

## ಖಾಸಗಿ ಪತ್ರಗಳು ಅಥವಾ ವೈಯಕ್ತಿಕ ಪತ್ರಗಳು

ರಕ್ತ ಸಂಬಂಧಿಗಳು ಹಾಗೂ ಬಂಧುಮಿತ್ರರಿಗೆ ಬರೆಯುವ ಪತ್ರಗಳನ್ನು ಖಾಸಗಿ ಪತ್ರಗಳೆಂದು ಕರೆಯಲಾಗಿದೆ. ಇವು ವ್ಯಕ್ತಿಯ ವೈಯುಕ್ತಿಕ ವಿಚಾರಗಳನ್ನು ಒಳಗೊಂಡಿರುತ್ತದೆ.ಈ ಪತ್ರಗಳನ್ನು ತಂದೆ, ತಾಯಿ, ಅಣ್ಣ, ಅಕ್ಕ, ತಂಗಿ ಮತ್ತು ತಮ್ಮ ಅಲ್ಲದೆ ಇತರ ಬಂಧುಗಳಿಗೂ ಹಾಗೂ ಗೆಳೆಯ–ಗೆಳತಿಯರಿಗೂ ಬರೆಯಲಾಗವುದು.
ತಂದೆಗೆ ಪತ್ರ ಬರೆಯುವಾಗ ಪ್ರಾರಂಭದಲ್ಲಿ 'ತೀರ್ಥರೂಪು', ತಾಯಿಗೆ ಪತ್ರ ಬರೆಯುವಾಗ ಪ್ರಾರಂಭದಲ್ಲಿ 'ಮಾತೃಶ್ರೀ' ಅಣ್ಣನಿಗೆ ಪತ್ರ ಬರೆಯುವಾಗ ಪ್ರಾರಂಭದಲ್ಲಿ ತೀರ್ಥರೂಪು ಸಮಾನ, ತಮ್ಮನಿಗೆ ಪತ್ರ ಬರೆಯುವಾಗ ಪ್ರಾರಂಭದಲ್ಲಿ 'ಚಿರಂಜೀವಿ', ತಂಗಿಗೆ ಪತ್ರ ಬರೆಯುವಾಗ ಪ್ರಾರಂಭದಲ್ಲಿ ಸೌಭಾಗ್ಯವತಿ, ಅಕ್ಕನಿಗೆ ಪತ್ರ ಬರೆಯುವಾಗ 'ಮಾತೃಶ್ರೀ ಸಮಾನರಾದ', ಗೆಳೆಯ ಗೆಳತಿಯರಿಗೆ ಪತ್ರ ಬರೆಯುವಾಗ ಪ್ರಾರಂಭದಲ್ಲಿ 'ಪ್ರೀತಿಯ' ಗೆಳೆಯ/ಗೆಳತಿ ಎಂದು ಸಂಬೋಧನೆ ಮಾಡುತ್ತೇವೆ. ಮುಕ್ತಾಯ ನಿಮ್ಮ (ಪ್ರೀತಿಯ) ನಿನ್ನ ಪ್ರೀತಿಯ ಎಂದು ಬಳಸುತ್ತೇವೆ. ಪತ್ರದ ಕೊನೆಯಲ್ಲಿ ಹೊರ ವಿಳಾಸ ಬರೆಯುತ್ತೇವೆ.

ಕ್ಷೇಮ ಶ್ರೀ ಹೆಸರು :

ಸ್ಥಳ :

ದಿನಾಂಕ:

_____________ ರವರಿಗೆ ನಿಮ್ಮ ಪ್ರೀತಿಯ ________ ಮಾಡುವ ______________ ಇಲ್ಲಿ ನಾನು ಕ್ಷೇಮವಾಗಿದ್ದೇನೆ. ಅಲ್ಲಿ ನೀವೆಲ್ಲರೂ ಕ್ಷೇಮವಾಗಿರುವಿರೆಂದು ನಂಬಿರುತ್ತೇನೆ.

______________________________________________________________________

_

______________________________________________________________________

______________________________________________________________________

______________________________________________________________________

______________________________________________________________________

______________________________________________________________________

ಮನೆಯಲ್ಲಿರುವ ಎಲ್ಲರಿಗೂ ನನ್ನ ನಮಸ್ಕಾರ ತಿಳಿಸಿ.ಈ ಪತ್ರ ತಲುಪಿದ ಮೇಲೆ ಮರುಪತ್ರ ಬರೆಯಿರಿ.

ವಂದನೆಗಳೊಡನೆ

ನಿಮ್ಮ ಪ್ರೀತಿಯ

ಇವರಿಗೆ,

ಇಂದ,

________________
________________
________________

ಇವರಿಗೆ,

________________
________________
________________

ಮಾನ್ಯರೆ,

ವಿಷಯ: –________________________________________

____________________________________________________________
____________________________________________________________
____________________________________________________________
____________________________________________________________
____________________________________________________________
__________________________________

ವಂದನೆಗಳೊಂದಿಗೆ
ತಮ್ಮ ವಿಶ್ವಾಸಿ/ನಂಬುಗೆಯ

ಸ್ಥಳ:
ದಿನಾಂಕ :

ನೀವು ಮೈಸೂರಿನ ಸರ್ಕಾರಿ ಪ್ರೌಢಶಾಲೆಯೊಂದರ ವಿದ್ಯಾರ್ಥಿ/ನಿ ಎಂದು ಭಾವಿಸಿ ಶಿವಮೊಗ್ಗದಲ್ಲಿರುವ ನಿಮ್ಮ ತಾಯಿಗೆ ಪರೀಕ್ಷಾ ಸಿದ್ಧತೆಯ ಕುರಿತು ಪತ್ರ ಬರೆಯಿರಿ.

ಕ್ಷೇಮ ಶ್ರೀ ಕನಕ

10ನೇ ತರಗತಿ
ಸರ್ಕಾರಿ ಪ್ರೌಢಶಾಲೆ
ಗಾಂಧಿನಗರ
ಮೈಸೂರು
ದಿನಾಂಕ : 15.1.15

ಮಾತೃಶ್ರೀಯವರಿಗೆ ನಿಮ್ಮ ಪ್ರೀತಿಯ ಮಗನ ನಮಸ್ಕಾರಗಳು.ಇಲ್ಲಿ ನಾನು ಕ್ಷೇಮವಾಗಿದ್ದೇನೆ. ಅಲ್ಲಿ ತಾವೆಲ್ಲರೂ ಕ್ಷೇಮವಾಗಿರುವಿರೆಂದು ನಂಬಿರುತ್ತೇನೆ.

ನಾನು ಈ ಬಾರಿ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದು ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗ ಬಯಸಿರುತ್ತೇನೆ. ಶಿಕ್ಷಕರು ಈಗಾಗಲೇ ಪ್ರಶ್ನೆಪತ್ರಿಕೆಯಲ್ಲಿ ಆಗಿರುವ ಬದಲಾವಣೆಯ ಕುರಿತು ತಿಳಿಸಿ ಮಾದರಿ ಪ್ರಶ್ನೆ ಪತ್ರಿಕೆಗಳನ್ನು ಅಭ್ಯಾಸ ಮಾಡಿಸುತ್ತಿದ್ದಾರೆ.ಪಠ್ಯಕ್ರಮ ಸಿ.ಸಿ.ಇ. ಮಾದರಿಯಾಗಿದ್ದು ಶಿಕ್ಷಕರು ನಮ್ಮನ್ನು ನಾನಾ ಚಟುವಟಿಕೆಗಳಲ್ಲಿ ತೊಡಗಿಸಿ ವಿಷಯದ ಜ್ಞಾನ ಹೆಚ್ಚಿಸಿದ್ದಾರೆ.ಇದರಿಂದ ನಾನು ಸಮಯ ಹಾಳು ಮಾಡದೆ ಚೆನ್ನಾಗಿ ಅಭ್ಯಾಸ ಮಾಡುತ್ತಿದ್ದೇನೆ. ಹೆಚ್ಚಿನ ಅಂಕ ಗಳಿಸುವ ಭರವಸೆಯೂ ಇದೆ.ನನ್ನ ಬಗ್ಗೆ ಏನೂ ಯೋಚಿಸುವುದು ಬೇಡ.ಎಲ್ಲರಿಗೂ ನಮಸ್ಕಾರ ತಿಳಿಸಿ.

ವಂದನೆಗಳೊಂದಿಗೆ

ಇಂತಿ ತಮ್ಮ ಪ್ರೀತಿಯ
ಕನಕ

ಮನೆ. ನಂ. 2343
ವಿಜಯನಗರ
ಶಿವಮೊಗ್ಗ ಜಿಲ್ಲೆ
ಶಿವಮೊಗ್ಗ

ನಿಮ್ಮ ವರ್ಗಾವಣೆ ಪತ್ರ ಮತ್ತು ಅಂಕಪಟ್ಟಿಗಳನ್ನು ಕೊಡುವಂತೆ ಕೋರಿ ನಿಮ್ಮ ಮುಖ್ಯ ಶಿಕ್ಷಕರಿಗೆ ಮನವಿ ಪತ್ರ ಬರೆಯಿರಿ.

ಇಂದ,

ಮಹೇಶ,
ಮಹದೇವಪುರ
ಮೈಸೂರು ಜಿಲ್ಲೆ

ಇವರಿಗೆ,

ಮಾನ್ಯ ಮುಖ್ಯ ಶಿಕ್ಷಕರು,
ಸರ್ಕಾರಿ ಪ್ರೌಢಶಾಲೆ,
ಮಹದೇವಪುರ
ಮೈಸೂರು ಜಿಲ್ಲೆ

ಮಾನ್ಯರೆ,

ವಿಷಯ : – ವರ್ಗಾವಣೆ ಪತ್ರ ಮತ್ತು ಅಂಕಪಟ್ಟಿಗಳನ್ನು ಕೊಡುವಂತೆ ಕೋರಿ ಮನವಿ

ನಾನು ನಿಮ್ಮ ಶಾಲೆಯಲ್ಲಿ 2013 – 14 ನೇ ಸಾಲಿನಲ್ಲಿ ದಾಖಲಾಗಿ ವ್ಯಾಸಂಗ ಮಾಡಿ 2014 –15 ನೇ ಸಾಲಿನಲ್ಲಿ 10ನೇ ತರಗತಿಯಲ್ಲಿ ತೇರ್ಗಡೆಯಾಗಿರುತ್ತೇನೆ. ನನ್ನ ಮುಂದಿನ ವಿದ್ಯಾಭ್ಯಾಸವನ್ನು ಮುಂದುವರಿಸಲು ನನಗೆ ವರ್ಗಾವಣೆ ಪತ್ರ ಮತ್ತು ಅಂಕಪಟ್ಟಿಗಳ ಆವಶ್ಯಕತೆ ಇರುತ್ತದೆ.ಆದ್ದರಿಂದ ದಯವಿಟ್ಟು ನನ್ನ ವರ್ಗಾವಣೆ ಪತ್ರ ಮತ್ತು ಅಂಕಪಟ್ಟಿಗಳನ್ನು ಕೊಡುವಂತೆ ಸವಿನಯದಿಂದ ಕೇಳಿಕೊಳ್ಳುತ್ತೇನೆ.

ಈ ನನ್ನ ಕೋರಿಕೆಯು ಬಹುಬೇಗ ಈಡೇರುವುದೆಂದು ನಂಬಿರುತ್ತೇನೆ.

ವಂದನೆಗಳೊಂದಿಗೆ

ತಮ್ಮ ನಂಬುಗೆಯ
ಮಹೇಶ

ದಿನಾಂಕ : 5–6–15
ಸ್ಥಳ : ಮಹದೇವಪುರ

ಶೈಕ್ಷಣಿಕ ಪ್ರವಾಸದಲ್ಲಿ ಪಾಲುಗೊಳ್ಳಲು ರೂ.800/– ಕಳುಹಿಸಲು ಕೋರಿ ನಿಮ್ಮ ತಂದೆಯವರಿಗೆ ಪತ್ರ ಬರೆಯಿರಿ.

ಕ್ಷೇಮ                     ಶ್ರೀ                     ಇಂದ

ಹಮೀದ್
ತಲಕಾಡು
ಉಡುಪಿ
ದಿನಾಂಕ: 2/1/15

ತೀರ್ಥರೂಪರಿಗೆ ನಿಮ್ಮ ಮಗ ಹಮೀದ್ ಮಾಡುವ ನಮಸ್ಕಾರಗಳು. ಇಲ್ಲಿ ನಾನು ಕ್ಷೇಮವಾಗಿದ್ದೇನೆ. ಅಲ್ಲಿ ನೀವುಗಳೂ ಸಹ ಕ್ಷೇಮದಿದ ಇರುವಿರೆಂದು ಭಾವಿಸುತ್ತೇನೆ.ನಮ್ಮ ಶಾಲೆಯಲ್ಲಿ ಶೈಕ್ಷಣಿಕ ಪ್ರವಾಸ ಹೊರಟಿದ್ದು ನನ್ನ ಸ್ನೇಹಿತರ ಜೊತೆಗೂಡಿ ಪ್ರವಾಸದಲ್ಲಿ ಪಾಲುಗೊಳ್ಳಬೇಕೆಂದು ಬಯಕೆಯಾಗಿದೆ.ಅಲ್ಲದೆ ಪ್ರವಾಸ ಸ್ಥಳಗಳಾದ ಮೈಸೂರು, ಶ್ರೀರಂಗಪಟ್ಟಣ, ಮೇಲುಕೋಟೆ, ಸೊಮನಾಥಪುರ ಇವು ನೋಡಲೇಬೇಕಾದ ಸ್ಥಳಗಳಾಗಿವೆ.ತಾವು ಒಪ್ಪುವುದಾದರೆ, 1000/- (ಸಾವಿರ) ರೂಪಾಯಿಗಳನ್ನು ನನ್ನ ಖಾತೆಗೆ ಜಮಾಮಾಡಿ. ಮನೆಯಲ್ಲಿ ಎಲ್ಲರಿಗೂ ನನ್ನ ನಮಸ್ಕಾರ ತಿಳಿಸಿ.ನನ್ನ ಪತ್ರ ತಲುಪಿದ ಮೇಲೆ ಆದಷ್ಟು ಬೇಗ ಮರುಪತ್ರವನ್ನು ಬರೆಯಿರಿ.

ಇಂತಿ ತಮ್ಮ ಪ್ರೀತಿಯ ಮಗ
ಹಮೀದ್

ಹೊರವಿಳಾಸ
ರಶೀದ್ ಸಾಹೇಬ್
ಬೆಲ್ತಂಗಡಿ
ದಕ್ಷಿಣ ಕನ್ನಡ ಜಿಲ್ಲೆ
ಮಂಗಳೂರು

ಅಧಿಕಾರಿಗಳಿಗೆ ಪತ್ರ/ವ್ಯವಹಾರ ಪತ್ರ (ಸರ್ಕಾರಿ ಪತ್ರ)

ಐದು ದಿನ ರಜೆ ಕೋರಿ ಮುಖ್ಯೋಪಾಧ್ಯಾಯರಿಗೊಂದು ಪತ್ರ:

ಇಂದ,

ಸಮೀರಾ
10ನೇ ತರಗತಿ
'ಎ' ವಿಭಾಗ
ಸರ್ಕಾರಿ ಪ್ರೌಢಶಾಲೆ
ಕೊಡಲಿಪೇಟೆ, ಅರಕಲಗೂಡು ತಾಲೂಕು

ಇವರಿಗೆ,

ಮುಖ್ಯೋಪಾಧ್ಯಾಯರು,
ಸರ್ಕಾರಿ ಪ್ರೌಢಶಾಲೆ
ಕೊಡಲಿಪೇಟೆ
ಅರಕಲಗೂಡು ತಾಲೂಕು

ಮಾನ್ಯರೇ,

ವಿಷಯ: ಐದು ದಿನ ರಜೆ ಕೋರಿ ಪತ್ರ

ಮೇಲ್ಕಂಡ ವಿದ್ಯಾರ್ಥಿನಿಯಾದ ನಾನು 10ನೇ ತರಗತಿ 'ಎ" ವಿಭಾಗದಲ್ಲಿ ವ್ಯಾಸಂಗ ಮಾಡುತ್ತಿದ್ದು ನಿತ್ಯವೂ ತರಗತಿಗೆ ಹಾಜರಾಗುತ್ತಿದ್ದೇನೆ. ಇತ್ತೀಚೆಗೆ ನನಗೆ ವಿಷಮಶೀತಜ್ವರ ಬಂದಿರುವುದರ ಕಾರಣ ಶಾಲೆಗೆ ಬರಲು ಸಾಧ್ಯವಾಗುತ್ತಿಲ್ಲ ಆದ ಕಾರಣ 7–1–2015 ರಿಂದ 12–1–2015 ರವರೆಗೆ ಐದು ದಿನಗಳ ರಜೆ ಕೊಡಬೇಕೆಂದು ವಿನಂತಿ

ವಂದನೆಗಳೊಂದಿಗೆ,

ಇಂತಿ ತಮ್ಮ ವಿಧೇಯ
ವಿದ್ಯಾರ್ಥಿನಿ
ಸಮೀರಾ

ಪೋಷಕರ ಸಹಿ

ನಿಮ್ಮ ಗ್ರಾಮದಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡಿಕೊಡುವಂತೆ ಕೋರಿ ಜಿಲ್ಲಾ ಪಂಚಾಯತಿ ಅಧ್ಯಕ್ಷರಿಗೆ ಒಂದು ಪತ್ರ ಬರೆಯಿರಿ.

ಇಂದ,

ಅಬಕ
ಹನುಮನಹಳ್ಳಿ
ಅರಕಲಗೂಡು ತಾಲೂಕು
ಹಾಸನ ಜಿಲ್ಲೆ

ಇವರಿಗೆ,

ಮಾನ್ಯ ಅಧ್ಯಕ್ಷರು,
ಜಿಲ್ಲಾ ಪಂಚಾಯತ್ ಕಛೇರಿ,
ಅರಕಲಗೂಡು – ಹಾಸನ ಜಿಲ್ಲೆ

ಮಾನ್ಯರೇ,

ವಿಷಯ : ಕುಡಿಯುವ ನೀರಿನ ಸೌಲಭ್ಯ ಒದಗಿಸುವ ಕುರಿತು

ನಮ್ಮ ಗ್ರಾಮದ ಎಲ್ಲ ನಿವಾಸಿಗರ ಪರವಾಗಿ ತಮ್ಮಲ್ಲಿ ಅರಿಕೆ ಮಾಡುವುದೆಂದರೆ, ಈ ಸಲ ಮಳೆಗಾಲದಲ್ಲಿ ಸರಿಯಾಗಿ ಮಳೆ ಆಗದೆ ಕುಡಿಯುವ ನೀರಿನ ಅಭಾವ ತಲೆದೋರಿದೆ.ಕೈಪಂಪಿನ ಜಲಮಟ್ಟವು ಕಡಿಮೆಯಾಗಿ ಜನಸಾಮಾನ್ಯರಿಗೆ ದನಕರುಗಳಿಗೆ ಎಲ್ಲರಿಗೂ ತೊಂದರೆಯಾಗುತ್ತಿದೆ.ಆದಕಾರಣ ಮಳೆಗಾಲ ಪ್ರಾರಂಭವಾಗುವವರೆಗೂ ನಮ್ಮ ಗ್ರಾಮಕ್ಕೆ ನೀರಿನ ವ್ಯವಸ್ಥೆ ಮಾಡಿಕೊಡಬೇಕೆಂದು ವಿನಂತಿಸುತ್ತೇನೆ.

ಧನ್ಯವಾದಗಳೊಂದಿಗೆ,
ಸ್ಥಳ : ಹನುಮನಹಳ್ಳಿ
ಅರಕಲಗೂಡು ತಾಲೂಕು
ದಿನಾಂಕ : 10/1/15

ತಮ್ಮ ವಿಶ್ವಾಸಿ,
ಅಬಕ

ಸಹಿ:
1
2.
3.
4.

ಮೈಸೂರಿನ ಭರತನಗರ ಬಡಾವಣೆಯ ನಿವಾಸಿ ಎಂದು ಭಾವಿಸಿ ದಾರಿದೀಪ ಸರಿಪಡಿಸುವಂತೆ ಕೋರಿ ಕೆ.ಪಿ.ಟಿ.ಸಿ.ಎಲ್ ಗೆ ಒಂದು ಪತ್ರ ಬರೆಯಿರಿ.

ಇಂದ,

ರಹೀಂ,
ಭರತನಗರ 1ನೇ ಹಂತ
ಮೈಸೂರು

ಇವರಿಗೆ,

ಮುಖ್ಯ ಅಭಿಯಂತರರು,
ಕೆ.ಪಿ.ಟಿ.ಸಿ.ಎಲ್
ಮೈಸೂರು.

ಮಾನ್ಯರೇ,

ವಿಷಯ: ದಾರಿದೀಪವನ್ನು ಸರಿಪಡಿಸುವಂತೆ ಕೋರಿ ಪತ್ರ

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ನಮ್ಮ ಬಡಾವಣೆಯಲ್ಲಿ ಕಳೆದ 2 ತಿಂಗಳಿನಿಂದ ದಾರಿದೀಪಗಳು ಅಲ್ಲಲ್ಲಿ ಕೆಟ್ಟಿದ್ದು, ಸಂಚರಿಸಲು ಬಹಳ ತೊಂದರೆಯಾಗಿದೆ.ಅಲ್ಲದೆ ಕಳ್ಳರ ಕಾಟ ಬೇರೆ.ಜೊತೆಗೆ ಹಾವು, ಚೇಳುಗಳು ಆಗಾಗ ಕಂಡು ಬರುವುದು ಇದೆ. ಆದಕಾರಣ ಈ ತೊಂದರೆಯನ್ನು ಗಂಭೀರವಾಗಿ ಪರಿಗಣಿಸಿ ಆದಷ್ಟು ಬೇಗ ದಾರಿದೀಪಗಳನ್ನು ಸರಿಪಡಿಸುವಂತೆ ಎಲ್ಲರ ಪರವಾಗಿ ಈ ಮೂಲಕ ಕೋರುತ್ತೇನೆ.

ವಂದನೆಗಳು,

ತಮ್ಮ ವಿಶ್ವಾಸಿ,
ಅಬಕ

ಸ್ಥಳ : ಭರತನಗರ ಬಡಾವಣೆ

ದಿನಾಂಕ :

ಸಹಿ:

1
2.
3.
4.

**ಕೊಟ್ಟಿರುವ ಗಾದೆಯನ್ನು ವಿಸ್ತರಿಸಿ ಬರೆಯಿರಿ.**

**ಗಾದೆ ವಿಸ್ತರಣೆ**

**ಚಿಂತೆಯೇ ಮುಪ್ಪು; ಸಂತೋಷವೇ ಯೌವನ**

ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತು.ವೇದ ಸುಳ್ಳಾದರೂ ಗಾದೆ ಸುಳ್ಳಾಗದು. ಹಾಗೆಯೇ ಗಾದೆಗಳು ಸಹ 'ಸರ್ವಕಾಲಿಕ ಸತ್ಯ'

ಇದು ಕನ್ನಡದ ಪ್ರಸಿದ್ಧವಾದ ಗಾದೆಗಳಲ್ಲಿ ಒಂದು.ಚಿತೆಗೂ ಚಿಂತೆಗೂ ನಡುವೆ ಬಿಂದು ಮಾತ್ರ ವ್ಯತ್ಯಾಸ. ಚಿತೆ ಸತ್ತವರನ್ನು ಸುಟ್ಟರೆ ಚಿಂತೆ ಬದುಕಿರುವವರನ್ನು ಸುಡುತ್ತದೆ. ಚಿಂತೆಯಿಂದ ಸಂತೋಷ ಮಾಯ, ಮಾನಸಿಕ ನೆಮ್ಮದಿ ಹಾಳಾಗಿ ದೇಹ ಕುಗ್ಗಿ ಬಹು ಬೇಗ ಮುಪ್ಪು ಆವರಿಸುತ್ತದೆ.ಆದರೆ ಸಂತೋಷ ದೇಹದ ಆರೋಗ್ಯ ಹೆಚ್ಚಿಸಿ ಸದಾ ಯೌವನ ತುಂಬಿ ತುಳುಕಿಸುತ್ತದೆ.ಆದ್ದರಿಂದ ಚಿಂತೆ ಮಾಡುತ್ತಾ ಮುದುಕರಾಗದೆ ಸಂತೋಷದಿಂದ ಇದ್ದು ಉತ್ಸಾಹದಿಂದ ಯುವಕರಂತೆ ಬಾಳಬೇಕು.

**ಶಕ್ತಿಗಿಂತ ಯುಕ್ತಿ ಮೇಲು**

ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತು.ವೇದ ಸುಳ್ಳಾದರೂ ಗಾದೆ ಸುಳ್ಳಾಗದು. ಹಾಗೆಯೇ ಗಾದೆಗಳು 'ಸರ್ವಕಾಲಿಕ ಸತ್ಯ'

'ಶಕ್ತಿಗಿಂತ ಬುದ್ಧಿಬಲವೇ ಮೇಲು' ಎಂಬುದು ಇದರ ಅರ್ಥ. ಶಕ್ತಿಯಿಂದ ಸಾಧಿಸಲಾರದ್ದನ್ನು ಯುಕ್ತಿಯಿಂದ ಸಾಧಿಸಲು ಸಾಧ್ಯ ಕೆಳದಿಯ ರಾಣಿ ಚೆನ್ನಮ್ಮ ಮೊಗಲ್ ಚಕ್ರವರ್ತಿ ಔರಂಗಜೇಬನನ್ನು ತನ್ನ ಯುಕ್ತಿಯಿಂದ ಸೋಲಿಸಿದ್ದು ಎಂಬುದು ನಮಗೆಲ್ಲ ತಿಳಿದ ವಿಷಯವೇ ಅಲ್ಲವೆ, ಹಾಗೆಯೆ ಚಿಕ್ಕ ಮೊಲವೊಂದು ತನ್ನ ಯುಕ್ತಿಯಿಂದ ಬಲಶಾಲಿಯಾದ ಸಿಂಹವನ್ನು ಸೋಲಿಸಲಿಲ್ಲವೆ. ಶಕ್ತಿಯೊಂದೆ ಇದ್ದರೆ ಸಾಲದು, ಶಕ್ತಿಯ ಜೊತೆ ಯುಕ್ತಿಯು ಇದ್ದರೆ ಬಲಶಾಲಿಗಳನ್ನು ಸುಲಭವಾಗಿ ಗೆಲ್ಲಬಹುದು.

**ದೇಶ ಸುತ್ತು ಕೋಶ ಓದು**

ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತು.ವೇದ ಸುಳ್ಳಾದರೂ ಗಾದೆ ಸುಳ್ಳಾಗದು. ಹಾಗೆಯೇ ಗಾದೆಗಳು 'ಸರ್ವಕಾಲಿಕ ಸತ್ಯ'

ಅರ್ಥ:ಮನುಷ್ಯ ನಾನಾ ರೀತಿಯಿಂದ ಜ್ಞಾನವನ್ನು ಸಂಪಾದಿಸುತ್ತಾನೆ. ಹಾಗೆಯೇ 'ದೇಶ ಸುತ್ತುವುದರಿಂದ ಕೋಶವನ್ನು ಓದುವುದರಿಂದ' ಜ್ಞಾನಾಭಿವೃದ್ಧಿಯಾಗುತ್ತದೆ.

ದೇಶ ವಿದೇಶಗಳಿಗೆ ಹೋಗುವುದರಿಂದ ಅಲ್ಲಿಯ ಆಚಾರ–ವಿಚಾರ, ಸಂಸ್ಕೃತಿ, ಭಾಷೆ, ಊಟ–ಉಪಚಾರ, ವೇಷ–ಭೂಷಣ, ವಾತಾವರಣ ಇತ್ಯಾದಿಗಳನ್ನು ತಿಳಿಯಬಹುದು. ಹಾಗೆಯೇ ವಿವಿಧ ಕೋಶಗಳನ್ನು ಓದಿ ಅವುಗಳಲ್ಲಿರುವ ಹಲವಾರು ಸಂಗತಿಗಳನ್ನು ತಿಳಿದುಕೊಳ್ಳಬಹುದು. ಒಳ್ಳೆಯ ಪುಸ್ತಕಗಳನ್ನು ಗ್ರಂಥಗಳನ್ನು ಓದುವುದರಿಂದ ಅಪಾರವಾದ ಜ್ಞಾನ ದೊರೆಯುತ್ತದೆ.ಇದರಿಂದಲೆ "ದೇಶ ಸುತ್ತಬೇಕು ಕೋಶ ಓದಬೇಕು".

**ಒಗ್ಗಟ್ಟಿನಲ್ಲಿ ಬಲವಿದೆ**

ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತು.ವೇದ ಸುಳ್ಳಾದರೂ ಗಾದೆ ಸುಳ್ಳಾಗದೆಂದು ನಂಬಿಕೆ ಇದೆ.

ಅರ್ಥ: 'ಒಗ್ಗಟ್ಟಿನಿಂದ ಇದ್ದಲ್ಲಿ ಏನಾದರೂ ಸಾಧಿಸಬಹುದು.'ಏನೇ ಆದರೂ ನಾವೆಲ್ಲ ಪರಸ್ಪರ ಒಗ್ಗಟ್ಟಿನಿಂದ ಇರಬೇಕು.ಅನಗತ್ಯವಾಗಿ ಜಗಳವಾಡಬಾರದು.ಜಗಳದಿಂದ ದ್ವೇಷ ಹುಟ್ಟುತ್ತದೆ.ದ್ವೇಷಗಳಿಂದ ಯಾವುದೇ ಕೆಲಸ ಸಾಧಿಸಲು ಸಾಧ್ಯವಿಲ್ಲ. ಒಗ್ಗಟ್ಟಿನಿಂದ ಇದ್ದರೆ ಪರಸ್ಪರ ಸ್ನೇಹ, ವಿಶ್ವಾಸವಿದ್ದು ಎಷ್ಟೇ ಕಷ್ಟಕರವಾದ ಕೆಲಸವನ್ನಾದರೂ ಸಾಧಿಸಬಹುದು.ಒಗ್ಗಟ್ಟಿನಲ್ಲಿ ಅಂಥ ಶಕ್ತಿ ಇರುತ್ತದೆ.

ಉದಾ: ಒಂದು ಕೋಲನ್ನು ಸುಲಭವಾಗಿ ಮುರಿಯಬಹುದು ಆದರೆ ಹತ್ತಾರು ಕೋಲುಗಳನ್ನು ಒಟ್ಟು ಸೇರಿಸಿದರೆ ಮುರಿಯಲು ಅಸಾಧ್ಯ. ಆದ್ದರಿಂದ 'ಒಗ್ಗಟ್ಟೇ ಬಲ'.

**ಕೈ ಕೆಸರಾದರೆ ಬಾಯಿ ಮೊಸರು**

ವೇದ ಸುಳ್ಳಾದರೂ ಗಾದೆ ಸುಳ್ಳಾಗದು.ಗಾದೆ ವೇದಗಳ ತಲೆದಿಂಬು. ಹಿರಿಯರ ಅನುಭವದ ನುಡಿಮುತ್ತುಗಳು.

ಕೈ ಕೆಸರಾದರೆ ಬಾಯಿ ಮೊಸರು ಅಂದರೆ ಕಷ್ಟಪಟ್ಟು ದುಡಿದರೆ ಸುಖ ಉಂಟು ಎಂದರ್ಥ.ಸೋಮಾರಿಯಾಗಿ ಸುಮ್ಮನೆ ಕುಳಿತಿರಬಾರದು.ಯಾವುದಾದರೂ ಒಂದು ಕೆಲಸ ಮಾಡುವುದರಿಂದ ಹೊಟ್ಟೆ ತುಂಬುತ್ತದೆ.ಕೈಕೆಸರಾಗುತ್ತದಲ್ಲ ಈ ಕೆಲಸ ಮಾಡುವುದು ಹೇಗೆ ಎಂದು ಯೋಚಿಸುತ್ತಾ ಕುಳಿತರೆ ಯಾವ ಕೆಲಸವನ್ನು ಮಾಡಲು ಸಾಧ್ಯವಾಗುವುದಿಲ್ಲ. ಕೆಲಸ ಮಾಡದಿದ್ದರೆ ಹಣ ಸಂಪಾದನೆಯಾಗುವುದಿಲ್ಲ ಹೊಟ್ಟೆ ತುಂಬುವುದಿಲ್ಲ.ಜೀವನ ಆನಂದದಾಯಕವಾಗಿರಬೇಕಾದರೆ ಕೈ ತುಂಬಾ ಸಂಪಾದಿಸಲೇ ಬೇಕು.ಆಗ ನಮಗೆ ಊಟ, ಆಹಾರ ಎಲ್ಲವೂ ಸಿಗುತ್ತದೆ.ಅದಕ್ಕೆ ಹಿರಿಯರು ಹೇಳಿದ್ದು 'ಕೈ ಕೆಸರಾದರೆ ಬಾಯಿ ಮೊಸರು' ಎಂದು.

**ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ**

ಗಾದೆ ವೇದಗಳಿಗೆ ಸಮಾನ ವೇದ ಸುಳ್ಳಾದರೂ ಗಾದೆ ಸುಳ್ಳಾಗುವುದಿಲ್ಲ.ಕಿರಿದರಲ್ಲಿ ಹಿರಿದಾದ ಅರ್ಥವನ್ನು ಹೊಂದಿರುತ್ತದೆ. 'ಕುಂಬಾರ ಕಷ್ಟಪಟ್ಟು ಮಣ್ಣಿನ ಮಡಕೆ' ತಯಾರಿಸುತ್ತಾನೆ. ಅವನಿಗೆ ಅವನ್ನು ತಯಾರು ಮಾಡಲು ಸಾಕಷ್ಟು ಸಮಯ ಶ್ರಮ, ಬುದ್ಧಿ, ಕೌಶಲ ಎಲ್ಲವೂ ಬೇಕಾಗುತ್ತದೆ.ಅಷ್ಟು ಶ್ರಮಪಟ್ಟು ಮಾಡಿದ ಮಡಕೆಗಳನ್ನು ಒಡೆಯಲು ಒಂದು ದೊಣ್ಣೆ ಸಾಕು.ಅದು ಒಡೆದು ಹೋಗುತ್ತದೆ.ಕುಂಬಾರನ ಶ್ರಮ ಎಲ್ಲವೂ ವ್ಯರ್ಥವಾಗುತ್ತದೆ.ಅವನಿಗೆ ನಷ್ಟವಾಗುತ್ತದೆ.ಯಾವುದೇ ಕೆಲಸವನ್ನು ಮಾಡಲು ಸಾಕಷ್ಟು ಸಮಯ, ಶ್ರಮ ಬೇಕಾಗುತ್ತದೆ.ಆದರೆ ಅದನ್ನು ಹಾಳುಮಾಡಲು ಕೆಲವು ನಿಮಿಷಗಳು ಸಾಕು.ಹಾಗೆಯೆ ಒಳ್ಳೆಯ ಹೆಸರು ಗಳಿಸಲು ಸಾಧನೆ ಮಾಡಲು ತುಂಬಾ ಶ್ರಮ ಪಡಬೇಕು.ಆದರೆ ಅದನ್ನು ಹಾಳು ಮಾಡಲು ಕೆಲವೇ ನಿಮಿಷಗಳು ಸಾಕು ಇದು ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ ಗಾದೆಯ ಅರ್ಥ.

**ಬೆಳೆಯುವ ಪೈರು ಮೊಳಕೆಯಲ್ಲಿ**

ಗಾದೆಗಳು ವೇದಗಳಿಗೆ ಸಮಾನ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು.ಗಾದೆ ಹಿರಿಯರ ಅನುಭವದ ನುಡಿಮುತ್ತುಗಳು. 'ಬೆಳೆಯುವ ಪೈರು' ಹೇಗಿರುತ್ತದೆ ಎಂಬುದು 'ಮೊಳಕೆಯಲ್ಲೆ' ಗೊತ್ತಾಗುತ್ತದೆ ಮೊಳಕೆ ದೃಢವಾಗಿದ್ದು ಪುಟ್ಟ ಗಿಡವು ದಷ್ಟ ಪುಷ್ಟವೂ, ಆರೋಗ್ಯವೂ ಆಗಿರುತ್ತದೆ.ರೋಗಕ್ಕೆ ತುತ್ತಾದ ಪೈರು ಬೆಳೆದು ಉತ್ತಮ ಫಸಲನ್ನು ಕೊಡುವುದಿಲ್ಲ ಹಾಗೆಯೇ ಒಬ್ಬ ವ್ಯಕ್ತಿ ಒಳ್ಳೆಯನಾಗುವನೋ ಕೆಟ್ಟವನಾಗುವನೋ ಎಂಬುದು ಬಾಲ್ಯದಲ್ಲಿಯೇ ತಿಳಿಯುತ್ತದೆ. ಬಾಲ್ಯದಲ್ಲಿ ದುರ್ನಡತೆ, ಕೆಟ್ಟಬುದ್ಧಿ ತೋರಿದರೆ ದೊಡ್ಡವನಾದ ಮೇಲೂ ಅದೇ ಸ್ವಭಾವ ಹೊಂದಿರುತ್ತಾನೆ.ಬಾಲ್ಯದಲ್ಲಿ ಒಳ್ಳೆಯ ಗುಣ, ಸ್ವಭಾವ ಹೊಂದಿರುವವನು ದೊಡ್ಡವನಾದ ಮೇಲೂ ಉತ್ತಮ ಸ್ವಭಾವ ಹೊಂದಿರುತ್ತಾನೆ.

**ಹೆತ್ತ ತಾಯಿ ಹೊತ್ತ ನಾಡು ಸ್ವರ್ಗಕ್ಕಿಂತ ಮಿಗಿಲು**

ಗಾದೆಗಳು ವೇದಗಳಿಗೆ ಸಮಾನ.ವೇದ ಸುಳ್ಳಾದರೂ ಗಾದೆ ಸುಳ್ಳಾಗುವುದಿಲ್ಲ. ಜನಪದರ ಜೀವನದ ಅನುಭವದ ನುಡಿಮುತ್ತುಗಳು.

'ಹೆತ್ತ ತಾಯಿ ಹೊತ್ತ ನಾಡು' ಎಂಬುದು ಒಂದು ಜನಪ್ರಿಯ ಗಾದೆ.ತಾಯಿ ನಮ್ಮನ್ನು ಒಂಬತ್ತು ತಿಂಗಳು ಗರ್ಭದಲ್ಲಿಟ್ಟುಕೊಂಡು ಪೋಷಿಸಿದರೆ, ಹೊತ್ತನಾಡು ನಮ್ಮನ್ನು ಜೀವನ ಪೂರ್ತಿ ತನ್ನ ಮಡಿಲಲ್ಲಿಟ್ಟುಕೊಂಡು ಪೋಷಿಸುತ್ತದೆ. ಹೆತ್ತ ತಾಯಿಯ ಮಡಿಲಲ್ಲಿ ಸಿಗುವ ಸುಖ ಮತ್ತೆಲ್ಲೂ ಸಿಗುವುದಿಲ್ಲ. ಹಾಗೆ ಜನ್ಮಭೂಮಿಯ ಸಂಬಂಧವೂ ಸಹ ಬಿಡಿಸಲಾಗದ ಬಂಧ. ಆದ್ದರಿಂದ ಹೆತ್ತ ತಾಯಿ ಹೊತ್ತ ನಾಡು ಸ್ವರ್ಗಕ್ಕಿಂತ ಮಿಗಿಲು.ಜನ್ಮ ನೀಡಿದ ನಾಡು ನಮಗೆ ಇಂದ್ರನ ಸ್ವರ್ಗಕ್ಕಿಂತಲೂ ಹೆಚ್ಚು. ನಮಗೆ ಪ್ರಪಂಚದ ಯಾವುದಾದರೂ ಮೂಲೆಯಲ್ಲಿ ಒಳ್ಳೆಯ ಜೀವನ ಸೌಲಭ್ಯ ದೊರೆತರು ಮನಸ್ಸು ಜನ್ಮ ಪಡೆದ ನಾಡಿನತ್ತಲೇ ವಾಲುವುದು. ಇದರಿಂದಲೇ "ಜನನೀ ಜನ್ಮ ಭೂಮಿಶ್ಚ ಸ್ವರ್ಗಾದಪಿ ಗರೀಯಸಿ" ಎಂಬ ಸಂಸ್ಕೃತ ಉಕ್ತಿ ಇಲ್ಲಿ ಸ್ಮರಿಸಬಹುದು. ಅದರ ಮಹತ್ವವನ್ನು ಅರಿಯಬಹುದು.

**ಕರ್ನಾಟಕ ಸರ್ಕಾರ**

**ಆಯುಕ್ತರ ಕಚೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ,**

**ನೃಪತುಂಗ ರಸ್ತೆ, ಬೆಂಗಳೂರು – 560 001**

**ಮತ್ತು**

**ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ,**

**ನೃಪತುಂಗ ರಸ್ತೆ, ಬೆಂಗಳೂರು.**

***ಸಹಯೋಗ***

**ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ,**

**ಮಲ್ಲೇಶ್ವರಂ, ಬೆಂಗಳೂರು.**

# ಪ್ರತಿಭೆ

**ಹತ್ತನೆಯ ತರಗತಿ ಫಲಿತಾಂಶ ಉತ್ತಮೀಕರಣಕ್ಕಾಗಿ**

**ಪ್ರಶ್ನೋತ್ತರ ಮಾಲಿಕೆ**

## ತೃತೀಯ ಭಾಷೆ ಕನ್ನಡ

**ಆಯೋಜಕರು**

**ಶ್ರೀ ಮೊಹಮ್ಮದ್ ಮೊಹಸಿನ್,**

**ಆಯುಕ್ತರು,**

**ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು – 560 001.**

**ಪರಿಕಲ್ಪನೆ**

**ಶ್ರೀಮತಿ ಜ್ಹೋಹರಾ ಜಬೀನ್ ಎಂ.**

**ನಿರ್ದೇಶಕರು,**

**ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ,**

**ಆಯುಕ್ತರ ಕಚೇರಿ, ನೃಪತುಂಗ ರಸ್ತೆ, ಬೆಂಗಳೂರು – 560 001.**

## ಸಂಯೋಜಕರು

**ಶ್ರೀಮತಿ ಮಂಜುಳ ಆರ್.**
ಹಿರಿಯ ಸಹಾಯಕ ನಿರ್ದೇಶಕರು,
ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ,

**ಶ್ರೀ ಮರಿಗೌಡ ಬಿ.ಎನ್.**
ಹಿರಿಯ ಸಹಾಯಕ ನಿರ್ದೇಶಕರು,
ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ

## ಸಲಹೆ ಮತ್ತು ಮಾರ್ಗದರ್ಶನ

**ಶ್ರೀಮತಿ ನಾಗರತ್ನ ಎಚ್.**
ಉಪನ್ಯಾಸಕರು
ಸರ್ಕಾರಿ ಶಿಕ್ಷಕ ಶಿಕ್ಷಣ ವಿದ್ಯಾಲಯ,
ಮಂಗಳೂರು.

## ಸಂಪನ್ಮೂಲ ಶಿಕ್ಷಕರು

ಶ್ರೀಮತಿ ಉಮ್ಮಿ ಸಲ್ಮ.
ಕನ್ನಡ ಭಾಷಾ ಶಿಕ್ಷಕರು
ಫಾರೂಖಿಯಾ ಬಾಲಕಿಯರ ಪ್ರೌಢಶಾಲೆ.
ಅಶೋಕ ರಸ್ತೆ, ಲಷ್ಕರ್ ಮೊಹಲ್ಲಾ,
ಮೈಸೂರು.

ಶ್ರೀಮತಿ ಜಯಂತಿ ಕೆ.ಟಿ.
ಕನ್ನಡ ಭಾಷಾ ಶಿಕ್ಷಕರು
ಸರ್ಕಾರಿ ಪದವಿ ಪೂರ್ವ ಕಾಲೇಜು.
ಪೀಪಲ್ಸ್ ಪಾರ್ಕ್, ಮೈಸೂರು.

# ಆಶಯ

**ಆತ್ಮೀಯ ಶಿಕ್ಷಕ ಮಿತ್ರರೇ,**

ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ, ಬೆಂಗಳೂರು, ಇವರು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಬೆಂಗಳೂರು ಇವರ ಸಹಯೋಗದೊಂದಿಗೆ 2014-15 ನೇ ಸಾಲಿನಲ್ಲಿ ಜಾರಿಗೊಂಡ ಹತ್ತನೆಯ ತರಗತಿಯ ನೂತನ ಪಠ್ಯಪುಸ್ತಕವನ್ನು ಆಧರಿಸಿ 2015ರ ಏಪ್ರಿಲ್ ಮಾಹೆಯಲ್ಲಿ ನಡೆಯುವ ನೂತನ ಪರೀಕ್ಷಾ ಪದ್ಧತಿಗೆ ಅನುಗುಣವಾಗಿ ಕಲಿಕಾ ಗುಣಮಟ್ಟ ಮತ್ತು ಸಾರ್ವತ್ರಿಕ ಪರೀಕ್ಷಾ ಫಲಿತಾಂಶ ಉತ್ತಮಪಡಿಸುವ ದೃಷ್ಟಿಯಿಂದ ವಿದ್ಯಾರ್ಥಿಗಳ ಕಲಿಕಾವೇಗವನ್ನು ಗಮನದಲ್ಲಿಟ್ಟುಕೊಂಡು ಎಲ್ಲಾ ಭಾಷೆಗಳು ಮತ್ತು ಕೋರ್ ವಿಷಯಗಳಲ್ಲಿ ಕಲಿಕೆಗೆ ಸಹಾಯಕವಾಗುವಂತೆ ಪ್ರಶ್ನೋತ್ತರ ಮಾಲಿಕೆಗಳನ್ನು ರಚಿಸಿದ್ದಾರೆ. ಇದನ್ನು ರಾಜ್ಯದ ವಿವಿಧ ಜಿಲ್ಲೆಗಳ ಪ್ರೌಢಶಾಲೆಗಳ ಕರ್ತವ್ಯನಿರತ ವಿಷಯವಾರು ಆಯ್ದ ಸಂಪನ್ಮೂಲ ಶಿಕ್ಷಕರು ಸಿದ್ಧಪಡಿಸಿದ್ದಾರೆ.ರಾಜ್ಯದ ಎಲ್ಲಾ ಶಾಲೆಗಳ ಮುಖ್ಯಶಿಕ್ಷಕರು ಮತ್ತು ವಿಷಯವಾರು ಶಿಕ್ಷಕರು ಇದರ ಸಂಪೂರ್ಣ ಪ್ರಯೋಜನವನ್ನು ಪಡೆದುಕೊಳ್ಳುವ ಮೂಲಕ ವಿದ್ಯಾರ್ಥಿಗಳ ಪುರೋಭಿವೃದ್ಧಿಗೆ ಶ್ರಮಿಸುವುದು. ಈ ಕಿರು ಹೊತ್ತಗೆಗಳನ್ನು ಹೊರತರಲು ಶ್ರಮಿಸಿದ ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯದ ನಿರ್ದೇಶಕರು ಮತ್ತು ಅವರ ಕಾರ್ಯಾಲಯದ ಸಿಬ್ಬಂದಿ ವರ್ಗದವರಿಗೆ ಈ ಕಾರ್ಯದ ಸಫಲತೆಗಾಗಿ ಶ್ಲಾಘನೆಗಳು ಸಲ್ಲುತ್ತವೆ.

**ಶ್ರೀ ಮೊಹಮ್ಮದ್ ಮೊಹಸಿನ್**
**ಆಯುಕ್ತರು,**
**ಸಾರ್ವಜನಿಕ ಶಿಕ್ಷಣ ಇಲಾಖೆ**

**ಆಯುಕ್ತರ ಕಚೇರಿ, ನೃಪತುಂಗ ರಸ್ತೆ, ಬೆಂಗಳೂರು – 560 001.**

.

# ಮುನ್ನುಡಿ

**ಆತ್ಮೀಯ ಶಿಕ್ಷಕ ಮಿತ್ರರೇ,**

ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯವು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಬೆಂಗಳೂರು ಇವರ ಸಹಯೋಗದೊಂದಿಗೆ ಹತ್ತನೆಯ ತರಗತಿಯ ಕಲಿಕೆಯನ್ನು ಗುಣಾತ್ಮಕವಾಗಿ ಉತ್ತಮಪಡಿಸುವ ಸಲುವಾಗಿ ಹಾಗೂ ಎಸ್.ಎಸ್.ಎಲ್.ಸಿ.ಪರೀಕ್ಷೆಯ ಫಲಿತಾಂಶವನ್ನು ಉನ್ನತೀಕರಿಸುವ ದೃಷ್ಟಿಯಿಂದ ಎಲ್ಲಾ ಭಾಷೆಗಳು ಮತ್ತು ಕೋರ್ ವಿಷಯಗಳಲ್ಲಿ ವಿದ್ಯಾರ್ಥಿಗಳ ಕಲಿಕಾ ವೇಗವನ್ನು ಅನುಸರಿಸಿ, ಕಲಿಕೆಗೆ ಸಹಾಯಕವಾಗುವಂತೆ ಪ್ರಶ್ನೋತ್ತರ ಮಾಲಿಕೆಗಳನ್ನು ರಚಿಸಿದೆ.ಇದನ್ನು ರಾಜ್ಯದ ವಿವಿಧ ಜಿಲ್ಲೆಗಳ ಪ್ರೌಢಶಾಲೆಗಳ ಕರ್ತವ್ಯನಿರತ ವಿಷಯವಾರು ಆಯ್ದ ಸಂಪನ್ಮೂಲ ಶಿಕ್ಷಕರಿಂದ ಸಿದ್ಧಪಡಿಸಲಾಗಿದೆ.ಈ ಕಲಿಕಾ ಸಹಾಯಕಗಳನ್ನು ಶಿಕ್ಷಕರು ಪಠ್ಯಪುಸ್ತಕಗಳಿಗೆ ಪೂರಕವಾಗಿ ಬಳಸಿಕೊಂಡು ವಿದ್ಯಾರ್ಥಿಗಳ ಯಶಸ್ಸಿಗೆ ಕಾರ್ಯಪ್ರವೃತ್ತರಾಗಬೇಕೆಂಬುದು ನಮ್ಮ ಆಶಯವಾಗಿದೆ.ರಾಜ್ಯದ ಎಲ್ಲಾ ಶಾಲೆಗಳ ಮುಖ್ಯಶಿಕ್ಷಕರು ಮತ್ತು ವಿಷಯವಾರು ಶಿಕ್ಷಕರು ಇದರ ಸಂಪೂರ್ಣ ಪ್ರಯೋಜನವನ್ನು ಪಡೆದುಕೊಳ್ಳುವ ಮೂಲಕ ವಿದ್ಯಾರ್ಥಿಗಳ ಉತ್ತಮ ಫಲಿತಾಂಶಕ್ಕಾಗಿ ಶ್ರಮಿಸುವುದು. ಈ ಕಾರ್ಯದಲ್ಲಿ ಪಾಲ್ಗೊಂಡು ಕಿರು ಹೊತ್ತಗೆಗಳನ್ನು ಹೊರತರಲು ಶ್ರಮಿಸಿದ ಎಲ್ಲಾ ಅಧಿಕಾರಿವರ್ಗದವರಿಗೂ, ಸರ್ಕಾರಿ ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯಗಳ ಪ್ರವಾಚಕರಿಗೂ, ಉಪನ್ಯಾಸಕ ವರ್ಗದವರಿಗೂ, ಸಂಪನ್ಮೂಲ ಶಿಕ್ಷಕರು ಮತ್ತು ಸಿಬ್ಬಂದಿ ವರ್ಗದವರಿಗೂ ಹೃತ್ಪೂರ್ವಕ ಧನ್ಯವಾದಗಳು.

**ಶ್ರೀಮತಿ ಜ಼ೋಹರಾ ಜಬೀನ್ ಎಂ.**
**ನಿರ್ದೇಶಕರು,**
**ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ,**
**ಆಯುಕ್ತರ ಕಚೇರಿ, ನೃಪತುಂಗ ರಸ್ತೆ, ಬೆಂಗಳೂರು – 560 001.**

.

# ಸೂಚನೆಗಳು

- ಕಾರ್ಯಕ್ರಮವನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ತಮ್ಮೆಲ್ಲರ ಸಹಕಾರ ಅತ್ಯಗತ್ಯ. ಅದಕ್ಕಾಗಿ ನೀಡಿರುವ **'ಪ್ರೇರಣೆ', 'ಪ್ರಗತಿ', ಹಾಗೂ 'ಪ್ರತಿಭೆ'** ಎಂಬ ಹೊತ್ತಗೆಗಳನ್ನು ಶಿಕ್ಷಕರು ಓದಿ ಮನನ ಮಾಡಿಕೊಳ್ಳುವುದು.

- ವಿದ್ಯಾರ್ಥಿಗಳನ್ನು ಅವರ ಕಲಿಕಾ ವೇಗದ ಸಾಮರ್ಥ್ಯಕ್ಕೆ ಅನುಗುಣವಾಗಿ
  (1) ನಿಧಾನ ಗತಿಯಲ್ಲಿ ಕಲಿಯುವವರು,
  (2) ಸಾಧಾರಣ ವೇಗದಲ್ಲಿ ಕಲಿಯುವವರು ಮತ್ತು
  (3) ಶೀಘ್ರಗತಿಯಲ್ಲಿ ಸವಾಲಿನೊಂದಿಗೆ ಕಲಿಯುವವರು
  ಎಂದು ಮೂರು ಗುಂಪುಗಳಾಗಿ ವಿಂಗಡಿಸಿಕೊಳ್ಳುವುದು.

- ನಿಧಾನ ಗತಿಯಲ್ಲಿ ಕಲಿಯುವವರಿಗೆ ನಿಗದಿತ ಸಮಯದಲ್ಲಿ ಪರೀಕ್ಷೆಯನ್ನು ಎದುರಿಸಲು ಪಠ್ಯಾಂಶದಲ್ಲಿ ಅತಿಮುಖ್ಯವೆನಿಸಿದ ಕೆಲವೇ ಅಂಶಗಳನ್ನು **'ಪ್ರೇರಣೆ'** ಕಲಿಕಾ ಸಹಾಯಕದಲ್ಲಿ ಸಂಗ್ರಹಿಸಿದ್ದು, ಅವುಗಳನ್ನು ಮೊದಲು ಕಲಿಯುಂತೆ ಮಾಡುವುದು.

- ಸಾಧಾರಣ ವೇಗದಲ್ಲಿ ಕಲಿಯುವವರಿಗೆ ಮೊದಲು **'ಪ್ರೇರಣೆ'** ಕಲಿಕಾ ಸಹಾಯಕದ ಪಠ್ಯಾಂಶಗಳನ್ನು ಕಲಿಸಿ, ನಂತರದಲ್ಲಿ **'ಪ್ರಗತಿ'** ಹಾಗೂ ಕೊನೆಯಲ್ಲಿ **'ಪ್ರತಿಭೆ'** ಕಲಿಕಾ ಸಹಾಯಕದ ಪಠ್ಯಾಂಶಗಳ ಹೆಚ್ಚಿನ ಕಲಿಕೆಗೆ ಅವಕಾಶ ಮಾಡಿಕೊಡುವುದು.

- ಶೀಘ್ರಗತಿಯಲ್ಲಿ ಸವಾಲಿನೊಂದಿಗೆ ಕಲಿಯುವವರಿಗೆ ಮೊದಲು **'ಪ್ರೇರಣೆ'** ಹಾಗೂ **'ಪ್ರಗತಿ'** ಕಲಿಕಾ ಸಹಾಯಕದ ಪಠ್ಯಾಂಶಗಳನ್ನು ಕಲಿಸಿ, ನಂತರದಲ್ಲಿ **'ಪ್ರತಿಭೆ'** ಕಲಿಕಾ ಸಹಾಯಕದ ಪಠ್ಯಾಂಶಗಳ ಹೆಚ್ಚು ಹೆಚ್ಚಿನ ಕಲಿಕೆಗೆ ಅವಕಾಶ ಮಾಡಿಕೊಡುವುದು.

- ಈ ಕಲಿಕಾ ಸಹಾಯಕಗಳ ಪಠ್ಯಾಂಶಗಳನ್ನು ಶಾಲಾವಧಿಯ ಪೂರ್ವದ ವಿಶೇಷ ತರಗತಿ ಮತ್ತು ಶಾಲಾವಧಿಯ ನಂತರದ ವಿಶೇಷ ತರಗತಿಗಳಲ್ಲಿ ಸತತ ಅಭ್ಯಾಸ ಮಾಡಿಸುವುದು.

- ನಿಗದಿತ ವೇಳಾಪಟ್ಟಿಯಂತೆ ತರಗತಿಯ ಅವಧಿಗಳಲ್ಲಿ ವಾರ್ಷಿಕ ಪಾಠಯೋಜನೆಯಂತೆ ಕಲಿಕಾ ಮತ್ತು ಬೋಧನಾ ಚಟುವಟಿಕೆಗಳನ್ನು ನಡೆಸುವುದು.

- ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕ ಓದುವ ಅಭ್ಯಾಸವನ್ನು ಕಡ್ಡಾಯವಾಗಿ ರೂಢಿಸುವುದು.

- ನಿರಂತರ ಅಭ್ಯಾಸ ಮತ್ತು ಪುನರವಲೋಕನಕ್ಕೆ ಹೆಚ್ಚು ಒತ್ತು ನೀಡುವುದು.

- **'ಪ್ರೇರಣೆ', 'ಪ್ರಗತಿ', ಹಾಗೂ 'ಪ್ರತಿಭೆ'** ಇವುಗಳು ಕೇವಲ ಕಲಿಕಾ ಸಹಾಯಕಗಳೇ ಹೊರತು ಪರೀಕ್ಷಾ ತಯಾರಿಕೆಗೆ ಅಂತಿಮವಲ್ಲ ಎಂಬುದು ಗಮನಿಸಬೇಕಾದ ಅಂಶ.

## ಈ ಸಾಲುಗಳನ್ನು ಸಂದರ್ಭ ಸಹಿತ ವಿವರಿಸಿ.

**ಗದ್ಯ – 1.**

**ಲಾಕಪ್ಪಿನಲ್ಲಿ ಒಂದು ರಾತ್ರಿ** **ಲೇ.ಗೊ.ರಾ. ಅಯ್ಯಂಗಾರ್**

1. **"ಈಗ ನೀವು ನನ್ನ ವಶವಾದಿರಿ, ನಾನು ನಿಮ್ಮನ್ನು ಕೈಬಿಡುವಂತಿಲ್ಲ"**

ಪ್ರಸ್ತುತ ವಾಕ್ಯವನ್ನು **'ಗೊರೂರು ರಾಮಸ್ವಾಮಿ ಅಯ್ಯಂಗಾರ್'** ಅವರು ಬರೆದಿರುವ **'ಅಮೆರಿಕಾದಲ್ಲಿ ಗೊರೂರು'** ಪ್ರವಾಸ ಸಾಹಿತ್ಯ ಕೃತಿಯಿಂದ ಆಯ್ದ **'ಲಾಕಪ್ಪಿನಲ್ಲಿ ಒಂದು ರಾತ್ರಿ'** ಪಾಠದಿಂದ ಆರಿಸಲಾಗಿದೆ.
ಲೇಖಕರು ಮಿತ್ರನನ್ನು ನೋಡಲು ಹೋದರು ಅವರು ಅಲ್ಲಿರಲಿಲ್ಲ ಅವರ ಪರಿಚಿತರೊಬ್ಬರಿಗೆ ತಮ್ಮನ್ನು ಕರೆದುಕೊಂಡು ಹೋಗಲು ಒಂದು ಸ್ಥಳ ಸೂಚಿಸಿದ್ದರು.ಆದರೆ ದಾರಿತಪ್ಪಿ ಆ ಸ್ಥಳ ಮರೆತರು ಅವರ ವಿಳಾಸವು ಇರಲಿಲ್ಲ ಟ್ರಾಫಿಕ್ ಪೋಲಿಸಿನವನಿಗೆ ತಮ್ಮ ಸಮಸ್ಯೆ ಹೇಳಿಕೊಂಡರು.ಆ ಸಂದರ್ಭದಲ್ಲಿ ಈ ಮೇಲಿನಂತೆ ಪೋಲಿಸಿನವನು ಹೇಳಿದ.

2. **"ನನ್ನ ಖೈದಿಯ ರಕ್ಷಣೆಯನ್ನು ನಾನು ಸರಿಯಾಗಿ ಮಾಡಬೇಕಷ್ಟೆ"**

ಪ್ರಸ್ತುತ ವಾಕ್ಯವನ್ನು **'ಗೊರೂರು ರಾಮಸ್ವಾಮಿ ಅಯ್ಯಂಗಾರ್'** ಅವರು ಬರೆದಿರುವ **'ಅಮೆರಿಕಾದಲ್ಲಿ ಗೊರೂರು'** ಪ್ರವಾಸ ಸಾಹಿತ್ಯ ಕೃತಿಯಿಂದ ಆಯ್ದ **'ಲಾಕಪ್ಪಿನಲ್ಲಿ ಒಂದು ರಾತ್ರಿ'** ಪಾಠದಿಂದ ಆರಿಸಲಾಗಿದೆ.
ಟ್ರಾಫಿಕ್ ಪೋಲಿಸ್‌ನವನು ಲೇಖಕರಿಗೆ ತಿನ್ನಲು ಹಣ್ಣು ಬಿಸ್ಕತ್ ಹಾಲು ಕೊಟ್ಟು ಉಪಚರಿಸಿದನು ನಂತರ ಅವರಿಗೆ ನಮ್ಮ ಮನೆಯ ಹಾಸಿಗೆ ಅನೇಕ ದಿನಗಳಿಂದ ಉಪಯೋಗಿಸದೇ ಇರುವುದರಿಂದ ಧೂಳು ತುಂಬಿದೆ.ನನ್ನ ವಶದಲ್ಲಿ ಒಂದು ಲಾಕಪ್ ಇದೆ.ಗಾಳಿ ಬೆಳಕು ಸ್ವಚ್ಛವಾದ ಹಾಸಿಗೆ ಇದ್ದು ಮಲಗಲು ಯೋಗ್ಯವಾಗಿದೆ ನಿಮಗೆ ಸೊಗಸಾದ ನಿದ್ರೆ ಬರುತ್ತದೆ.ಅಲ್ಲಿಯೇ ಮಲಗಿಬಿಡಿ ಎಂದು ಹೇಳಿ ಆ ಸಂದರ್ಭದಲ್ಲಿ ಮೇಲಿನಂತೆ ತನ್ನ ಅನಿಸಿಕೆಯನ್ನು ವ್ಯಕ್ತಪಡಿಸಿದನು.

3. **"ಪೋಲಿಸಿನವರ ಸಹವಾಸವಾದ ಮೇಲೆ ಲಾಕಪ್ ಆಗಲೆ ಬೇಕಷ್ಟೇ"**

ಪ್ರಸ್ತುತ ವಾಕ್ಯವನ್ನು **'ಗೊರೂರು ರಾಮಸ್ವಾಮಿ ಅಯ್ಯಂಗಾರ್'** ಅವರು ಬರೆದಿರುವ **'ಅಮೆರಿಕಾದಲ್ಲಿ ಗೊರೂರು'** ಪ್ರವಾಸ ಸಾಹಿತ್ಯ ಕೃತಿಯಿಂದ ಆಯ್ದ **'ಲಾಕಪ್ಪಿನಲ್ಲಿ ಒಂದು ರಾತ್ರಿ'** ಪಾಠದಿಂದ ಆರಿಸಲಾಗಿದೆ.
ಟ್ರಾಫಿಕ್ ಪೋಲಿಸಿನವನು ಲೇಖಕರಿಗೆ ತಿನ್ನಲು ಕೊಟ್ಟು ಉಪಚರಿಸಿದ ನಂತರ ಮನೆಯ ಹಾಸಿಗೆ ಧೂಳು ತುಂಬಿದೆ.ನನ್ನ ವಶದಲ್ಲಿಯೇ ಒಂದು ಲಾಕಪ್ ಇದೆ.ಅದು ಗಾಳಿ, ಬೆಳಕು, ಸ್ವಚ್ಛವಾದ ಹಾಸಿಗೆ, ಕ್ರಿಮಿನಾಶಕ ಸಾರಣೆಯೂ ಆಗಿ ಮಲಗಲು ಯೋಗ್ಯವಾಗಿದೆ.ಅಲ್ಲಿ ತಾವು ಮಲಗಿಬಿಡಿ ಎಂದು ಹೇಳಿದನು.ಅಲ್ಲದೆ ತನ್ನ ಖೈದಿಯ ರಕ್ಷಣೆಯನ್ನು ನಾನು ಸರಿಯಾಗಿ ಮಾಡಬೇಕಷ್ಟೆ ಎಂದನು ಆ ಸಂದರ್ಭದಲ್ಲಿ ಲೇಖಕರು ಈ ಮೇಲಿನಂತೆ ಅವನಿಗೆ ಹೇಳಿದರು.

4. **"ನಾನು ಮಾಡಿದರು ಕಾನೂನು ಬಿಟ್ಟು ಹೋಗುವುದಿಲ್ಲ ಇಲ್ಲಿ ಎಲ್ಲ ಪೋಲಿಸರು ಹಾಗೆಯೆ"**

ಪ್ರಸ್ತುತ ವಾಕ್ಯವನ್ನು **'ಗೊರೂರು ರಾಮಸ್ವಾಮಿ ಅಯ್ಯಂಗಾರ್'** ಅವರು ಬರೆದಿರುವ **'ಅಮೆರಿಕಾದಲ್ಲಿ ಗೊರೂರು'** ಪ್ರವಾಸ ಸಾಹಿತ್ಯ ಕೃತಿಯಿಂದ ಆಯ್ದ **'ಲಾಕಪ್ಪಿನಲ್ಲಿ ಒಂದು ರಾತ್ರಿ'** ಪಾಠದಿಂದ ಆರಿಸಲಾಗಿದೆ.
ಟ್ರಾಫಿಕ್ ಪೋಲಿಸ್ ಲೇಖಕರೊಂದಿಗೆ ಮಾತಾಡಲು ಆರಂಭಿಸಿ ಅಮೆರಿಕಾದ ಪೋಲಿಸರ ಸಂಬಳ ಸಾರಿಗೆ ವಿಷಯ ಹೇಳಿದನು.ಭಾರತದಲ್ಲಿ ಹೇಗಿದೆ ಎಂದು ಕೇಳಿ ತಿಳಿದುಕೊಂಡನು.ಅಲ್ಲದೆ ಪೋಲಿಸರು ಅಮೆರಿಕಾದಲ್ಲಿ ಹೇಗೆ ತಮ್ಮ ಕರ್ತವ್ಯವನ್ನು ಸಲ್ಲಿಸುತ್ತಾರೆ ಎಂದು ಹೇಳಿದನು.ತಾನೊಬ್ಬನೇ ಅಲ್ಲ ಎಲ್ಲರೂ ಇಲ್ಲಿ ಕಾನೂನು ಬಿಟ್ಟು ಹೋಗುವುದಿಲ್ಲ ಎಂದು ತನ್ನ ಅಭಿಪ್ರಾಯವನ್ನು ಲೇಖಕರೊಂದಿಗೆ ಹಂಚಿಕೊಂಡ ಸಂದರ್ಭ ಇಲ್ಲಿ ವ್ಯಕ್ತವಾಗಿದೆ.

**ಪದ್ಯ – 2.**

**ಕೋಗಿಲೆ** **ಚೆನ್ನವೀರಕಣವಿ**

1. **"ಜಗದ ಬಿನದ ನಿನ್ನ ಮುದದ ಗಾನವಾಯ್ತೆ?"**

ಈ ವಾಕ್ಯವನ್ನು **'ಚೆನ್ನವೀರಕಣವಿ'** ಅವರು ರಚಿಸಿರುವ **'ಕೋಗಿಲೆ'** ಎಂಬ ಪದ್ಯದಿಂದ ಆರಿಸಿಕೊಳ್ಳಲಾಗಿದೆ.
ಈ ವಾಕ್ಯವನ್ನು ಕವಿಗಳು ಕೋಗಿಲೆಯನ್ನು ಕುರಿತು ಹೇಳಿದ್ದಾರೆ ವಸಂತಮಾಸದಲ್ಲಿ ಕೋಗಿಲೆ ಇಂಪಾಗಿ ಹಾಡಿ ಪ್ರಕೃತಿ ಸೌಂದರ್ಯಕ್ಕೆ ಮೆರುಗು ನೀಡುತ್ತದೆ. ಕೋಗಿಲೆಯು ಮಧುರವಾದ ಗಾನವನ್ನು ಕೇಳಿ ಜಗದ ಸಂತೋಷವೆಲ್ಲ ಕೋಗಿಲೆಯ ಮುದದ ಗಾನವಾಗಿದೆಯೇ ಎಂದು ಕೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

2. **"ಗಾನ ಕೇಳಿ ಮೌನತಾಳಿ ಮೂಕವಾಯ್ತು ಭಾವನಾ"**

ಈ ವಾಕ್ಯವನ್ನು **'ಚೆನ್ನವೀರಕಣವಿ'** ಅವರು ರಚಿಸಿರುವ **'ಕೋಗಿಲೆ'** ಎಂಬ ಪದ್ಯದಿಂದ ಆರಿಸಿಕೊಳ್ಳಲಾಗಿದೆ.
ಈ ವಾಕ್ಯವನ್ನು ಕೋಗಿಲೆಯ ಗಾನಕ್ಕೆ ಪ್ರತಿಕ್ರಿಯೆ ವಿವರಿಸುತ್ತಾ ತಿಳಿಸುತ್ತಾರೆ.
ಮಾಮರದ ಮೇಲೆ ಕುಳಿತು ಹಾಡುತ್ತಿರುವ ಕೋಗಿಲೆಯ ಇಂಪಾದ ಗಾನದಿಂದ ಮನಸೆಲ್ಲ ಮೂಕವಾಯಿತು.ಕೋಗಿಲೆ ಗಾನ ಕೇಳಿ ಮನಸ್ಸಿನ ಚಿಂತೆಗಳು ದೂರವಾದವು ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**3. "ಎದೆಯು ಮಿಡಿದು ತಾಳ ಹಿಡಿದು ಕುಣಿಯುತಿಹುದು ಈ ಚಣಾ"**

ಈ ವಾಕ್ಯವನ್ನು **'ಚೆನ್ನವೀರಕಣವಿ'** ಅವರು ರಚಿಸಿರುವ **'ಕೋಗಿಲೆ'** ಎಂಬ ಪದ್ಯದಿಂದ ಆರಿಸಿಕೊಳ್ಳಲಾಗಿದೆ.

ಈ ವಾಕ್ಯವನ್ನು ಕವಿಗಳು ಕೋಗಿಲೆಯ ಗಾನಕ್ಕೆ ಈ ಕ್ಷಣ ಹೇಗೆ ಸ್ಪಂದಿಸುತ್ತದೆ ಎಂದು ವಿವರಿಸುತ್ತ ಹೇಳುತ್ತಾರೆ.ಕೋಗಿಲೆಯ ಗಾನ ಕೇಳಿ ಮನಸ್ಸಿಗೆ ಮುದವಾಗಿ ಮಾನವ ಲೋಕ ದೇವತೆಗಳ ಲೋಕವಾದಂತಾಯಿತು.ಎದೆಯಲ್ಲಿ ಹೊಸ ರಾಗ ಮೂಡಿ ತಾಳ ಹಿಡಿದು ಕುಣಿಯಿತು.ಎಲ್ಲೆಲ್ಲೂ ನಾದ ಸಾಮರಸ್ಯ ಕಂಡು ಬರುತ್ತಿದೆ ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**4. "ಮೌನಧ್ಯಾನ ನಿನಗೆ ಊನ ಕುಕಿಲು ಜಾಣ ಕೋಗಿಲೆ"**

ಈ ವಾಕ್ಯವನ್ನು **'ಚೆನ್ನವೀರಕಣವಿ'** ಅವರು ರಚಿಸಿರುವ **'ಕೋಗಿಲೆ'** ಎಂಬ ಪದ್ಯದಿಂದ ಆರಿಸಿಕೊಳ್ಳಲಾಗಿದೆ.

ಈ ವಾಕ್ಯವನ್ನು ಕವಿಗಳು ಕೋಗಿಲೆಗೆ ಹೇಳುತ್ತಾರೆ.ಕೋಗಿಲೆ ತನ್ನ ಮಧುರವಾದ ಗಾಯನದಿಂದ ರಸದ ಚಿಲುಮೆ ಹರಿಸಬೇಕು.ಮೌನಧ್ಯಾನದಲ್ಲಿರುವುದು ಕೋಗಿಲೆಗೆ ತಕ್ಕುದಲ್ಲ ಆದ್ದರಿಂದ ಕೋಗಿಲೆ ಸದಾ ಕಾಲ ತನ್ನ ಇಂಪಾದ ಧ್ವನಿಯಿಂದ ಹಾಡುತ್ತಿರಬೇಕು ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಗದ್ಯ – 3.**

**ಕರ್ನಾಟಕತ್ವ** **ಜೆ.ಪಿ.ರಾಜರತ್ನಂ**

****

**ಪದ್ಯ – 4**

**ಒಂದೇ ಭೂಮಿತಾಯ ಕುಡಿಗಳು** **ಕೆ.ಎಸ್. ನಿಸಾರ್ ಅಹ್ಮದ್**

**1. " ಭೂಮಿತಾಯ ಕುಡಿಗಳೆಂದು ಪಣವ ತೊಡಿರಿ ಇಂದೆ"**

ಈ ವಾಕ್ಯವನ್ನು **'ಕೆ.ಎಸ್. ನಿಸಾರ್ಅಹಮದ್'** ಅವರು ರಚಿಸಿರುವ **'ಒಂದೇ (ಭೂಮಿ ತಾಯಿಯ ಕುಡಿಗಳು),** ಪದ್ಯಭಾಗದಿಂದ ಆರಿಸಲಾಗಿದೆ.

ಈ ವಾಕ್ಯವನ್ನು ಕವಿಗಳು ಓದುಗರಿಗೆ ಹೇಳಿದ್ದಾರೆ. ನಾವು ನೀವು ಅವರು ಇವರು ಹೀಗೆ ಎಲ್ಲಾ ಮಾನವರೂ ಒಂದೇ ನಮ್ಮಲ್ಲಿ ಭೇದಭಾವವಿಲ್ಲ ನಾವೆಲ್ಲ ಒಟ್ಟಾಗಿ ಬಾಳಬೇಕು ನಾವೆಲ್ಲರು ಒಂದೇ ಭೂಮಿ ತಾಯಿಯ ಕುಡಿಗಳೆಂದು ಪಣ ತೊಟ್ಟು ಬಾಳಬೇಕು ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**2. "ಸ್ವಸ್ವಭಾವ ಚಹರೆ ಬೇರೆ ತಾಯ ಬಸಿರು ಒಂದೆ"**

ಈ ವಾಕ್ಯವನ್ನು **'ಕೆ.ಎಸ್. ನಿಸಾರ್ಅಹಮದ್'** ಅವರು ರಚಿಸಿರುವ **'ಒಂದೇ (ಭೂಮಿ ತಾಯಿಯ ಕುಡಿಗಳು),** ಪದ್ಯಭಾಗದಿಂದ ಆರಿಸಲಾಗಿದೆ.

ಈ ಮಾತನ್ನು ಕವಿ ಓದುಗರಿಗೆ ಹೇಳಿದ್ದಾರೆ.ಮಾನವನ ಸ್ವಭಾವ ಚಹರೆ ಬೇರೆ ಬೇರೆಯಾಗಿದ್ದರೂ ನಮಗೆಲ್ಲ ಆಶ್ರಯ ನೀಡಿರುವ ಭೂಮಿ ತಾಯಿಯ ಬಸಿರು ಒಂದೆ.ಹಿಂದು, ಕ್ರೈಸ್ತ, ಇಸ್ಲಾಂ ಧರ್ಮಗಳು ಬೇರೆ ಬೇರೆಯಾಗಿದ್ದರೂ ಮತ ಧರ್ಮಗಳ ಉಸಿರು ಒಂದೇ ಆಗಿದೆ.ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**3. " ಕರ್ನಾಟಕವಂಗ ಆಂಧ್ರ ಭಾರತೀಯರೊಂದೆ"**

ಈ ವಾಕ್ಯವನ್ನು **'ಕೆ.ಎಸ್. ನಿಸಾರ್ಅಹಮದ್'** ಅವರು ರಚಿಸಿರುವ **'ಒಂದೇ (ಭೂಮಿ ತಾಯಿಯ ಕುಡಿಗಳು),** ಪದ್ಯಭಾಗದಿಂದ ಆರಿಸಲಾಗಿದೆ.

ಈ ವಾಕ್ಯವನ್ನು ಕವಿ ಓದುಗರಿಗೆ ಹೇಳಿದ್ದಾರೆ.ಕರ್ನಾಟಕ, ವಂಗ, ಆಂಧ್ರ ಹೀಗೆ ಯಾವ ರಾಜ್ಯದಲ್ಲಿದ್ದರೂ ಭಾರತೀಯರೆಲ್ಲ ಒಂದೇ.ಪೂರ್ವೋತ್ತರ, ಪಡುವಣ, ತೆಂಕಣ ಹೀಗೆ ಭಾರತದ ಯಾವ ದಿಕ್ಕಿನಲ್ಲಿದ್ದರೂ ಗಾಳಿ, ಮುಗಿಲು ಒಂದೆ, ಉಡುಗೆ, ತೊಡುಗೆ, ಭಾಷೆ, ಸಂಪ್ರದಾಯ ಬೇರೆ ಬೇರೆಯಾಗಿದ್ದರೂ ಭಾರತಮಾತೆಯ ಮಕ್ಕಳೆಲ್ಲರೂ ಒಂದಾಗಿರಬೇಕೆಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಗದ್ಯ – 5.**

**ಸ್ಪಿನ್ ಮಾಂತ್ರಿಕ ಅನಿಲ್ ಕುಂಬ್ಳೆ** **ಸಂಪಾದಿತ**

****

## ಪದ್ಯ – 6

**ಮಾಯಾದೀಪ** **ಬಿ.ಆರ್. ಲಕ್ಷ್ಮಣರಾವ್**

1. **"ಹೊಸಜೀವನ ಹೊಸ ರೂಪ"**

ಈ ವಾಕ್ಯವನ್ನು **'ಬಿ.ಆರ್.ಲಕ್ಷ್ಮಣರಾವ್' ಅವರು** ರಚಿಸಿರುವ **'ಮಾಯಾದೀಪ'** ಎಂಬ ಪದ್ಯದಿಂದ ಆರಿಸಲಾಗಿದೆ.
ಈ ವಾಕ್ಯವನ್ನು ಕವಿಗಳು ಓದುಗರಿಗೆ ಹೇಳಿದ್ದಾರೆ.ಅಕ್ಷರವೆಂಬುದು ಅಲ್ಲಾದ್ದೀನನ ಮಾಯಾದೀಪದಂತೆ.ಅದು ಒಮ್ಮೆ ವಶವಾದರೆ ಹೊಸಜೀವನ ಹೊಸ ರೂಪ ಪಡೆಯಲು ಸಹಾಯ ಮಾಡುತ್ತದೆ. ವಿದ್ಯೆಯಿಂದ ಸುಖ ಜೀವನ ನಡೆಸಬಹುದೆಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

## ಗದ್ಯ – 7

**ಧ್ವಜ ರಕ್ಷಣೆ (ನಾಟಕ)** **ಲೇ. ಎಸ್. ಆರ್.ರೋಹಿಡೇಕರ್**

1. **"ಅರಿಯದ ಬಾಲಕರನ್ನು ಅಡ್ಡದಾರಿಗೆ ಎಳೆದು ಅವರ ಬದುಕನ್ನ ಹಾಳು ಮಾಡದಿರಿ"**

ಈ ವಾಕ್ಯವನ್ನು **'ಪ್ರೊ॥ ಎಸ್. ಆರ್.ರೋಹಡೇಕರ್'** ಅವರು ಬರೆದಿರುವ **'ಮೂರು ಏಕಾಂಕ ನಾಟಕಗಳು'** ಕೃತಿಯಿಂದ ಆಯ್ದ **'ಧ್ವಜ ರಕ್ಷಣೆ'** ಎಂಬ ಭಾಗದ **'ರಾಮ್‌ಸಿಂಗ್ ಚೌಕ'** ಎಂಬುವುದರಿಂದ ಆರಿಸಲಾಗಿದೆ.
ಸ್ವಾತಂತ್ರ್ಯ ಹೋರಾಟಗಾರ ಸೋಮಣ್ಣ ಎಂಬುವರು ರಾಮಸಿಂಗ್‌ನಿಗೆ ಗುಂಡು ಹಾರಿಸಿದ್ದೇಕೆ ಎಂದು ಕುಲಕರ್ಣಿಯರಿಗೆ ಪ್ರಶ್ನಿಸುತ್ತಾರೆ.ಅಲ್ಲದೆ ಒಬ್ಬ ದೇಶಾಭಿಮಾನಿ, ದೇಶ ವಿಮೋಚನೆಗಾಗಿ ಹಟ ಹಿಡಿದರೆ ತಪ್ಪೆ ಜೈಲಿಗೆ ಹಾಕಬಹುದಿತ್ತಲ್ಲ ಎಂದು ಹೇಳಿದರು.ಕುಲಕರ್ಣಿ ಅವನು ನಮ್ಮ ಆಜ್ಞೆ ಮೀರಿದ್ದಕ್ಕಾಗಿ ಈ ಫಲ ಅನುಭವಿಸಿದ.ನೀವು ಮಾಡುವ ಉಪದೇಶ ಕೇಳಿಯೇ ಅರಿಯದ ಬಾಲಕರು ಹೀಗೆ ಪ್ರಾಣ ಕಳೆದುಕೊಳ್ಳುತ್ತಿರುವರೆಂದು ಹೇಳಿದ ಸಂದರ್ಭ ಇದು.

2. **"ಸಾಕು ಮಾಡಿರಿ ನಿಮ್ಮ ಪುರಾಣ"**

ಈ ವಾಕ್ಯವನ್ನು **'ಪ್ರೊ॥ ಎಸ್. ಆರ್.ರೋಹಡೇಕರ್'** ಅವರು ಬರೆದಿರುವ **'ಮೂರು ಏಕಾಂಕ ನಾಟಕಗಳು'** ಕೃತಿಯಿಂದ ಆಯ್ದ **'ಧ್ವಜ ರಕ್ಷಣೆ'** ಎಂಬ ಭಾಗದ **'ರಾಮ್‌ಸಿಂಗ್ ಚೌಕ'** ಎಂಬುವುದರಿಂದ ಆರಿಸಲಾಗಿದೆ.
ಸೋಮಣ್ಣನವರು ದೇಶಕ್ಕಾಗಿ ಬಲಿದಾನ ಮಾಡಲು ಉಪದೇಶಿಸಿದ್ದೇವೆ ಎಂದು ಹೇಳಿದರು ಅದಕ್ಕೆ ಕುಲಕರ್ಣಿ ಅದರಿಂದ ಅವರಿಗೇನು ಲಾಭ ಎಂದು ಕೇಳಿದರು ಆಗ ಸೋಮಣ್ಣ ಸ್ವಾತಂತ್ರ್ಯ ಹೋರಾಟ ಲಾಭ ನಷ್ಟದ ವ್ಯಾಪಾರವಲ್ಲ ಇಂದು ನಾವು ಮಾಡುವ ತ್ಯಾಗ ಬಲಿದಾನಗಳಿಂದ ಮುಂದಿನ ಪೀಳಿಗೆಯವರು ಸ್ವತಂತ್ರ ಬದುಕನ್ನು ಅನುಭವಿಸುವರೆಂದು ಹೇಳಿ, ಮಾವಿನ ಮರ ನೆಟ್ಟರೆ, ನೆಟ್ಟವರಿಗೆ ಫಲ ಸಿಗುವುದಿಲ್ಲ ಎಂದು ಹೇಳಿದ ಸಂದರ್ಭದಲ್ಲಿ ಸಿಟ್ಟುಗೊಂಡು ಕುಲಕರ್ಣಿ ಈ ಮೇಲಿನಂತೆ ಹೇಳಿದನು.

3. **"ಹೆಣ್ಣುಮಗಳೇ ಆ ಧ್ವಜವನ್ನು ಮೊದಲು ಕೆಳಗಿಡು"**

ಈ ವಾಕ್ಯವನ್ನು **'ಪ್ರೊ॥ ಎಸ್. ಆರ್.ರೋಹಡೇಕರ್'** ಅವರು ಬರೆದಿರುವ **'ಮೂರು ಏಕಾಂಕ ನಾಟಕಗಳು'** ಕೃತಿಯಿಂದ ಆಯ್ದ **'ಧ್ವಜ ರಕ್ಷಣೆ'** ಎಂಬ ಭಾಗದ **'ರಾಮ್‌ಸಿಂಗ್ ಚೌಕ'** ಎಂಬುವುದರಿಂದ ಆರಿಸಲಾಗಿದೆ.
ತುಳಜಾಬಾಯಿ ಸ್ವಾತಂತ್ರ್ಯ ಚಳುವಳಿಯಲ್ಲಿ ತನ್ನ ಗಂಡನನ್ನು ಕಳೆದುಕೊಂಡಿದ್ದಳು.ಆದರೂ ಮಗನಿಗೆ ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕಲು ಒಪ್ಪಿದ್ದಳು.1942ರ ಭಾರತ ಬಿಟ್ಟು ತೊಲಗಿ ಚಳುವಳಿಯಲ್ಲಿ ರಾಮಸಿಂಗ್ ಭಾಗವಹಿಸಿ ಕುಲಕರ್ಣಿಯ ಗುಂಡಿಗೆ ಬಲಿಯಾಗುತ್ತಾನೆ.ತುಳಜಾಬಾಯಿ ರಾಮಸಿಂಗ್ ಸತ್ತ ವಿಷಯ ತಿಳಿದು ಗೋಳಿಡುತ್ತಾ ಬರುತ್ತಾಳೆ.ಅವನ ದೇಹದ ಮೇಲೆ ಬಿದ್ದು, ನಿನ್ನ ಕೈಯ ಧ್ವಜವನ್ನು ಕಸಿದುಕೊಂಡರೆ ಮಗನೆ ಇಗೋ ತೆಗೆದಕೋ ನಾನು ಇನ್ನೊಂದು ಧ್ವಜ ನಿನಗಾಗಿ ತಂದಿರುವೆ ಎನ್ನುತ್ತಾಳೆ ಆ ಸಂದರ್ಭದಲ್ಲಿ ಕುಲಕರ್ಣಿ ಈ ಮೇಲಿನಂತೆ ಹೇಳುತ್ತಾನೆ.

## ಪದ್ಯ – 8

**ವಚನ** **– ಅಂಬಿಗರ ಚೌಡಯ್ಯ**

1. **"ಹೆಂಡಿರಾದರೆ ಮಕ್ಕಳ ಚಿಂತೆ"**

ಈ ವಾಕ್ಯವನ್ನು ಅಂಬಿಗರ ಚೌಡಯ್ಯ ರಚಿಸಿರುವ 'ವಚನ' ಎಂಬ ಪದ್ಯದಿಂದ ಆರಿಸಲಾಗಿದೆ.
ಈ ವಾಕ್ಯವನ್ನು ಕವಿ ಓದುಗರಿಗೆ ಹೇಳಿದ್ದಾರೆ.
ಮನುಷ್ಯ ಬಡತನದಲ್ಲಿದ್ದಾಗ ಹೊಟ್ಟೆಗೆ ಊಟದ ಚಿಂತೆಯಲ್ಲಿ ಇರುತ್ತಾನೆ.ಉಣ್ಣುವ ಚಿಂತೆ ತೀರಿದೊಡನೆ ಉಡುವ ತೊಡುವ ಚಿಂತೆಯಲ್ಲಿರುತ್ತಾನೆ.ಉಡುವ ಚಿಂತೆ ತೀರಿದೊಡನೆ ಸಂಪಾದಿಸಿ ಕೂಡಿಡುವ ಚಿಂತೆ ಇರುತ್ತದೆ. ಹಣ ಸೇರಿದೊಡನೆ ಹೆಂಡತಿಯ ಚಿಂತೆ ಮಾಡುತ್ತಾನೆ. ಹೆಂಡತಿಯಾದ ನಂತರ ಮಕ್ಕಳ ಚಿಂತೆಯಲ್ಲಿರುತ್ತಾನೆ ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**2. ಕೇಡಾದರೆ ಮರಣದ ಚಿಂತೆ"**

ಈ ವಾಕ್ಯವನ್ನು ಅಂಬಿಗರ ಚೌಡಯ್ಯ ಅವರ**'ವಚನ'** ಎಂಬ ಪದ್ಯದಿಂದ ಆರಿಸಲಾಗಿದೆ.

ಈ ವಾಕ್ಯವನ್ನು ಕವಿ ಓದುಗರಿಗೆ ಹೇಳಿದ್ದಾರೆ.

ಪ್ರತಿಯೊಬ್ಬ ಮನುಷ್ಯನು ಒಂದಲ್ಲ ಒಂದು ಚಿಂತೆಯಲ್ಲಿ ಇರುತ್ತಾನೆ.ಉಣ್ಣುವ, ಉಡುವ, ಇಡುವ ಚಿಂತೆಯ ನಂತರ ಹೆಂಡತಿ, ಮಕ್ಕಳ ಚಿಂತೆ ಕಾಡುತ್ತದೆ.ಮಕ್ಕಳಾದೊಡನೆ ಬದುಕು ರೂಪಿಸುವ ಚಿಂತೆ ಚೆನ್ನಾಗಿ ಬದುಕಿದರೆ ಕೇಡಿನ ಚಿಂತೆ ಕೇಡಾದರೆ ಮರಣದ ಚಿಂತೆ ಕಾಡುತ್ತದೆ.ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**3. "ಬಡತನಕೆ ಉಂಬುವ ಚಿಂತೆ"**

ಈ ವಾಕ್ಯವನ್ನು ಅಂಬಿಗರ ಚೌಡಯ್ಯ ಅವರ **'ವಚನ'** ಎಂಬ ಪದ್ಯದಿಂದ ಆರಿಸಲಾಗಿದೆ.

ಈ ವಾಕ್ಯವನ್ನು ಕವಿ ಓದುಗರಿಗೆ ಹೇಳಿದ್ದಾರೆ.

ಪ್ರತಿಯೊಬ್ಬ ಮನುಷ್ಯನಿಗೂ ಒಂದಲ್ಲ ಒಂದು ಚಿಂತೆ ಇದ್ದೇ ಇರುತ್ತದೆ ಚಿಂತೆ ಇಲ್ಲದ ಮನುಷ್ಯ ಈ ಜಗತ್ತಿನಲ್ಲೇ ಇಲ್ಲ ಬಡತನದಲ್ಲಿರುವ ಮಾನವ ಮೊದಲು ಉಂಡು ಹೊಟ್ಟೆ ತುಂಬಿಸಿಕೊಳ್ಳುವ ಚಿಂತೆ ಮಾಡುತ್ತಾನೆ ಹಸಿವು ನೀಗಿದ ಮೇಲೆ ಉಡುವ ಇಡುವ ಚಿಂತೆ ಅವನನ್ನು ಕಾಡುತ್ತದೆ ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

## ಗದ್ಯ – 9

**ಕರ್ನಾಟಕದ ವೀರ ವನಿತೆಯರು** **ಲೆ. ಡಾ॥ ವಿಜಯಲಕ್ಷ್ಮಿ ಬಾಳೇಕುಂದ್ರಿ**

**1 "ವಿಶ್ವವಿಖ್ಯಾತರಾದ ನಿಮ್ಮನ್ನು ನೋಡಲು ಅಷ್ಟು ದೂರದಿಂದ ಬಂದುದು ಸಾರ್ಥಕವಾಯಿತು"**

ಈ ವಾಕ್ಯವನ್ನು **'ಡಾ॥ ವಿಜಯಲಕ್ಷ್ಮಿ ಈಶ್ವರಪ್ಪ ಬಾಳೇಕುಂದ್ರಿ'** ಅವರು ಬರೆದಿರುವ **'ಜೀವನ ಧಾರೆ'** ಕೃತಿಯಿಂದ ಆಯ್ದ **'ಕರ್ನಾಟಕದ ವೀರ ವನಿತೆಯರು'** ಪಾಠದಿಂದ ಆರಿಸಲಾಗಿದೆ.

ಪೋರ್ಚುಗೀಸರ ಆರ್ಥಿಕ ಶೋಷಣೆಗೆ ತಲೆಬಾಗದೆ ಸ್ವಾಭಿಮಾನ ಮೆರೆದಳು ರಾಣಿ ಅಬ್ಬಕ್ಕದೇವಿ.ಆಕೆ ವಿವೇಚನಾಶೀಲಳೂ, ನ್ಯಾಯಪರಳೂ, ಕುಶಲಳು ಆಗಿದ್ದಳೆಂದು ಜಿನೋವ (ಇಟಲಿಯ) ಪ್ರವಾಸಿ 'ಪಿತ್ರೋ' ಬರೆದಿದ್ದಾನೆ.ಅವನು ಬಾಗ್ದಾದಿನ 'ದೊರೆ ಷಾ ಅಬ್ಬಾಸ್'ರನ್ನು ಭೇಟಿಯಾದಾಗ ಅವರು ರಾಣಿ ಅಬ್ಬಕ್ಕ ಪೋಚುಗೀಸರನ್ನು ಓಡಿಸಿದನ್ನು ವಿವರಿಸಿ ಭಾರತಕ್ಕೆ ಹೋದರೆ ಆಕೆಯನ್ನು ಭೇಟಿಯಾಗದೆ ಬರಬೇಡಿ ಎಂದು ಹೇಳಿದ್ದರಂತೆ ಆಸಂದರ್ಭವನ್ನು ಸ್ಮರಿಸಿ ಪಿತ್ರೊ ಈ ಮೇಲಿನಂತೆ ಹೇಳಿದನಂತೆ.

**2. "ಸಪ್ತ ಸಮುದ್ರದಲ್ಲಿರುವ ದ್ಯಾಮವ್ವ ಎಂಬ ಜಾಗೃತ ಜಗದಾಂಬೆ ದೇವಿಯ ದರ್ಶನ ಪಡೆದರೆ ಉತ್ತಮ"**

ಈ ವಾಕ್ಯವನ್ನು **'ಡಾ॥ ವಿಜಯಲಕ್ಷ್ಮಿ ಈಶ್ವರಪ್ಪ ಬಾಳೇಕುಂದ್ರಿ'** ಅವರು ಬರೆದಿರುವ **'ಜೀವನ ಧಾರೆ'** ಕೃತಿಯಿಂದ ಆಯ್ದ **'ಕರ್ನಾಟಕದ ವೀರ ವನಿತೆಯರು'** ಪಾಠದಿಂದ ಆರಿಸಲಾಗಿದೆ.

ಶಿವಾಜಿಯ ಸೇನೆಯನ್ನು ಸೋಲಿಸಿ ಸಂಭ್ರಮಪಟ್ಟರು ಚೆನ್ನಮ್ಮಾಜಿ ತನ್ನ ಗಂಡನನ್ನು ಕಳೆದುಕೊಳ್ಳುತ್ತಾಳೆ.ಸಾಯುವ ಮೊದಲು 'ಈಶಪ್ರಭು' ಶಿವಾಜಿಯನ್ನು ನಾಶಮಾಡಲೇ ಬೇಕು ಎಂಧು ಮಾತು ಪಡೆದಿರುತ್ತಾನೆ.ದುಃಖತಪ್ತಳಾದ ರಾಣಿ ಶಿವಾಜಿಯನ್ನು ಶಕ್ತಿಯ ಜೊತೆಗೆ ಯುಕ್ತಿಯಿಂದ ಗೆಲ್ಲಲು ಆಲೋಚಿಸುತ್ತಾಳೆ. 'ಬೆಳವಡಿಯ ಸರದಾರ ಶಾಂತಯ್ಯ'ನನ್ನು ಸನ್ಯಾಸಿ ವೇಷದಲ್ಲಿ ಶಿವಾಜಿಯ ಹತ್ತಿರ ಕಳಿಸಿದಳು.ಅವನು ಶಿವಾಜಿಗೆ ಈ ಮೇಲಿನಂತೆ ಸೂಚಿಸಿದನು.ಆ ಸಂದರ್ಭ ಇಲ್ಲಿದೆ.

**3. "ದೇವಿ ನನ್ನ ಅಪರಾಧ ಕ್ಷಮಿಸು, ನಾನು ನಿನ್ನ ಮಗನೆಂದು ತಿಳಿ"**

ಈ ವಾಕ್ಯವನ್ನು **'ಡಾ॥ ವಿಜಯಲಕ್ಷ್ಮಿ ಈಶ್ವರಪ್ಪ ಬಾಳೇಕುಂದ್ರಿ'** ಅವರು ಬರೆದಿರುವ **'ಜೀವನ ಧಾರೆ'** ಕೃತಿಯಿಂದ ಆಯ್ದ **'ಕರ್ನಾಟಕದ ವೀರ ವನಿತೆಯರು'** ಪಾಠದಿಂದ ಆರಿಸಲಾಗಿದೆ.

ರಾಣಿ ಮಲ್ಲಮ್ಮಾಜಿ ಗಂಡನಿಗೆ ಶಿವಾಜಿಯನ್ನು ನಾಶಮಾಡುವುದಾಗಿ ಮಾತು ಕೊಟ್ಟಿರುತ್ತಾಳೆ. ಅದನ್ನು ಉಳಿಸಿಕೊಳ್ಳಲು ಶಕ್ತಿಯ ಜೊತೆ ಯುಕ್ತಿಯಿಂದ ದಿಟ್ಟ ಹೆಜ್ಜೆ ಇಡುತ್ತಾಳೆ.ಬೆಳವಡಿಯ ಸರದಾರ ಶಾಂತಯ್ಯನನ್ನು ಸನ್ಯಾಸಿ ವೇಷದಲ್ಲಿ ಶಿವಾಜಿ ಬಳಿ ಕಳಿಸುತ್ತಾಳೆ.ಅವನು ಸಪ್ತ ಸಮುದ್ರದಲ್ಲಿರುವ ದ್ಯಾಮವ್ವ ಎಂಬ ಜಾಗೃತ ದೇವಿಯ ದರ್ಶನ ಪಡೆದರೆ ಉತ್ತಮ ಎಂದು ಸೂಚಿಸುತ್ತಾನೆ.ಅವನ ಸೂಚನೆಯಂತೆ ಶಿವಾಜಿ ದೇವಿ ದರ್ಶನ ಪಡೆದು ಹಿಂದಿರುಗುವಾಗ, ಹಠಾತ್ತನೆ ಚೆನ್ನಮ್ಮಾಜಿ ಅವನ ಮೇಲೆ ಎರಗಿ ಖಡ್ಗ ಬೀಸಿದಳು.ಶಿವಾಜಿ ನೆಲಕ್ಕುರುಳಿದನು.ಆ ಸಂದರ್ಭದಲ್ಲಿ ಕೈಜೋಡಿಸಿ ಕ್ಷಮಿಸೆಂದು ಈ ಮೇಲಿನಂತೆ ಕೇಳಿಕೊಂಡನು.

**4. "ತಾಯಿ ಎಂದು ಕರೆದ ಕನ್ನಡದ ಕಂದ ಯಾರು"**

ಈ ವಾಕ್ಯವನ್ನು **'ಡಾ॥ ವಿಜಯಲಕ್ಷ್ಮಿ ಈಶ್ವರಪ್ಪ ಬಾಳೇಕುಂದ್ರಿ'** ಅವರು ಬರೆದಿರುವ **'ಜೀವನ ಧಾರೆ'** ಕೃತಿಯಿಂದ ಆಯ್ದ **'ಕರ್ನಾಟಕದ ವೀರ ವನಿತೆಯರು'** ಪಾಠದಿಂದ ಆರಿಸಲಾಗಿದೆ.

ಕಿತ್ತೂರ ಚೆನ್ನಮ್ಮ ಬಲಾಢ್ಯರಾದ ಬ್ರಿಟಿಷರನ್ನು ಸೋಲಿಸಿದವಳು.ಮಹಿಳೆ ಮತ್ತು ಮಕ್ಕಳನ್ನು ಅಕ್ಕರೆಯಿಂದ ಕಂಡ ಕರುಣಾಮಯಿ ಅವಳ ಕಡೆಯ ದೇಶದ್ರೋಹಿಗಳೇ ಪಿತೂರಿ ನಡೆಸಿ, ಮದ್ದಿನಲ್ಲಿ ಸಗಣಿ ಸೇರಿಸಿ ಚೆನ್ನಮ್ಮಾಳ ತೋಪು ಹಾರದಂತೆ ಮೋಸ ಮಾಡಿದರು.ಅವಳನ್ನು ಸೆರೆ ಹಿಡಿದು ಬಂಧಿಸಿದರು.ಆಗಲೂ ಸ್ವಾತಂತ್ರ್ಯದ ಕನಸನ್ನೇ ಕಂಡಳು.ಸೆರೆಮನೆಯಲ್ಲಿ ತನ್ನನ್ನು ನೋಡಲು ಬಂದ ಸಂಗೊಳ್ಳಿ ರಾಯಣ್ಣ 'ತಾಯಿ' ಎಂದು ಕರೆಯುತ್ತಾರೆ.ಆ ಸಂದರ್ಭದಲ್ಲಿ ಚೆನ್ನಮ್ಮ ಈ ಮೇಲಿನಂತೆ ಹೇಳಿದಳು.

## ಪದ್ಯ – 10

ದಾಸರ ಪದಗಳು ಮನಃಶುದ್ಧಿ – ಪುರಂದರದಾಸರು

****

**ಗದ್ಯ– 11**

**ಹಾಸ್ಯಜೀವಿ ನಾ. ಕಸ್ತೂರಿ – ಅ.ರಾ. ಮಿತ್ರ**

1. **"ಅದೇ ಸಂಕಟದ ವಿಷಯ"**

ಈ ವಾಕ್ಯವನ್ನು **'ಅ.ರಾ.ಮಿತ್ರ'** ಅವರು ಬರೆದಿರುವ **'ಸ್ಮರಣೀಯರು'** ಸಂಕಲನದಿಂದ ಆಯ್ದ **'ನಾ. ಕಸ್ತೂರಿ'** ಪಾಠದಿಂದ ಆರಿಸಲಾಗಿದೆ.

ಒಮ್ಮೆ ಕಸ್ತೂರಿಯವರಿಗೆ ಅನಾರೋಗ್ಯವಾಗಿತ್ತು.ವೈದ್ಯರು ಮರುದಿನ ಬೆಳಿಗ್ಗೆ ಮಲಪರೀಕ್ಷೆ ಮಾಡುವುದಾಗಿ ಹೇಳಿದ್ದರಂತೆ.ಮಾರನೆ ದಿನ ಬೆಳಿಗ್ಗೆ ಒಂದು ಡಬ್ಬಿಯಲ್ಲಿ ಮಲವನ್ನು ಸಂಗ್ರಹಿಸಿ ಇಟ್ಟುಕೊಂಡರು.ಆದರೆ ಅದರ ಮೇಲೆ 'ಕಸ್ತೂರಿ' ಎಂದು ಬರೆಯುವುದಾದರೂ ಹೇಗೆ ಎಂದು ಸಂಕಟಪಟ್ಟರಂತೆ ಅದನ್ನು ತಮ್ಮ ಸ್ನೇಹಿತರಲ್ಲಿ ಈ ಮೇಲಿನಂತೆ ಹೇಳಿಕೊಂಡ ಸಂದರ್ಭ ಇದು.

2. **"ಪಾಲಿಗೆ ಬಂದದ್ದು ಕೊಂಚಾಮೃತ ಎಂದು ಭಾವಿಸಬೇಕು"**

ಈ ವಾಕ್ಯವನ್ನು **'ಅ. ರಾ. ಮಿತ್ರ'** ಅವರು ಬರೆದಿರುವ **'ಸ್ಮರಣೀಯರು'** ಸಂಕಲನದಿಂದ ಆಯ್ದ **'ನಾ. ಕಸ್ತೂರಿ'** ಪಾಠದಿಂದ ಆರಿಸಲಾಗಿದೆ

ಲೇಖಕರು ಹೇಳುವಂತೆ ನಾ.ಕಸ್ತೂರಿಯವರ ಭಾಷಾಭ್ಯಾಸ ಶಬದ ಬಳಕೆ ಅತ್ಯಂತ ಚಮತ್ಕಾರದ್ದು. ಹಳೆಯ ಗಾದೆಯನ್ನು ತಿರುಚಿ, ಅದಕ್ಕೆ ಹಾಸ್ಯದ ಘಮವನ್ನು ಕೊಡುವುದು ವೈಶಿಷ್ಟ್ಯವೇ ಸರಿ.

ಹಳೇ ಗಾದೆ ಪಾಲಿಗೆ ಬಂದದ್ದು ಪಂಚಾಮೃತ ಇಲ್ಲಿ ಕೊಂಚಾಮೃತವಾಗಿದೆ. ಪಾಲಿಗೆ ಬಂದದ್ದು ಏನೇ ಆದರೂ ಅದು ಅಮೃತವೇ ಆದರೆ ಅದು ಕೊಂಚ ಮಾತ್ರ ಎಂದು ಕಸ್ತೂರಿ ಹಾಸ್ಯಲೇಪನ ಮಾಡಿದ್ದಾರೆ.

3. **"ನಾಳೆ ಕ್ಲಾಸೇನು ನಿಲ್ಲುವುದಿಲ್ಲ"**

ಈ ವಾಕ್ಯವನ್ನು **'ಅ. ರಾ. ಮಿತ್ರ'** ಅವರು ಬರೆದಿರುವ **'ಸ್ಮರಣೀಯರು'** ಸಂಕಲನದಿಂದ ಆಯ್ದ **'ನಾ. ಕಸ್ತೂರಿ'** ಪಾಠದಿಂದ ಆರಿಸಲಾಗಿದೆ

ಯಾರೋ ಒಬ್ಬ ಅಂತಿಮ ಬಿ.ಎ. ವಿದ್ಯಾರ್ಥಿ ನಾ. ಕಸ್ತೂರಿ 'ನೋಟ್ಸ್' ಎಗರಿಸಿದನಂತೆ.ಇವರು ಸಂಜೆ ನೋಟ್ಸ್ ಕಳುವಾಗಿರುವ ವಿಷಯ ಇತರ ಅಧ್ಯಾಪಕರಿಗೆ ಹೇಳಿ ನಾಳೆ ಕ್ಲಾಸೇನು ನಿಲ್ಲುವುದಿಲ್ಲ, ಕದ್ದವನೆ ನನ್ನ ಟೇಬಲ್ ಮೇಲೆ ಆ ನೋಟ್ಸ್ ಎಸೆದು ಹೋಗಿರುತ್ತಾನೆ ಎಂದು ಹೇಳಿದರಂತೆ ಕಾರಣ ಅದು ಇಂಗ್ಲೀಷ್ ನೋಟ್ಸ್ ಆದರೆ ಅದು ಮಲೆಯಾಳಿ ಲಿಪಿಯಲ್ಲಿದ್ದು ನಾ.ಕಸ್ತೂರಿ ಹೇಳಿದಂತೆಯೇ ಆಯಿತು.ಕ್ಲಾಸ್ ತೆಗೆದು ಕೊಳ್ಳಲು ಸಾಧ್ಯವಾಗುವುದಿಲ್ಲ ಎಂದು ತಿಳಿದಿದ್ದ ವಿದ್ಯಾರ್ಥಿಯ ಎಣಿಕೆ ಸುಳ್ಳಾಗಿತ್ತು.ಆ ಸಂದರ್ಭ ಇಲ್ಲಿದೆ.

4. **"ಬಲವೇ ನಾಸ್ತಿ"**

ಈ ವಾಕ್ಯವನ್ನು **'ಅ. ರಾ. ಮಿತ್ರ'** ಅವರು ಬರೆದಿರುವ **'ಸ್ಮರಣೀಯರು'** ಸಂಕಲನದಿಂದ ಆಯ್ದ **'ನಾ. ಕಸ್ತೂರಿ'** ಪಾಠದಿಂದ ಆರಿಸಲಾಗಿದೆ

ರಾವಣನ ವಧೆಯಾದ ನಂತರ ಅಯೋಧ್ಯೆಗೆ ಹೋಗುವ ಮೊದಲು ರಾಮ ಸೀತೆ ಕಿಷ್ಕಿಂಧೆಗೆ ಬಂದ ಪ್ರಸಂಗ.ವಾನರ ಸ್ತ್ರೀಯರೆಲ್ಲ ತುಂಬಾ ಅಲಂಕಾರ ಮಾಡಿಕೊಂಡಿದ್ದರು.ಚೆಲುವೆಯಾದ ಸೀತೆಯನ್ನು ಮೇಲಿನಿಂದ ಕೆಳಗಿನವರೆಗೂ ದಿಟ್ಟಿಸಿ ಪೆಚ್ಚಾದರಂತೆ.ಸೀತೆಯು ಅವರ ದೃಷ್ಟಿಯಲ್ಲಿ ಆಂಥ ಸುಂದರಿಯೇನಲ್ಲ ಏಕೆಂದರೆ ಅವಳಿಗೆ ತಮ್ಮಂತೆ ಬಾಲವೆ ಇಲ್ಲ ಅಂದರೆ ಬಾಲವೇ ನಾಸ್ತಿ ಎಂಬುದು.ಇದು ರಾಮಾಯಣದ ಒಂದು ಘಟನೆಯನ್ನು ಸೃಷ್ಟಿಸಿಕೊಂಡು ಬರೆದ ಒಂದು ಸುಂದರ ಪ್ರಬಂಧ.ಇದು ಕಸ್ತೂರಿಯವರ ಹಾಸ್ಯ ಪ್ರವೃತ್ತಿಗೆ ಉದಾಹರಣೆ ಅಷ್ಟೆ.

**ಪದ್ಯ – 12**

**ಜಾನಪದ – ಸಂಗ್ರಹ**

1. **"ಗೊಡೆಗೆ ಕಪ್ಪ ಬಳಿದ್ವಂಗೆ"**

ಈ ವಾಕ್ಯವನ್ನು **'ಜಾನಪದ'** ಎಂಬ ಜನಪದಗೀತೆಯಿಂದ ಆರಿಸಲಾಗಿದೆ.

ಈ ವಾಕ್ಯವನ್ನು ರೈತರು ಮಳೆರಾಯರನ್ನು ಪ್ರಾರ್ಥಿಸುತ್ತಾ ಮೂಡಣ ದಿಕ್ಕಿನಲ್ಲಿ ಮೂಡಿರುವ ಮೋಡ ನೋಡಲು ಸುಂದರವಾಗಿದೆ.ಗೋಡೆಗೆ ಕಪ್ಪು ಬಳಿದ ಹಾಗೆ ಕಾಣಿಸುತ್ತದೆ.ಮಳೆರಾಯ ಮುಗಿಲಿನಲ್ಲಿ ಬೋರಾಡುತ್ತಿದ್ದಾನೆ ಎಂದು ಮಳೆಬರುವ ಮೋಡವನ್ನು ವರ್ಣಿಸುವಾಗ ಈ ಮಾತು ಬಂದಿದೆ.

2. **"ಜಗ್ಗಿಸಿ ಹುಯ್ಯೋ ಮಳೆರಾಯ"**

ಈ ವಾಕ್ಯವನ್ನು **'ಜಾನಪದ'** ಎಂಬ ಜನಪದಗೀತೆಯಿಂದ ಆರಿಸಲಾಗಿದೆ

ಈ ಮಾತನ್ನು ರೈತರು ಮಳೆರಾಯನನ್ನು ಪ್ರಾರ್ಥಿಸುತ್ತಾ ಹೇಳುತ್ತಾರೆ.

ಮೂಡಲಲ್ಲಿ ಸುರಿಯುತ್ತಿರುವ ಸೋನೆಮಳೆ ಮುತ್ತಿನ ಮಳೆ ಸುರಿಯುತ್ತಿರುವಂತೆ ಕಾಣಿಸುತ್ತಿದೆ.ಬೆಟ್ಟದ ಮೇಲೆ ಭೈರವನಿದ್ದಾನೆ ಅಲ್ಲಿ ಮಳೆ ಜಗ್ಗಿಸಿ ಹುಯ್ಯಬೇಕು ಎಂದು ರೈತನು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

3. **"ಸಾವಿರಾರು ಕೆರೆ ತುಂಬಿ"**

ಈ ವಾಕ್ಯವನ್ನು **'ಜಾನಪದ'** ಎಂಬ ಜನಪದಗೀತೆಯಿಂದ ಆರಿಸಲಾಗಿದೆ.

ರೈತರು ಮಳೆರಾಯನನ್ನು ಪ್ರಾರ್ಥಿಸುತ್ತಾ ಹೇಳುವ ಮಾತು, ಸ್ವಾತಿಯ ಮಳೆ ಸುರಿದು ಸಾವಿರಾರು ಕೆರೆ ತುಂಬಿವೆ. ಈ ಕೆರೆಯಲ್ಲಿರುವ ಕುಚ್ಚಲು ಮೀನುಗಳು ತಮ್ಮನ್ನು ಹಿಡಿಯಲು ಬಂದವರ ಮುಂಗೈ ನೋಡಿ ನಗುತ್ತಿವೆ ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಕೊಟ್ಟಿರುವ ಪ್ರಶ್ನೆಗಳಿಗೆ 5–6 ವಾಕ್ಯಗಳಲ್ಲಿ ಉತ್ತರಿಸಿ.**

## ಗದ್ಯ – 1.

**ಲಾಕಪ್ಪಿನಲ್ಲಿ ಒಂದು ರಾತ್ರಿ** **ಲೇ.ಗೊ.ರಾ. ಅಯ್ಯಂಗಾರ್**

1. **ಲೇಖಕರು ಮಿನಿಪೋಲಿಸ್ ನಗರದಲ್ಲಿ ಸ್ನೇಹಿತನನ್ನು ನೋಡಲು ಹೋದಾಗ ಎದುರಿಸಿದ ಸಮಸ್ಯೆಗಳಾವುವು?**

ಲೇಖಕರು ಮಿನಿಪೋಲಿಸ್ ನಗರಕ್ಕೆ ಒಬ್ಬ ಸ್ನೇಹಿತನನ್ನು ನೋಡಲು ಹೋಗಿದ್ದರು.ಆದರೆ ಅವರ ಮಿತ್ರ ಅಲ್ಲಿರಲಿಲ್ಲ. ಅವರ ಪರಿಚಿತರೊಬ್ಬರು ಸಿಕ್ಕಿ ಅವರನ್ನು ಮೋಟಾರಿನಲ್ಲಿ ಕೂರಿಸಿಕೊಂಡು ತಮ್ಮ ಕೆಲಸದ ಮೇಲೆ ಹೊರಟರು.ಲೇಖಕರು ದಾರಿಯಿಲ್ಲಿ ಒಂದೆಡೆ ಇಳಿದು ಅದೇ ದಾರಿಯಲ್ಲಿ ಹಿಂದಿರುಗಿ ಬರುವಾಗ ತಮ್ಮನ್ನು ಮತ್ತೆ ಕರೆದುಕೊಂಡು ಹೋಗಲು ಹೇಳಿದ್ದರು.ದೀಪ ಹೊತ್ತಿದ ಮೇಲೆ ಅವುಗಳನ್ನು ನೋಡುತ್ತಾ ತಿರುಗಿ ದಾರಿ ತಪ್ಪಿತು, ಮಿತ್ರರು ಬಂದುಕರೆದುಕೊಂಡು ಹೋಗಲು ಗೊತ್ತು ಮಾಡಿದ್ದ ಸ್ಥಳ ಸಿಕ್ಕಲಿಲ್ಲ.  ಹಾಗೆ ತಿರುಗಾಟದಲ್ಲಿ ರಾತ್ರಿ 9 ಗಂಟೆ ಆಗಿ ಹೋಯಿತು.  ಅವರ ಜೇಬಿನಲ್ಲಿ ಒಂದು ರಿಟರ್ನ್ ಟಿಕೆಟ್ ಮತ್ತು 2 ಡಾಲರ್ ಮಾತ್ರ ಇತ್ತು.ಅವರ ಬಳಿ ಶೀತ ತಡೆಯಲು ಬೆಚ್ಚಗಿನ ಬಟ್ಟೆಯು ಇರಲಿಲ್ಲ.ದಾರಿ ತಪ್ಪಿ ತಿರುಗಿದ ಕಾರಣ ಮಿತ್ರನು ಸಿಗಲಿಲ್ಲ ಅವರ ವಿಳಾಸವು ಇರಲಿಲ್ಲ.  ರಾತ್ರಿ ಎಲ್ಲಿ ಹೇಗೆ ಕಳೆಯಬೇಕು ಎಂಬವುದೇ ದೊಡ್ಡ ಸಮಸ್ಯೆಯಾಯಿತು.

2. **ಪೋಲಿಸಿನವನು ಲೇಖಕರನ್ನು ಹೇಗೆ ಉಪಚರಿಸಿದನು?**

ಪೋಲಿಸಿನವನು ಲೇಖಕರ ಸಮಸ್ಯೆಯನ್ನು ಅರಿತನು.ಈಗ ನಾನು ನಿಮ್ಮನ್ನು ಕೈಬಿಡುವಂತಿಲ್ಲ "ನನ್ನ ಮನೆಗೆ ಹೋಗೋಣ ನಡೆಯಿರಿ" ಎಂದು ಹೇಳಿದನು.ಅಲ್ಲಿ ಅವರಿಗೆ ತಿನ್ನಲು ಬ್ರೆಡ್, ಹಾಲು ಹಣ್ಣು ಬಿಸ್ಕತ್ ಕೊಟ್ಟು ಉಪಚರಿಸಿದನು.ನಂತರ ಮನೆಯ ಹಾಸಿಗೆ ಅನೇಕ ದಿನಗಳಿಂದ ಉಪಯೋಗಿಸಿರದ ಕಾರಣ ಧೂಳು ತುಂಬಿದೆ ಪಕ್ಕದಲ್ಲೆ ನನ್ನ ವಶದಲ್ಲಿ ಒಂದು ಲಾಕಪ್ ಇದೆ.ಗಾಳಿ, ಬೆಳಕು, ಸ್ವಚ್ಛವಾದ ಹಾಸಿಗೆ ಕ್ರಿಮಿನಾಶಕ ಸಾರಣೆ ಆಗಿದ್ದು, ಮಲಗಲು ಯೋಗ್ಯವಾಗಿದೆ.  ಅಲ್ಲಿ ನಿಮಗೆ ಸೊಗಸಾದ ನಿದ್ರೆ ಬರುತ್ತೆ ಎಂದು ಹೇಳಿದನು  ಹೀಗೆ ಪೋಲಿಸಿನವನು ಲೇಖಕರನ್ನು ಉಪಚರಿಸಿದನು.

## ಪದ್ಯ – 2.

**ಕೋಗಿಲೆ** **ಚೆನ್ನವೀರಕಣವಿ**

1. **ಕೋಗಿಲೆ ಪದ್ಯದ ಸಾರಾಂಶವನ್ನು ಏಳೆಂಟು ವಾಕ್ಯಗಳಲ್ಲಿ ವಿವರಿಸಿ.**

ವಸಂತಮಾಸದಲ್ಲಿ ಮಧುರ ಕಂಠದಲ್ಲಿ ಹಾಡುವ ಪಕ್ಷಿ ಕೋಗಿಲೆ. ಕವಿ ಕೋಗಿಲೆಯ ಮಧುರಗಾನ ಕೇಳಿ ಕೋಗಿಲೆಯ ಗಾನ ಈಗ ತಾನೇ ಕೇಳಿಬಂದಿದೆ ಕೋಗಿಲೆಯ ಗಾನದಿಂದ ಜಗತ್ತಿನಲ್ಲಿ ಸಂತೋಷ ತುಂಬಿದೆ.ವಸಂತಮಾಸದಲ್ಲಿ ಮಾವಿನ ಮರ ಚಿಗುರಿ ಕೆಂಪು ಚಿಗುರು ಮತ್ತು ಸುವಾಸನಾ ಭರಿತ ಹೂಗಳಿಂದ ಕೂಡಿದೆ ಹೀಗೆ ಚಿಗುರಿ ಕಂಗೊಳಿಸುತ್ತಿರುವ ಮರದ ಮೇಲೆ ಕುಳಿತು ಕೋಗಿಲೆ ಎಲ್ಲವನ್ನು ಮರೆತು ಹಾಡುತ್ತಿದೆ.ಕೋಗಿಲೆಯ ಹಾಡನ್ನು ಕೇಳಿ ಭಾವನೆಗಳು ಮೌನತಾಳಿ ಮೂಕವಾಗಿವೆ. ಭೂಲೋಕವನ್ನೇ ಸ್ವರ್ಗವನ್ನಾಗಿ ಮಾಡಿದೆ.ಕೋಗಿಲೆಯ ಮಧುರಗಾನ ಕೇಳಿ ಎದೆಯು ತಾಳ ಹಿಡಿದು ಕುಣಿಯುತ್ತಿರುವಂತಿದೆ.ಎಲ್ಲೆಲ್ಲೂ ವಿವಿಧ ನಾದಗಳ ಅಲೆಯನ್ನು ಹೊಮ್ಮಿಸುವುದರಿಂದ ಮನಸ್ಸು ರಸದ ಕಡಲಾಗಿದೆ. ಹೀಗೆ ಗಾನದಿಂದ ಮನಸ್ಸಿಗೆ ಮುದ ನೀಡುವ ನೀನು ಮೌನಧ್ಯಾನ ಮಾಡುವುದು ನಿನಗೆ ತಕ್ಕುದಲ್ಲ ಆದ್ದರಿಂದ ಜಾಣ ಕೋಗಿಲೆ ಮಧುರವಾಗಿ ಹಾಡಿ ಕಿವಿಗೆ ಇಂಪನ್ನು ನೀಡು ಎಂದು ಕೋಗಿಲೆಗೆ ಅರಿಕೆ ಮಾಡಿಕೊಳ್ಳುತ್ತಿದ್ದಾರೆ.

## ಗದ್ಯ – 3.

**ಕರ್ನಾಟಕತ್ವ** **ಜೆ.ಪಿ.ರಾಜರತ್ನಂ**

1. **ಕರ್ನಾಟಕವನ್ನು ಅನ್ಯೋನ್ಯ ಮತ್ತು ಸೋದರಿಕೆಯ ರಾಜ್ಯವಾಗಿ ಮಾಡಲು ನಾವು ಏನನ್ನು ಮಾಡಬೇಕು?**

ನೃಪತುಂಗ ಚಕ್ರವರ್ತಿಯ **'ಅಷ್ಟದಶಾಕ್ಷರೀ'**ಮಂತ್ರದ ಅರ್ಥವನ್ನು ನಾವು ಪರಿಭಾವಿಸಬೇಕು.ಅದಕ್ಕೆ ತಕ್ಕ ಹಾಗೆ ನಾವು ಮಾಡುವ ಕೆಲಸ, ಆಡುವ ಮಾತು ರೀತಿ, ನೀತಿ ಬೆಳೆಸಿಕೊಳ್ಳಬೇಕು.ಇಲ್ಲದೆ ಹೋದರೆ, ನಮ್ಮ ರಾಜ್ಯ ಉದಯವಾಗಿ ಎಷ್ಟು ವರ್ಷ ಆದರೂ ಒಂದೇ. "ಕರ್ನಾಟಕ" ಎಂದು ಹೆಸರಿಟ್ಟರೂ ಒಂದೇ ಬೇರೆ ಏನೆ ಹೆಸರಿಟ್ಟರೂ ಒಂದೇ  ಹಿಂದಿನ ಜನ ತಮ್ಮ ಅನನ್ಯ ಗುಣದಿಂದ ರಾಜ್ಯವನ್ನು ದೊಡ್ಡದೆನಿಸಿದರು.  ಅಂಥ ಪ್ರದೇಶವನ್ನು ಪಿತ್ರಾರ್ಜಿತವಾಗಿ ಪಡೆದಿರುವ ನಾವು ಅವರಂತೆ ದೊಡ್ಡ ಗುಣಗಳನ್ನು ಬೆಳೆಸಿಕೊಳ್ಳಬೇಕು.  ಆಗ ಮಾತ್ರ ಕರ್ನಾಟಕದ ಪ್ರಜೆಗಳೆಂಬ ಹೆಸರಿಗೆ ಪಾತ್ರರಾಗುತ್ತೇವೆ ಅಲ್ಲದೆ 'ಕರ್ನಾಟಕತ್ವ' ದೊಡ್ಡದು ಎಂಬುದನ್ನು ನೆನಪಿಡಬೇಕು.

2. **ಕರ್ನಾಟಕತ್ವದ ಲಕ್ಷಣಗಳನ್ನು ವಿವರಿಸಿ.**

ಕರ್ನಾಟಕತ್ವದ ಮೊದಲ ಗುಣ 'ಅಭಿಮಾನ' ಇದು ನಮ್ಮ ಕಪ್ಪೆ ಅರೆಭಟ್ಟನ ಶಾಸನದಲ್ಲಿ ಕೊರೆದ ಅಕ್ಷರವಾಗಿದೆ. "ತೇಜಸ್ವಿಯಾದವನಿಗೆ ಮಾನಭಂಗಕ್ಕಿಂತ ಮರಣವೇ ಮೇಲುಏಕೆಂದರೆ, ಮರಣವೆಂಬುದು ಒಂದೇ ಬಾರಿಗೆ ಬರುವ ಸಾವಾದರೆ, ಮಾನಭಂಗವು ಕ್ಷಣಕ್ಷಣಕ್ಕೂ ಉಂಟಾಗುವ ಸಾವು" ಇನ್ನು ಎರಡನೇ ಗುಣ, ಕರ್ನಾಟಕವು "ವಸುದಾವಲಯ ವಿಲೀನ ವಿಶದ ವಿಷಯ ವಿಶೇಷಂ!" ಈ ನಾಡಿನ ಜನ ತಾವು ಸುತ್ತಿನ ಜನರೊಡನೆ ಹೊಂದಿಕೊಂಡು ಒಂದಾಗಿ

ಹೋದರೂ ತಮ್ಮ ವೈಶಿಷ್ಟ್ಯವನ್ನು ಕಳೆದುಕೊಂಡವರಲ್ಲ. ಮತ್ತೆ ಮೂರನೆ ಗುಣ: "ಇಲ್ಲಿನ ಜನ ನಿರ್ಮತ್ಸರು ಅಂದರೆ, ಅಸೂಯೆ ಇಲ್ಲದವರು. ಕರ್ನಾಟಕದ ಮತ್ತೊಂದು ವಿಶಿಷ್ಟ ಗುಣವೆಂದರೆ, ಇಲ್ಲಿಯ ಜನರು 'ಭಾಷಾ ಸಾಮರಸ್ಯ ಹೊಂದಿದವರು.

**ಪದ್ಯ – 4**

**ಒಂದೇ ಭೂಮಿತಾಯ ಕುಡಿಗಳು** **ಕೆ.ಎಸ್. ನಿಸಾರ್ ಅಹ್ಮದ್**

**1. ಒಂದೇ (ಭೂಮಿತಾಯಿಯ ಕುಡಿಗಳು) ಪದ್ಯದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.**

ಕವಿ ನಿಸಾರ್ ಅಹಮದ್ ಅವರು ನಾವು ನೀವು ಅವರು ಇವರು ಎಲ್ಲರೂ ಒಂದೇ ಬಡವ ಬಲ್ಲಿದ ಮೇಲು ಕೀಳು ಎಂಬ ಭೇದ ಭಾವ ಮಾಡದೆ ನಾವೆಲ್ಲ ಒಂದಾಗಿ ಬಾಳಬೇಕು ಎಂದಿದ್ದಾರೆ.ಜನರ ಸ್ವಭಾವ ಚಹರೆ ಬೇರೆ ಬೇರೆಯಾಗಿದ್ದರೂ ಭಾರತಾಂಬೆಯ ಮಕ್ಕಳೆಲ್ಲರೂ ಒಂದೇ. ಕಳಸ, ಶಿಲುಬೆ, ಬಿಳಿ ಮಿನಾರ ಹೀಗೆ ಪೂಜಾ ಸ್ಥಳಗಳು ಬೇರೆಬೇರೆಯಾದರೂ ಎಲ್ಲ ಧರ್ಮದ ಉಸಿರು ಒಂದೇ.ನಾವೆಲ್ಲರು ಒಂದಾಗಿ ಬಾಳಬೇಕು ಆಂಗ್ಲರಾಗಲಿ, ಆಫ್ರಿಕನ್ನರಾಗಲಿ, ಅವರ ಮೈಯಲ್ಲಿ ಹರಿಯುತ್ತಿರುವ ರಕ್ತ ಒಂದೇ ಅಕ್ಕಿ, ರಾಗಿ, ಆಹಾರ ಪದಾರ್ಥಗಳು ಬೇರೆಬೇರಯಾಗಿದ್ದರೂ ಅವುಗಳನ್ನು ಬೆಳೆಯುವ ಹುಲ್ಲಿನ ಬಣ್ಣ ಒಂದೇ.ಹೀಗೆ ಜಗತ್ತಿನ ಒಂದೊಂದು ಭಾಗದಲ್ಲೂ ಒಂದೊಂದು ರೀತಿಯ ಆಚಾರ ವಿಚಾರ ಬೇರೆಬೇರೆಯಾದರೂ ಮಾನವರೆಲ್ಲರೂ ಒಂದೇ.ಬಾಣ, ಬಿರುಸು, ಕುಂಡ, ಹಣತೆ ಇವೆಲ್ಲ ಬೆಳಕಿನ ಮೂಲಗಳು ಆದರೆ ಅವುಗಳಲ್ಲಿರುವ ಬೆಳಕಿನ ಸತ್ವ ಒಂದೇ ಆಗಿದೆ.ಕಂದ, ವೃತ್ತ, ತ್ರಿಪದಿ, ವಚನ ಹೀಗೆ ಸಾಹಿತ್ಯ ಪ್ರಕಾರ ಬೇರೆಬೇರೆಯಾದರೂ ರಸಕವಿತ್ವ ಒಂದೇ.ಕರ್ನಾಟಕ, ವಂಗ, ಆಂಧ್ರ, ಬೇರೆಬೇರೆಯಾದರೂ ಭಾರತೀಯರೆಲ್ಲ ಒಂದೇ.ಪೂರ್ವ, ಉತ್ತರ, ಪಡುವಣ, ತೆಂಕಣ ಬೇರೆಬೇರೆ ದಿಕ್ಕಿನಲ್ಲಿದ್ದರೂ ಬೀಸುವ ಗಾಳಿ ಮುಗಿಲು ಒಂದೇ ಆಗಿದೆ.ಆದ್ದರಿಂದ ಭೂಮಿತಾಯಿಯ ಮಕ್ಕಳಾದ ನಾವು ಒಂದಾಗಿ ಬಾಳಬೇಕು ಎಂಬ ಆಶಯವನ್ನು ಕವಿಗಳು ವ್ಯಕ್ತಪಡಿಸುತ್ತಾರೆ.

**ಗದ್ಯ– 5.**

**ಸ್ಪಿನ್ ಮಾಂತ್ರಿಕ ಅನಿಲ್ ಕುಂಬ್ಳೆ** **ಸಂಪಾದಿತ**

**1. ಆಟಕ್ಕೂ ಮತ್ತು ತಂಡಕ್ಕೂ ಕುಂಬ್ಳೆ ಅವರ ಬದ್ಧತೆ ನೂರಕ್ಕೆ ನೂರು ವಿವರಿಸಿ.**

ಅನಿಲ್ ಕುಂಬ್ಳೆಯವರು ಜಗತ್ತಿನ ಶ್ರೇಷ್ಠ ಸ್ಪಿನ್ ಬೌಲರ್‌ಗಗಳಲ್ಲಿ ಒಬ್ಬರು.ಸ್ಪಿನ್ ಮಾಂತ್ರಿಕನಾಗಿಯೂ ಇವರು ಮಧ್ಯಮ ವೇಗದ ಚೆಂಡುಗಳನ್ನು ಎಸೆದ ದಾಂಡಿಗರ ದಿಕ್ಕು ತಪ್ಪಿಸಬಲ್ಲರು.ಅವರ ಚೆಂಡುಗಳು ಎದುರಾಳಿ ದಾಂಡಿಗರಿಗೆ ಸಿಂಹಸ್ವಪ್ನವಂತೂ ಆಗಿರುತ್ತಿದ್ದವು.ವೆಸ್ಟ್ ಇಂಡಿಸ್ ವಿರುದ್ಧ ಕಲ್ಕತ್ತದ ಈಡನ್ ಗಾರ್ಡನ್ಸ್ ಮೈದಾನದಲ್ಲಿ ನಡೆದ ರಿಲಯನ್ಸ್ ಕಪ್ ಅಂತಿಮ ಪಂದ್ಯದಲ್ಲಿ 10 ಓವರಿನಲ್ಲಿ 13 ರನ್ ನೀಡಿ 6 ವಿಕೆಟ್ ಪಡೆದ ಅವರ ಸಾಧನೆ ಅದ್ಭುತ.ವೆಸ್ಟ್ ಇಂಡೀಸಿನಲ್ಲಿ ವೇಗದ ಬೌಲರ್ ಒಬ್ಬರ ಚೆಂಡು ಕುಂಬ್ಳೆಯವರ ದವಡೆಗೆ ಬಡಿದು ಗಾಯವಾಗಿದ್ದರೂ, ಚಿಕಿತ್ಸೆ ಪಡೆದು ಬ್ರಿಯನ್‌ಲಾರಾ ಅವರ ವಿಕೆಟ್ ಪಡೆದದ್ದು ಅವಿಸ್ಮರಣೀಯ.ಈ ರೀತಿ ಅನಿಲ್ ಕುಂಬ್ಳೆಯವರು ತಂಡಕ್ಕೂ ಮತ್ತು ಆಟಕ್ಕೂ ನೂರಕ್ಕೆ ನೂರರಷ್ಟು ಬದ್ಧತೆಯನ್ನು ನೀಡುತ್ತಿದ್ದರು.

**2. ಕುಂಬ್ಳೆಯವರ ಸಾಧನೆಯನ್ನು ಕ್ರೀಡಾರಂಗ ಮತ್ತು ಭಾರತೀಯ ಸರ್ಕಾರ ಹೇಗೆ ಗೌರವಿಸಿವೆ? ವಿವರಿಸಿ.**

ಕುಂಬ್ಳೆಯವರಿಗೆ ಭಾರತ ಸರ್ಕಾರ 1995ರಲ್ಲಿ ಅರ್ಜುನ ಪ್ರಶಸ್ತಿಯನ್ನು ನೀಡಿತು.2005ರಲ್ಲಿ ಪದ್ಮಶ್ರೀ ಪ್ರಶಸ್ತಿಯನ್ನು ಕೊಟ್ಟು ಗೌರವಿಸಿತು.ಬೆಂಗಳೂರಿನ ಮಹಾತ್ಮಗಾಂಧೀ ರಸ್ತೆಯ ವೃತ್ತವೊಂದಕ್ಕೆ ಕುಂಬ್ಳೆಯವರ ಹೆಸರನ್ನು ಇಡಲಾಗಿದೆ.1996ರಲ್ಲಿ ಲಂಡನ್ ವಿಸ್ಡನ್ ಕ್ರಿಕೆಟರ್ಸ್ ಪ್ರಶಸ್ತಿ ಲಭಿಸಿದೆ.ಐ.ಸಿ.ಸಿ. ಕುಂಬ್ಳೆಯವರನ್ನು ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿಯ ಅಧ್ಯಕ್ಷರನ್ನಾಗಿ ನೇಮಿಸಿದೆ.ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ಚುನಾಯಿತ ಅಧ್ಯಕ್ಷರಾಗಿ ನೇಮಕವಾದರು.ಜೊತೆಗೆ 2013ರಲ್ಲಿ ಮೈಸೂರು ವಿಶ್ವವಿದ್ಯಾಲಯ ತನ್ನ 93ನೇ ಘಟಿಕೋತ್ಸವದಲ್ಲಿ ಗೌರವ ಡಾಕ್ಟರೇಟ್ ಪದವಿ ನೀಡಿ ಗೌರವಿಸಿದೆ. ಈ ರೀತಿ ಇವರ ಸಾಧನೆಗೆ ಅನೇಕ ಗೌರವ ಪ್ರಶಸ್ತಿಗಳು ಲಭಿಸಿವೆ.

**ಪದ್ಯ – 6**

**ಮಾಯಾದೀಪ** **ಬಿ.ಆರ್. ಲಕ್ಷ್ಮಣರಾವ್**

*****

**ಗದ್ಯಪಾಠ – 7**

**ಧ್ವಜ ರಕ್ಷಣೆ (ನಾಟಕ)** **ಲೇ. ಎಸ್. ಆರ್.ರೋಹಿಡೇಕರ್**

1. **ರಾಮಸಿಂಗನ ಛಲ ಯಾವುದಕ್ಕಾಗಿ? ಅದನ್ನು ಅವನು ಹೇಗೆ ಸಾಧಿಸಿದನು? ಅಥವಾ ರಾಮ್‌ಸಿಂಗನ ಪಾತ್ರದ ಕುರಿತು ಬರೆಯಿರಿ.**

ರಾಮಸಿಂಗನ ಛಲ ಬ್ರಿಟಿಷರನ್ನು ಭಾರತದಿಂದ ತೊಲಗಿಸಿ ಭಾರತವನ್ನು ಸ್ವತಂತ್ರಗೊಳಿಸುವುದು. ಇದಕ್ಕಾಗಿ **'ಬ್ರಿಟಿಷರೆ,ಭಾರತ ಬಿಟ್ಟು ತೊಲಗಿರಿ'** ಎಂದು ಸಾರಲು ಅಂದು ಸಭೆಯನ್ನು ಸೇರಿಸುವ ಹಟ ಹಿಡಿದು ಬಂದಿರುತ್ತಾನೆ. ಆದರೆ ಅಲ್ಲಿ ಸಭೆ ಸೇರಬಾರದೆಂದು ಬ್ರಿಟಿಷ್ ಸಿಪಾಯಿಗಳು ಡಂಗೂರ ಸಾರಿದ್ದರು. ರಾಮಸಿಂಗ್ ಛಲವಿಂದ ಅದನ್ನು ವಿರೋಧಿಸಿ ಅಲ್ಲಿ ಜನರನ್ನು ಸೇರಿಸಿ ಜಯಘೋಷ ಮಾಡಲು ಮುಂದಾಗುತ್ತಾನೆ. ಊರಿಗೆ ಊರೇ ಅಲ್ಲಿ ಸೇರುತ್ತದೆ ಸತ್ಯಾಗ್ರಹಿಗಳೆಲ್ಲ 'ಜಯಘೋಷ' ಮಾಡಲಾರಂಭಿಸುತ್ತಾರೆ.ಅದನ್ನು ಹತ್ತಿಕ್ಕಲು ಬ್ರಿಟಿಷ್ ಸಿಪಾಯಿಗಳು 'ಕುಲಕರ್ಣಿ' ಎಂಬ ಫೌಜುದಾರನು ಬರುತ್ತಾರೆ.ಕುಲಕರ್ಣಿಗೂ ರಾಮ್‌ಸಿಂಗ್‌ನಿಗೂ ಮಾತಿನ ಚಕಮಕಿ ನಡೆಯುತ್ತದೆ.ಅಲ್ಲಿಂದ ಚದುರಿ ಹೋಗುವಂತೆ ಕುಲಕರ್ಣಿ ಹೇಳಿದರೂ ಕೇಳದಿದ್ದ ಕಾರಣ 'ನಾಯಕಮಣಿಯಾಗಿದ್ದ ರಾಮಸಿಂಗ್‌ನನ್ನು ಗುಂಡಿಕ್ಕಿ ಕೊಲ್ಲುತ್ತಾನೆ.ತನ್ನ ಪ್ರಾಣ ಹೋದರೂ ಅಲ್ಲಿಂದ ಕದಲುವುದಿಲ್ಲವೆಂದ ರಾಮಸಿಂಗ್ ತನ್ನ ಛಲ ಸಾಧಿಸಿದನು.

2. **ಮಗನಿಗೆ ಗುಂಡಿನೇಟು ತಗುಲಿದ್ದರೂ ತುಳಜಾಬಾಯಿ ಅವನನ್ನು ಸಮಾದಾನ ಮಾಡಲು ಏನನ್ನು ತಂದಿದ್ದಳು ಏಕೆ? ಅಥವಾ ತುಳಜಾಬಾಯಿಯ ಪಾತ್ರದ ಕುರಿತು ಬರೆಯಿರಿ.**

ತುಳಜಾಬಾಯಿಯು ರಾಮಸಿಂಗ್‌ನ ತಾಯಿ. ತನ್ನ ಗಂಡ ಒಂದು ವರ್ಷದ ಹಿಂದೆ ಸ್ವಾತಂತ್ರ್ಯ ಹೋರಾಟದಲ್ಲಿ ಮಡಿದಿದ್ದರೂ ಸಹ ತನ್ನ ಮಗನನ್ನು ಹೋರಾಟದಲ್ಲಿ ಭಾಗವಹಿಸಲು ಒಪ್ಪಿ ಪ್ರೋತ್ಸಾಹಿಸುತ್ತಾಳೆ.1942ರ ಬ್ರಿಟಿಷರೇ 'ಭಾರತ ಬಿಟ್ಟು ತೊಲಗಿ ಚಲೇಜಾವ್' ಚಳುವಳಿ ಅತ್ಯಂತ ತೀವ್ರ ಸ್ವರೂಪವಾಗಿ ಹರಡುತ್ತದೆ.ಮೋಹನಪುರ ಎಂಬಲ್ಲಿ ಚಳುವಳಿ ಕಾವೇರುತ್ತದೆ.ರಾಮ್‌ಸಿಂಗ್ ಬ್ರಿಟಿಷ್ ಸಿಪಾಯಿಗಳು ಸಭೆ ಸೇರಬಾರದೆಂದು ಡಂಗುರ ಸಾರಿದ್ದರು.ಸಭೆ ಸೇರಿಸಿ ಭಾರತ ಬಿಟ್ಟು ತೊಲಗಿ ಎಂದು ಘೋಷಿಸುತ್ತಾನೆ. ಜನರು ಸೇರಿ ಜಯಘೋಷ ಮಾಡಲು ಪ್ರಾರಂಭಿಸುತ್ತಾರೆ.ಪೋಲಿಸ್ ಅಧಿಕಾರಿ ಕುಲಕರ್ಣಿಯ ಗುಂಡಿಗೆ ಬಲಿಯಾಗುತ್ತಾನೆ.ತುಳಜಾಬಾಯಿ ಮಗನ ಸಾವಿನಿಂದ ಹತಾಶಳಾಗಿದ್ದರೂ ಮತ್ತೊಂದು ಧ್ವಜವನ್ನು ಅವನ ಕೈಗೆ ಕೊಡಲು ಮುಂದಾಗುತ್ತಾಳೆ ಅಲ್ಲದೆ ಭಾರತ ಧ್ವಜ ರಕ್ಷಣೆಗಾಗಿ ತಾನು ಪ್ರಾಣ ಕೊಡಲು ಸಿದ್ಧಳಾಗುತ್ತಾಳೆ.ಹೀಗೆ ಅವಳಿಗೆ ತನ್ನ ಮಗನಿಗಿಂತ ದೇಶವೇ ಹೆಚ್ಚು ಎಂಬ ಅಭಿಮಾನವಿತ್ತು.

**ಡಿ.ಎಸ್.ಪಿ.ಟಿಪ್ಪಣಿ**

ಮೋಹಪುರವೆಂಬ ಊರಿನಲ್ಲಿ 'ಬ್ರಿಟಿಷರೇ ಭಾರತ ಬಿಟ್ಟು ತೊಲಗಿ' ಚಳುವಳಿಯ ಕಾವು ಏರಿರುತ್ತದೆ.ಅಲ್ಲಿಯ ಪರಿಸ್ಥಿತಿಯನ್ನು ನಿಯಂತ್ರಿಸಲು ಡಿ.ಎಸ್.ಪಿ ಅವರು ತಮ್ಮ ಇಲಾಖೆಯ ನಿಷ್ಠಾವಂತ ಅಧಿಕಾರಿ ಮಿ॥ ಕುಲಕರ್ಣಿಯವರನ್ನು ಕರ್ತವ್ಯದ ಮೇಲೆ ಹೋಗುವಂತೆ ಆದೇಶಿಸಿದ್ದಾರೆ.ಅವರ ಆದೇಶ ಪಾಲನೆ ಮಾಡಲು ಹೊರಟ ಮಿ॥ ಕುಲಕರ್ಣಿ ತನ್ನ ದೇಶೀಯರನ್ನೆ ಹತ್ತಿಕ್ಕಲು ಮುಂದಾಗಿ ತನ್ನ ಕರ್ತವ್ಯ ನಿಷ್ಠೆ ಮೆರೆಯುತ್ತಾನೆ.ರಾಮಸಿಂಗ್‌ನನ್ನು ಬೆದರಿಸಿ, ಚಳುವಳಿ ಮಾಡದಂತೆ ಸಭೆ ಸೇರದಂತೆ ಹಿಂದಿರುಗಿ ಮನೆ ಸೇರಿಕೊಳ್ಳುವಂತೆ ಎಚ್ಚರಿಸುತ್ತಾನೆ. ಯಾವುದೇ ಬೆದರಿಕೆಗೆ ಬಗ್ಗದ ರಾಮ್‌ಸಿಂಗ್‌ನನ್ನು ಒಬ್ಬ ಉದ್ಧಟನೆಂದು ಜರಿದು ಕೊನೆಗೆ ಗುಂಡಿಕ್ಕಿ ಕೊಲ್ಲುತ್ತಾನೆ. ಸ್ವದೇಶಿಯರಿಂದ 'ಧಿಕ್ಕಾರ'ಕ್ಕೆ ಪಾತ್ರನಾಗುತ್ತಾನೆ.

**ಪದ್ಯ – 8**

**ವಚನ – ಅಂಬಿಗರ ಚೌಡಯ್ಯ**

1. **ಅಂಬಿಗರ ಚೌಡಯ್ಯನವರ ವಚನದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ವಿವರಿಸಿ.**

ಪ್ರಸ್ತುತ ವಚನದಲ್ಲಿ ವಚನಕಾರರು ಲೋಕದ ಜನ ಪರಮಾತ್ಮನ ಚಿಂತೆ ಮಾಡದೆ ಬದುಕಿನ ಚಿಂತೆಯಲ್ಲಿ ಮುಳುಗಿರುತ್ತಾರೆ.ಎಂದು ಹೇಳುತ್ತಾ ಬಡತನದಲ್ಲಿದ್ದ ಮನುಷ್ಯನಿಗೆ ಉಣ್ಣುವ ಚಿಂತೆ.ಆಹಾರ ಸಮಸ್ಯೆ ನೀಗಿದ ಮೇಲೆ ಉಡುವ ಚಿಂತೆ ಉಡುವ ಚಿಂತೆಯ ನಂತರ ಸಂಪಾದಿಸಿ ಕೂಡಿಡುವ ಚಿಂತೆ.ಕೂಡಿಡುವ ಚಿಂತೆ ದೂರಾದೊಡನೆ ಹೆಂಡತಿ ಮಕ್ಕಳ ಚಿಂತೆ ಕಾಡುತ್ತದೆ.ಮಕ್ಕಳಾದ ನಂತರ ಬದುಕಿನಲ್ಲಿ ಎಲ್ಲಿ ಕೇಡಾಗುತ್ತದೋ ಎಂಬ ಚಿಂತೆ.ಕೇಡಾದೊಡನೆ ಮರಣದ ಚಿಂತೆಯಲ್ಲಿ ಇರುತ್ತಾನೆ.ಶಿವನ ಚಿಂತೆಯನ್ನು ಯಾರೂ ಮಾಡುತ್ತಿಲ್ಲ ಎಂದು ಅಂಬಿಗರ ಚೌಡಯ್ಯ ಜನರ ಮನಸ್ಸನ್ನು ಶಿವನೆಡೆಗೆ ತಿರುಗಿಸುವ ಹಂಬಲದಲ್ಲಿದ್ದಾರೆ.

**ಗದ್ಯ – 9**

**ಕರ್ನಾಟಕದ ವೀರ ವನಿತೆಯರು ಲೆ. ಡಾ॥ ವಿಜಯಲಕ್ಷ್ಮಿ ಬಾಳೇಕುಂದ್ರಿ**

*****

**ಪದ್ಯ – 10**

**ದಾಸರ ಪದಗಳು ಮನಃಶುದ್ಧಿ – ಪುರಂದರದಾಸರು**

1. **ಪುರಂದರದಾಸರು ತಿಳಿಸಿರುವ ಮನಸ್ಸನ್ನು ಶೋಧಿಸುವ ವಿಧಾನಗಳನ್ನು ತಿಳಿಸಿ.**

ಪುರಂದರದಾಸರು ನಾವು ನಿತ್ಯವೂ ಮನಸ್ಸನ್ನು ಶೋಧಿಸಬೇಕು ಪ್ರತಿದಿನ ಮಾಡುವ ಪಾಪಪುಣ್ಯಗಳ ಲೆಕ್ಕಾಚಾರವಿಡಬೇಕು.ನಾವು ಮಾಡಿದ ತಪ್ಪುಗಳನ್ನು ಅರಿತು ಒಳ್ಳೆಯ ಮಾರ್ಗದಲ್ಲಿ ನಡೆಯಬೇಕು.ಧರ್ಮ ಅಧರ್ಮಗಳನ್ನು ವಿಂಗಡಿಸಬೇಕು.ಅಂದರೆ ನಾವು ಮಾಡುವ ಒಳ್ಳೆಯ ಕೆಲಸ ಮತ್ತು ಕೆಟ್ಟ ಕೆಲಸಗಳನ್ನು ವಿಂಗಡಿಸಿ ಕೆಟ್ಟ ನಡೆಯ ಕಾರಣಗಳನ್ನು ಹುಡುಕಿ ನಿರ್ನಾಮ ಮಾಡಬೇಕು.ಶುದ್ಧವಾದ ನಡವಳಿಕೆಯಿಂದ ಉತ್ತಮವಾದ ಜೀವನ ನಡೆಸಿ ಸದಾ ಕಾಲ ಪರಬ್ರಹ್ಮನನ್ನು ಭಜಿಸಿದರೆ ನಮ್ಮ ಮನಸ್ಸು ಶುದ್ಧವಾಗಿರುತ್ತದೆ ಎಂದು ಹೇಳಿದ್ದಾರೆ.

2. **"ಕೊನೆಗೆ ನಿನ್ನೊಳು ನೀ ಜಾಣೋ" ಎಂಬ ಮಾತನ್ನು ಈ ಕೀರ್ತನೆಯ ಬೆಳಕಿನಲ್ಲಿ ಚರ್ಚಿಸಿ.**

ಪುರಂದರದಾಸರು ನಾವು ನಿತ್ಯ ನಮ್ಮ ಮನಸ್ಸನ್ನು ಶೋಧಿಸಬೇಕು ಪಾಪ ಪುಣ್ಯಗಳ ಲೆಕ್ಕವನ್ನು ಅಂದರೆ ಒಳ್ಳೆಯ ಕೆಟ್ಟ ಕೆಲಸಗಳನ್ನುಅರಿಯಬೇಕು.ಪ್ರತಿದಿನ ನಾವು ಮಾಡುವ ಧರ್ಮ ಅಧರ್ಮ ಕಾರ್ಯಗಳನ್ನು ವಿಂಗಡಿಸಿ ಅಧರ್ಮದ ಬೇರನ್ನು ಕತ್ತರಿಸಿ ಅಂದರೆ ಕೆಟ್ಟ ನಡತೆಗೆ ಕಾರಣಗಳನ್ನು ಕತ್ತರಿಸಿ ಶುದ್ಧವಾದ ನಡವಳಿಕೆಯಿಂದ ಉತ್ತಮ ಜೀವನ ಮಾಡುತ್ತಾ ಪರಬ್ರಹ್ಮನನ್ನು ಭಜಿಸಬೇಕು. ಶರೀರ ಮತ್ತು ಮನಸ್ಸಿನ ಆಸೆಗಳನ್ನು ಅಂಕೆಯಲ್ಲಿಟ್ಟುಕೊಂಡು ಪರಮಾತ್ಮನನ್ನು ಕಾಣುತ್ತಾ ನಮ್ಮ ತಪ್ಪುಗಳನ್ನು ಅರಿತು ಉತ್ತಮ ಮಾರ್ಗದಲ್ಲಿ ನಡೆದರೆ ಮಾನವನಿಗೆ ಮುಕ್ತಿ ಸುಲಭವಾಗಿ ದೊರೆಯುವುದು ಭಗವಂತ ನಂಬಿದವರಿಗೆ ಕೇಡು ಮಾಡುವುದಿಲ್ಲ. ದೇವರು ಕೆಟ್ಟವರ ಸಂಗ ಮಾಡುವುದಿಲ್ಲ ನಾವೆಲ್ಲ ನೀತಿ ಮಾರ್ಗದಲ್ಲಿ ನಡೆದರೆ ಪುರಂದರವಿಠಲ ಮುಕ್ತಿಯನ್ನು ನೀಡುವನು ಎಂದು ಹೇಳಿದ್ದಾರೆ.

## ಗದ್ಯ ಪಾಠ – 11

**ಹಾಸ್ಯಜೀವಿ ನಾ. ಕಸ್ತೂರಿ – ಅ.ರಾ. ಮಿತ್ರ**

1. **ಲೇಖಕರು ಕಸ್ತೂರಿ ಅವರ ಹಾಸ್ಯ ಪ್ರವೃತ್ತಿಯನ್ನು ಉದಾಹರಿಸುವ ಒಂದು ಸಂದರ್ಭವನ್ನು ವಿವರಿಸಿ.**

ಒಮ್ಮೆ ಕಸ್ತೂರಿಯವರು ಅನಾರೋಗ್ಯದಿಂದ ವೈದ್ಯರ ಬಳಿ ಹೋದರಂತೆ.ವೈದ್ಯರು ಮರುದಿನ ಬೆಳಿಗ್ಗೆ ಮಲಪರೀಕ್ಷೆ ಮಾಡುವುದಾಗಿ ಹೇಳಿದರಂತೆ.ಇವರು ಬೆಳಿಗ್ಗೆಒಂದುಡಬ್ಬಿಯಲ್ಲಿ ಮಲವನ್ನುಸಂಗ್ರಹಿಸಿಕೊಂಡರು.ಆದರೆ ತಮ್ಮ ಸಂಕಟವನ್ನು ತೋಡಿಕೊಂಡದ್ದು ಹೀಗೆಂದು "ನೋಡಿ ನಾನೀಗ ಮಲಪರೀಕ್ಷಗಾಗಿ ಡಬ್ಬಿ ತೆಗೆದುಕೊಂಡು ಹೋಗುತ್ತಿದ್ದೇನೆ ಆದರೆ ಅದರ ಮೇಲೆ ಕಸ್ತೂರಿ ಅಂತ ಬರೆದು ತೆಗೆದು ಕೊಂಡು ಹೋಗಬೇಕಲ್ಲ ಅದೇ ಸಂಕಟದ ವಿಷಯ" ಎಂದರಂತೆ ಸಮರ್ಥ ಹಾಸ್ಯಗಾರನ ಲಕ್ಷಣ ಇದೇ ತಾನೆ ಇದನ್ನೇ ಅವರ ಹಾಸ್ಯ ಪ್ರವೃತ್ತಿಗೆ ಉದಾಹರಿಸಲು ಸಾಕು.

2. **ಹಾಸ್ಟೆಲುಗಳ, ಕಾಲೇಜುಗಳ, ನಾಡಹಬ್ಬ ಸಮಾರಂಭಗಳಲ್ಲಿ ವಿಜೃಂಭಿಸುತ್ತ ಇದ್ದ ನಾ. ಕಸ್ತೂರಿ ಅವರನಾಲ್ಕು ನಾಟಕಗಳ ಹೆಸರುಗಳನ್ನು ತಿಳಿಸಿ.**

ಬಳಸುವ ಶಬ್ದದ ಸುತ್ತಮುತ್ತ ವಿಹಾರ ಮಾಡಿ ರೂಢಿಯ ಅರ್ಥವನ್ನು ತಿರುಚಿ ನಾನಾರ್ಥ ಸಂಪಾದನೆಗೆ ಬಳಸುವುದರಲ್ಲಿ ನಾ.ಕಸ್ತೂರಿ ನಿಸ್ಸೀಮ.ನಾ.ಕಸ್ತೂರಿ ಅಪ್ಪಟ ಕನ್ನಡಿಗನಲ್ಲದಿದ್ದರೂ ಕನ್ನಡ ಭಾಷೆಯಲ್ಲಿ ಅಪಾರ ಪಾಂಡಿತ್ಯ ಮೆರೆದ ಒಬ್ಬ ಮಲಯಾಳಿ.ಲಲಿತ ಪ್ರಬಂಧಗಳ ಮತ್ತು ಹರಟೆಗಳ ಕ್ಷೇತ್ರದಲ್ಲಿ 'ಕಸ್ತೂರಿ' ಮರೆಯಲಾಗದ ಹೆಸರು.'ಯದ್ವಾತದ್ವಾ' ಡೊಂಕುಬಾಲ' ಅಲ್ಲೋಲ ಕಲ್ಲೋಲ' ಉಪಾಯವೇದಾಂತ ಮೊದಲಾದವು.ಇವು ಹಾಸ್ಟೆಲುಗಳ ಕಾಲೇಜುಗಳ ನಾಡಹಬ್ಬ ಸಮಾರಂಭಗಳಲ್ಲಿ ಹೆಚ್ಚು ಹೆಚ್ಚು ವಿಜೃಂಭಿಸುತ್ತ ಇದ್ದ ನಾಟಕಗಳು.

3. **ಕಸ್ತೂರಿಯವರ ಪಾಠ ಟಿಪ್ಪಣಿ ಕಳೆದು ಹೋದ ಪ್ರಸಂಗ ವಿವರಿಸಿ.**

ಒಮ್ಮೆ ನಾ.ಕಸ್ತೂರಿಯವರ ನೋಟ್ಸ್ ಪುಸ್ತಕವನ್ನು ಯಾರೋ ಹುಡುಗರು ಲಪಟಾಯಿಸಿ ಬಿಟ್ಟರಂತೆ, ನೋಟ್ಸ್ ಕದ್ದರೆ ಮರುದಿನ ಅವರು ತರಗತಿಯಲ್ಲಿ ಡಿಕ್ಟೆಟ್ ಮಾಡುವಂತಿಲ್ಲವಲ್ಲ! ಈ ಹಂಚಿಕೆಯಿಂದ ಯಾರೋ ಒಬ್ಬ ಅಂತಿಮ ಬಿ.ಎ. ವಿದ್ಯಾರ್ಥಿ ಈ ಪುಸ್ತಕವನ್ನೇ ಸ್ಟಾಫ್ ರೂಮಿನಿಂದ ಎಗರಿಸಿದನಂತೆ ಇವರು ಸಂಜೆ ನೋಟ್ಸ್ ಕಳುವಾಗಿರುವ ವಿಷಯವನ್ನು ಇತರ ಅಧ್ಯಾಪಕರುಗಳಿಗೆ ಹೇಳಿ, ನಾಳೆ ಕ್ಲಾಸ್ ಏನೂ ನಿಲ್ಲುವುದಿಲ್ಲ.ಏಕೆಂದರೆ ನಾಳೆ ಬೆಳಗ್ಗೆ ಹತ್ತು ಗಂಟೆಗೆ ಅದೇ ಟೇಬಲ್ ಮೇಲೆ ನೋಟ್ಸ್ ಇಟ್ಟಿರುತ್ತಾನೆ ಎಂದು ಕಾರಣ ಆ ನೋಟ್ಸ್ ಮಲಯಾಳಿ ಭಾಷೆಯಲ್ಲಿದ್ದ ಇಂಗ್ಲೀಷ್ ನೋಟ್ಸ್.

4. **ಕಸ್ತೂರಿಯವರ ಶಬ್ದ ಸಿದ್ಧಿಯನ್ನು ಉದಾಹರಣೆ ಸಹಿತ ವಿವರಿಸಿ.**

ಕಸ್ತೂರಿಯವರ ಶಬ್ದ ಸಿದ್ಧಿ ಮಾತ್ರ ಅದ್ಭುತ. ತಾವು ಕೇಳಿದ ಶಬ್ದಕ್ಕೆ ವಿಚಿತ್ರ ಧ್ವನಿ ಸಂಚಾರಗಳನ್ನು ಹೊರಡಿಸುವ ಶಕ್ತಿ ಅವರಿಗಿತ್ತು.ಶಬ್ದ ಮೂಲದಲ್ಲೆ ವಿಷಯಗಳನ್ನು ಹರಡುವ ಅನನ್ಯ ದಾರಿ ಅವರದು. ಉದಾಹರಣೆಗೆ ವನಸ್ಪತಿ – ದನಸ್ಪತಿ ಮನಸ್ತಾಪ –ಧನಸ್ತಾಪ, ಕಳೇಬರ –ಕೊಳೆಬರ, ಶಿಶಿರಋತು –ಜ್ವರದೃತು ವನಮಾಲಿ – ಒಣಮಾಲಿ ಕಡಪಾಯಿ – ಸಾಲದಲ್ಲಿ ಮುಳುಗಿದವ ಅಗ್ರಿಮಿತ್ರ (ಪೆಟ್ರೋಲು) ಗಂಡಾಂತರ (ಗಂಡನನ್ನು ಬದಲಾಯಿಸುವಿಕೆ) ಇವೆ ಮೊದಲಾದ ಶಬ್ದ ಸೃಷ್ಟಿಯ ಚಮತ್ಕಾರಗಳನ್ನು ಗಮನಿಸಿದವರಿಗೆ ಕಸ್ತೂರಿಯವರ ಭಾಷಾ ಸಿದ್ಧಿ ಪರಿಚಿತವಾಗುತ್ತದೆ. ಅವರ ಕೆಲವು ನವೀನ ಗಾದೆಗಳು ಹೀಗಿವೆ "ಪಾಲಿಗೆ ಬಂದದ್ದು ಕೊಂಚಾಮೃತ" ಗಂಜೀಪು ಆಡೋರಿಗೆ ಗಂಜಿಯೂ ಸಿಗದು" ಇತ್ಯಾದಿ.

## ಪದ್ಯ – 12

ಜಾನಪದ – ಸಂಗ್ರಹ

## ಪ್ರಬಂಧಗಳು

### ಪರಿಸರ ಸಂರಕ್ಷಣೆ

ಪರಿಸರ ಎಂದರೆ ಮಾನವನ ಸುತ್ತಮುತ್ತಲಿರುವ ಚರಾಚರ ವಸ್ತುಗಳ ಸಂಚಿತ ರೂಪ ಎನ್ನಬಹುದು.ಮಾಲಿನ್ಯ ಎಂದರೆ ಪರಿಶುದ್ಧತೆಯನ್ನು ಕಳೆದುಕೊಳ್ಳುವುದು ಪರಿಸರ ಮಲಿನಗೊಳದಂತೆ ರಕ್ಷಿಸುವುದೇ ಪರಿಸರ ಸಂರಕ್ಷಣೆ.ಪರಿಸರ ಮಾಲಿನ್ಯಕ್ಕೆ ಕಾರಣಗಳು ಹಲವು ಅವು ಔದ್ಯಮೀಕರಣ, ವಿದ್ಯುತ್ ಶಕ್ತಿಯ ಉತ್ಪಾದನೆ, ಜನಸಂಖ್ಯಾ ಸ್ಫೋಟ, ಇತ್ಯಾದಿ.ಅಗತ್ಯ ವಸ್ತುಗಳನ್ನು ತಯಾರಿಸುವ ಕಾರ್ಖಾನೆಗಳು ಉಗುಳುವ ಹೊಗೆ, ಮತ್ತು ತ್ಯಾಜ್ಯ ವಸ್ತುಗಳು, ಗಾಳಿ ಮತ್ತು ನೀರನ್ನು ಸೇರಿ ಕಲುಷಿತವಾಗುತ್ತಿದೆ.ವಾಹನಗಳು ಉಗುಳುವ ಹೊಗೆ ವಾಯುಮಾಲಿನ್ಯವನ್ನು ಮತ್ತಷ್ಟು ಹೆಚ್ಚಿಸುತ್ತದೆ.ಜನರು ಹೊರಹಾಕುವ ತ್ಯಾಜ್ಯವಸ್ತುಗಳು ಗಣನೀಯ ಪ್ರಮಾಣದಲ್ಲಿ ಪರಿಸರವನ್ನು ಮಲಿನಗೊಳಿಸುತ್ತಿವೆ. ಪರಿಸರವನ್ನು ಸಂರಕ್ಷಿಸುವುದು ಮಾಲಿನ್ಯವನ್ನು ತಡೆಯುವುದು ಅಗತ್ಯವಾಗಿದೆ. ಈ ಕೆಳಕಂಡಂತೆ ಪರಿಹಾರ ಕಂಡುಕೊಳ್ಳಬಹದು.

1. ಪ್ರತಿಯೊಬ್ಬ ಪ್ರಜೆಯು ತನ್ನ ಪರಿಸರವನ್ನು ಶುದ್ಧವಾಗಿಟ್ಟುಕೊಳ್ಳಬೇಕು ಎಂಬ ಪ್ರಜ್ಞೆಯನ್ನು ಬೆಳೆಸಿಕೊಳ್ಳುವುದು.
2. ಪರಿಸರಮಾಲಿನ್ಯದ ದುಷ್ಪರಿಣಾಮ ಅರಿತು ಮರಗಳನ್ನು ನೆಡುವುದು.
3. ಜಲಮೂಲಗಳಿಗೆ ಕೊಳಚೆ ನೀರು ತ್ಯಾಜ್ಯವಸ್ತುಗಳು ಸೇರದಂತೆ ಎಚ್ಚರವಹಿಸುವುದು.
4. ವಾಹನಗಳ ಹಾರನ್, ಮೈಕ್, ತಮಟೆ, ಇತ್ಯಾದಿಗಳ ಅನಗತ್ಯ ಶಬ್ದಗಳನ್ನು ತಡೆಗಟ್ಟುವುದು.
5. ಜನಸಂಖ್ಯೆಯು ಹೆಚ್ಚದಂತೆ ಕ್ರಮ ಕೈಗೊಳ್ಳುವುದು.

## ರಾಷ್ಟ್ರೀಯ ಏಕತೆ/ಭಾವೈಕ್ಯ

**'ರಾಷ್ಟ್ರೀಯ ಏಕತೆ'** ಎಂದರೆ **ನಾವೆಲ್ಲರೂ ಒಂದೇ**. ನಾವೆಲ್ಲ ಭಾರತೀಯರು ಜಾತಿ, ಮತ, ಭಾಷೆ, ಉಡುಗೆ ಇವುಗಳಲ್ಲಿ ವೈವಿಧ್ಯತೆ ಇದ್ದರೂ **ನಾವೆಲ್ಲರೂ ಭಾರತಾಂಬೆಯ ಮಕ್ಕಳು**.ದೇಶದ ಒಳಿತಿಗಾಗಿ ಒಟ್ಟಾಗಿ ಶ್ರಮಿಸುವ ಮನೋಭಾವವಿರಬೇಕು.

ನಮ್ಮ ದೇಶವನ್ನು ಅನೇಕ ವರ್ಷಗಳ ಕಾಲ ಬ್ರಿಟಿಷರು ಆಳ್ವಿಕೆ ಮಾಡಿದರು. ಬ್ರಿಟಿಷರಿಂದ ಸ್ವತಂತ್ರ ಪಡೆಯಲು ಅನೇಕ ಮಹನೀಯರಾದ ಮಹಾತ್ಮ ಗಾಂಧಿ, ಲಾಲಲಜಪತರಾಯ್, ಸುಭಾಷ್ ಚಂದ್ರಬೋಸ್, ಸರ್ದಾರ್ ವಲ್ಲಭ ಬಾಯ್ ಪಟೇಲ್ ಮುಂತಾದವರು ತಮ್ಮ ಪ್ರಾಣವನ್ನೇ ಮುಡಿಪಾಗಿಟ್ಟು ಹೋರಾಡಿದರು. ಅಂತಹ ಮಹನೀಯರ ದೇಶಭಕ್ತಿಯ ಬಗ್ಗೆ ತಿಳಿಯಬೇಕು.ಭಾರತೀಯರಾದ ನಾವೆಲ್ಲರೂ ದ್ವೇಷ ಅಸೂಯೆಗಳನ್ನು ಮರೆತು ಸ್ನೇಹಭಾವದಿಂದ ಇದ್ದರೆ ದೇಶದ ಜನರೆಲ್ಲರೂ ನೆಮ್ಮದಿಯಿಂದ ಇರಬಹುದು.**'ರಾಷ್ಟ್ರೀಯ ಹಬ್ಬಗಳ ಆಚರಣೆ ದೇಶದ ಭಾವೈಕ್ಯತೆಯ ಸಂಕೇತ.'**ಸ್ವತಂತ್ರ ದಿನಾಚರಣೆ, ಗಣರಾಜ್ಯೋತ್ಸವಗಳಂತಹ ರಾಷ್ಟ್ರೀಯ ಹಬ್ಬಗಳನ್ನು ಒಟ್ಟಾಗಿ ಆಚರಿಸಿದಾಗ ದೇಶದ ಬಗ್ಗೆ ಪ್ರೀತಿ, ಅಭಿಮಾನ ಏಕತೆಯ ಭಾವ ಮೂಡುತ್ತದೆ.ಕ್ರೀಡಾ ಸ್ಪರ್ಧೆಗಳು ಜನರಲ್ಲಿ ಭಾವೈಕ್ಯತೆ ಭಾವನೆ ಮೂಡಿಸುತ್ತದೆ.ಬೇರೆಬೇರೆ ರಾಜ್ಯದ ಜನರೆಲ್ಲ ಒಟ್ಟಾಗಿ ಕ್ರೀಡೆಗಳಲ್ಲಿ ಪಾಲ್ಗೊಂಡಾಗ **'ನಾವೆಲ್ಲರೂ ಒಂದೇ'** ಎಂಬ ಭಾವನೆ ಮೂಡುತ್ತದೆ.ಭಾರತೀಯರೆಲ್ಲರೂ ಭೇದ ಭಾವವಿಲ್ಲದೆ ಜನರೆಲ್ಲರೂ ಒಂದಾಗಿ ರಾಷ್ಟ್ರದ ಏಳಿಗೆಗಾಗಿ ಶ್ರಮಿಸುವ **'ಏಕತಾ ಮನೋಭಾವನೆ'** ಬೆಳೆಸಿಕೊಳ್ಳಬೇಕು.

## ಸಂಪರ್ಕ ಮಾಧ್ಯಮ ಉಪಯೋಗ – ದುಷ್ಪರಿಣಾಮ

ಹಿಂದೆ ಒಬ್ಬರನ್ನು ಮತ್ತೊಬ್ಬರು ಸಂಪರ್ಕಿಸಬೇಕಾದರೆ ಬಹಳ ಕಷ್ಟವಾಗುತ್ತಿತ್ತು.ಒಳ್ಳೆಯದಾಗಲಿ, ಕೆಟ್ಟದ್ದಾಗಲಿ ಸುದ್ದಿ ಕಳುಹಿಸಬೇಕಾದರೆ ಯಾರ ಮೂಲಕವಾದರು ಹೇಳಿ ಕಳುಹಿಸಬೇಕಿತ್ತು.ಸ್ವಲ್ಪ ಕಾಲದ ನಂತರ ಅಂಚೆ ಇಲಾಖೆ ಅಸ್ತಿತ್ವಕ್ಕೆ ಬಂತು.ಟೆಲಿಗ್ರಾಂ ಮೂಲಕ ಜನರಿಗೆ ಸುದ್ದಿ ತಲುಪುತ್ತಿತ್ತು. ಇತ್ತೀಚಿನ ದಿನಗಳಲ್ಲಿ ಕ್ಷಣಮಾತ್ರದಲ್ಲಿ ಸುದ್ದಿ ಹರಡುವ ಸಾಧನಗಳಾದ ಟಿ.ವಿ, ಮೊಬೈಲ್, ಈಮೇಲ್, ಟೆಲಿಫೋನ್ ಮತ್ತಿತರ ಸಂಪರ್ಕ ಸಾಧನಗಳು ಬಂದು ಯಾವುದೇ ವಿಷಯವನ್ನು ಯಾವುದೇ ದೇಶದ್ದೇ ಇರಲಿ ಅಲ್ಲಿಗೆ ಸಂಫರ್ಕ ಪಡದುಕ್ಷಣಾರ್ಧದಲ್ಲಿ ಸುದ್ದಿ ಪಡೆಯುವ ಕಳುಹಿಸುವ ವ್ಯವಸ್ಥೆ ಇದೆ. ಅಲ್ಲದೆ ದಿನಪತ್ರಿಕೆಗಳು, ರೇಡಿಯೋಗಳು ಕೂಡ ಸಂಪರ್ಕ ಸಾಧನಗಳಾಗಿವೆ.ಮೊಬೈಲ್‌ನಿಂದ ಕ್ಷಣಾರ್ಧದಲ್ಲಿ ಪ್ರಪಂಚದ ಯಾವ ಮೂಲೆಯಲ್ಲಿದ್ದರೂ ವಿಚಾರ ವಿನಿಮಯ ಮಾಡಿಕೊಳ್ಳಬಹುದು ಫೋಟೋ ಕೂಡ ತೆಗೆದುಕೊಳ್ಳಬಹುದು.

ದುಷ್ಪರಿಣಾಮ: ಪ್ರತಿಯೊಂದು ವಸ್ತುವಿನಲ್ಲಿ ಕೆಟ್ಟದ್ದು ಒಳ್ಳೆಯದು ಎರಡು ಇರುತ್ತದೆ. ಮೊಬೈಲ್ ಎಷ್ಟು ಉಪಯುಕ್ತವೋ ಅಷ್ಟೆ ಕೆಟ್ಟದ್ದು.ಅಶ್ಲೀಲ ಚಿತ್ರಗಳು, ಅಸಭ್ಯ ಸುದ್ದಿ, ಅಶ್ಲೀಲ ನಗೆಹನಿಗಳು ಇತ್ಯಾದಿ ಮನಸ್ಸಿನ ಮೇಲೆ ಕೆಟ್ಟ ಪರಿಣಾಮ ಬೀರಿ ಜನರಲ್ಲಿ ವಿರಸ, ದ್ವೇಷ ಬೆಳೆಯಲು ಸಾಧ್ಯವಾಗಿದೆ.ದುಷ್ಟರಿಂದ ಹೇಗೆ ದೂರವಿರಬೇಕೋ ಹಾಗೆಯೇ ದುಷ್ಪರಿಣಾಮ ಉಂಟುಮಾಡುವ, ದುರಾಲೋಚನೆ ಬೆಳೆಸುವ ವಸ್ತುಗಳಿಂದ ದೂರವಿರಬೇಕು. ಮೊಬೈಲ್ ಸಂಪರ್ಕ ಸಾಧನಗಳಲ್ಲಿ ಜನಪ್ರಿಯವೂ ಅಗತ್ಯವೂ ಆಗಿದೆ ಆದರೆ ಅದನ್ನು ಒಳ್ಳೆಯ ಕೆಲಸಗಳಿಗೆ ಮಾತ್ರ ಬಳಸಿ ನೆಮ್ಮದಿಯಿಂದ ಬಾಳಬೇಕು ಅಷ್ಟೆ.

## ಬಾಹ್ಯಾಕಾಶ ವಿಜ್ಞಾನ

ಇತ್ತೀಚಿನ ದಿನಗಳಲ್ಲಿ ಭಾರತೀಯ ವಿಜ್ಞಾನಿಗಳು ಅನೇಕ ರೀತಿಯ ಹೊಸ ಹೊಸ ಪ್ರಯೋಗಗಳನ್ನು ನಡೆಸಿ ನಾನಾ ರೀತಿಯ ಉಪಗ್ರಹಗಳನ್ನು ಬಾಹ್ಯಾಕಾಶಕ್ಕೆ ಕಳೂಹಿಸುತ್ತಿರುವುದು ಸಂತೋಷದ ಸಂಗತಿಯಾಗಿದೆ.ಚಂದ್ರ ಮತ್ತು ಮಂಗಳ ಗ್ರಹಗಳ ಮೇಲೆ ಉಪಗ್ರಹಗಳ ಮೂಲಕ ಕಾಲಿಟ್ಟಿದ್ದು ಅಲ್ಲಿಯ ವಾತಾವರಣ ಸನ್ನಿವೇಶಗಳ ಬಗ್ಗೆ ವಿವರಣೆಗಳನ್ನು ಬಾಹ್ಯಾಕಾಶದ ಉಪಗ್ರಹದ ಮೂಲಕ ತಿಳಿಯಲಾಗುತ್ತಿದೆ.ಇವೆಲ್ಲ ಸಾಧಾರಣವಾದ ಸಂಗತಿಯಲ್ಲ.ನಮ್ಮ ವಿಜ್ಞಾನಿಗಳುಇನ್ನೂ ಸಾಕಷ್ಟು ಇಂತಹ ಆವಿಷ್ಕಾರಗಳನ್ನು ಮಾಡಿ ಇಡೀ ಪ್ರಪಂಚಕ್ಕೆ ಮಾದರಿಯಾಗಬೇಕು. ಪ್ರೊ|| ಸಿ.ಎನ್. ಆರ್. ರಾವ್ ಅವರಿಗೆ 'ಭಾರತರತ್ನ' ಎಂಬ ಉನ್ನತ ಪ್ರಶಸ್ತಿಯನ್ನು ಕಳೆದ ವರ್ಷವಷ್ಟೆ ಕೊಟ್ಟು ಭಾರತ ಸರ್ಕಾರ ಅವರನ್ನು ಗೌರವಿಸಿದೆ. ಪ್ರಸಕ್ತ ವರ್ಷ ಎಸ್. ಜೆ.ಸಿ.ಇಂಜಿನಿಯರಿಂಗ್ ಕಾಲೇಜಿನ ಯುವ ವಿಜ್ಞಾನಿ ಕ್ಷುದ್ರಗ್ರಹ ಒಂದನ್ನು ಕಂಡು ಹಿಡಿದು ಪ್ರಪಂಚವೇ ತನ್ನತ್ತ ತಿರುಗಿ ನೋಡುವಂತೆ ಮಾಡಿದ್ದಾರೆ.ಈ ವಿಜ್ಞಾನಿಗಳುಮುಂದೆಯೂ ದೇಶದ ಬೆನ್ನೆಲುಬಾಗಿ ನಿಂತು, ಬಾಹ್ಯಾಕಾಶದಲ್ಲಿ ಹೊಸ ಹೊಸ ಆವಿಷ್ಕಾರ ಮಾಡುವಂತಾಗಲಿ.

ಬೆಂಗಳೂರು ಮತ್ತು ಶ್ರೀ ಹರಿಕೋಟಾ ಎರಡು ಬಾಹ್ಯಾಕಾಶ ಸಂಶೋಧನಾ ಕೇಂದ್ರಗಳು ಹಾಗೆಯೇ ಹಾಸನದಲ್ಲಿ ನಿಯಂತ್ರಣ ಕೇಂದ್ರವು ಸ್ಥಾಪನೆಯಾಗಿವೆ.ಇಸ್ರೋದ ಅಧ್ಯಕ್ಷರಾಗಿದ್ದ ಡಾ|| ಯು.ಆರ್.ರಾವ್ ಮತ್ತು ಇತ್ತೀಚೆಗೆ ಅಧ್ಯಕ್ಷರಾಗಿ ಬಂದ ಡಾ|| ಕೆ.ಕಸ್ತೂರಿ ರಂಗನ್ ಅವರುಗಳು ಪ್ರಪಂಚದ ಪ್ರಖ್ಯಾತ ಬಾಹ್ಯಾಕಾಶ ವಿಜ್ಞಾನಿಗಳಾಗಿದ್ದಾರೆ.

## ಕೃತಕ ಉಪಗ್ರಹಗಳು

ಭಾರತವು **'ಬಾಹ್ಯಾಕಾಶ ವಿಜ್ಞಾನ'**ದಲ್ಲಿ ಮಾಡಿರುವ ಸಾಧನೆ ಮೆಚ್ಚುವಂತದ್ದು.ಉಪಗ್ರಹಗಳ ಪರಿಚಯ ವಿಜ್ಞಾನ ಓದುವುದಕ್ಕೆ ಪ್ರಾರಂಭವಾದಾಗಲೇ ಸ್ವಲ್ಪ ಮಟ್ಟಿಗೆ ತಿಳಿದಿದೆ.ಕೃತಕ ಉಪಗ್ರಹಗಳ ಸಹಾಯದಿಂದ ಛಾಯಾಚಿತ್ರಗಳು, ದೂರದರ್ಶನ ಪ್ರಸಾರ, ದೂರವಾಣಿಸಂಪರ್ಕ ಇತ್ಯಾದಿಗಳ ಸಂದೇಶ, ಸಂಕೇತಗಳನ್ನು ಬಹುದೂರದವರೆಗೂ ಸಾಗಿಸಲು ಸಾಧ್ಯವಾಗುತ್ತದೆ.

ಬಾಹ್ಯಾಕಾಶ ಸಂಶೋಧನೆಗಾಗಿಯೇ 'ಬಾಹ್ಯಾಕಾಶ ಅಂತರಿಕ್ಷ ವಿಜ್ಞಾನ ಸಂಸ್ಥೆ' ಸ್ಥಾಪನೆಯಾಗಿದೆ. ಕೃತಕ ಉಪಗ್ರಹಗಳನ್ನು ಬಾಹ್ಯಾಕಾಶದಲ್ಲಿ ಸ್ಥಾಪನೆ ಅದರ ಮೂಲಕ ಸಂಪರ್ಕ ಏರ್ಪಡಿಸುವುದು ಇದರ ಮುಖ್ಯ ಉದ್ದೇಶ ಭಾರತವು ಪ್ರಥಮ ಬಾರಿಗೆ 1975ರಲ್ಲಿ ಆರ್ಯಭಟ–1, 1975ರಲ್ಲಿ ಆರ್ಯಭಟ– 3ನ್ನು 1979ರಲ್ಲಿ ಭಾಸ್ಕರ –1 ರೋಹಿಣಿ–12 ಉಪಗ್ರಹಗಳು, 1982ರಲ್ಲಿ ಇನ್ಸಾಟ್ –1 ಎ ಮುಂತಾದ ಉಪಗ್ರಹಗಳನ್ನು ಉಡಾಯಿಸಿ ಅದರ ಲಾಭವನ್ನು ಪಡೆಯುತ್ತಿದೆ. ಉಪಗ್ರಹಗಳು ದೇಶದ ಸಮಸ್ಯೆಗಳಿಗೆ ಪರಿಹಾರವನ್ನು ಒದಗಿಸುವಲ್ಲಿ ಅಂತರಾಷ್ಟ್ರೀಯ ಮಟ್ಟದಲ್ಲಿ ದೇಶವನ್ನು ಕೊಂಡೊಯ್ಯಲು ಪ್ರಮುಖ ಪಾತ್ರವಹಿಸುತ್ತವೆ.

## ಕಂಪ್ಯೂಟರ್ – ಅವಶ್ಯಕತೆ – ಅನುಕೂಲತೆ

**'ಕಂಪ್ಯೂಟರ್'**– ಎಂದರೆ **ಗಣಕಯಂತ್ರ** ಇದು ಆಧುನಿಕ ವಿಜ್ಞಾನದ ಅಪೂರ್ವ ಕೊಡುಗೆ ಕಂಪ್ಯೂಟರಿಗೆ ನಿಘಂಟಿನಲ್ಲಿ **'ಎಲೆಕ್ಟ್ರಾನಿಕ್ ಕ್ಯಾಲ್ಕುಲೇಟಿಂಗ್ ಮೆಷಿನ್'** ಎನ್ನುವ ಅರ್ಥವಿದೆ.

ಕಂಪ್ಯೂಟರ್ ಲೆಕ್ಕ ಹಾಕುತ್ತದೆ, ಹಾಗೆಯೇ ಜಟಿಲವಾದ ಸಮಸ್ಯೆಗಳನ್ನು ಶೀಘ್ರವಾಗಿ, ನಿಖರವಾಗಿ ಬಿಡಿಸುತ್ತದೆ. ಯಾವುದೇ ಗೊಂದಲವಿಲ್ಲದೆ ಅದು ಹಲವು ಕ್ರಿಯೆಗಳನ್ನು ಏಕಕಾಲದಲ್ಲಿ ಮಾಡುತ್ತದೆ.

ಅವಶ್ಯಕತೆ : ಇಂದು ಗಣಕಯಂತ್ರಗಳನ್ನು ವಿಜ್ಞಾನ, ವೈದ್ಯಕೀಯ, ಇಂಜಿನಿಯರಿಂಗ್, ವಾಣಿಜ್ಯ ಕೈಗಾರಿಕೆ, ಆಡಳಿತ, ಶಿಕ್ಷಣ ಹೀಗೆ ಹಲವು ಕ್ಷೇತ್ರಗಳಲ್ಲಿ ಬಳಸಲಾಗುತ್ತದೆ. ಹವಾಮಾನ ಮಾಹಿತಿಗಾಗಿ ಭೂಉಪಗ್ರಹಗಳನ್ನು ಹಾರಿ ಬಿಡಲಾಗುವುದು, ಮಾಹಿತಿಗಳನ್ನು ವಿಶ್ಲೇಷಿಸಲು ಗಣಕ ಯಂತ್ರಗಳನ್ನು ಬಳಸಲಾಗುತ್ತಿದೆ..

ಇಂದು ಗಣಕಯಂತ್ರಗಳು ಮಾಡದೇ ಇರುವ ಕೆಲಸವೇ ಇಲ್ಲವೆನ್ನುವಂತಾಗಿದೆ.ನಿಖರ ಮಾಹಿತಿಗಳನ್ನು ಒದಗಿಸಿದರೆ ಸಾಕು, ನಿಮಿಷ ಮಾತ್ರದಲ್ಲಿ ಗಣಕಯಂತ್ರ ಒಂದೇ ಹಲವು ಜನರು ಮಾಡುವ ಕೆಲಸ ಮಾಡಿ ಮುಗಿಸುತ್ತದೆ.

ಅನುಕೂಲತೆ : ಹೊಸ ಯಂತ್ರಗಳ ನಿರ್ಮಾಣ, ಮಾಹಿತಿ ಪ್ರಧಾನ, ಎಲೆಕ್ಟ್ರಾನಿಕ್ ಉಪಕರಣಗಳ ಬಳಕೆ ವ್ಯಾಪಕವಾಗುತ್ತಿದೆ. ಕಂಪ್ಯೂಟರ್ ತಯಾರಕರು, ಕಲಿಯುವವರು, ಕಲಿಸುವವರು ಹೀಗೆ ಅದಕ್ಕೆ ಸಂಬಂಧಿಸಿದ ವಿವಿಧ ವಿಭಾಗಗಳಲ್ಲಿ ಉದ್ಯೋಗಾವಕಾಶಗಳು ಹೆಚ್ಚಾಗಿವೆ.ಕೆಲವೇ ವರ್ಷಗಳಲ್ಲಿ ಗಣಕಯಂತ್ರ ಇಡೀ ವಿಶ್ವದಲ್ಲೇ ಶ್ರೇಷ್ಠ ಸ್ಥಾನಮಾನವನ್ನು ಗಳಿಸುವುದರಲ್ಲಿ ಯಶಸ್ವಿಯಾಗಿದೆ ಎಂದರೆ ತಪ್ಪಾಗದು.